ಸಂಪುಟ: 22, ಸಂಚಿಕೆ: 213, ಪುಟಗಳು: 8, ಮಂಗಳವಾರ, 13 ಮೇ 2025 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

₹3



ವೇಣು ಸಾರಥ್ಯದಲ್ಲಿ...

ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines

### ಸುಭಾಷಿತ

ಅವಮಾನಗಳು ಕೆಲವರಿಗೆ ಸಾವಿನೆಡೆಗೆ ದಾರಿಯಂತೆ ಕಾಣಿಸಿದರೆ, ಇನ್ನು ಕೆಲವರಿಗೆ ಸಾಧಿಸಲು ಸವಾಲಾಗಿ ಕಾಣುತ್ತವೆ.

### ಪಂಚಾಂಗ

(ಮಂಗಳವಾರ 13 ಮೇ-2025)

- ಶ್ರೀ ವಿಶ್ವಾವಸು ನಾಮ ಸಂವತ್ಸರ,
- ಉತ್ತರಾಯಣ, ವಸಂತ ಋತು,
- ವೈಶಾಖ ಮಾಸ, ಕೃಷ್ಣ ಪಕ್ಷ,
- ವಾರ: ಮಂಗಳವಾರ,
- ತಿಥಿ: ಪಾಡ್ಯ, • ನಕ್ಷತ್ರ: ವಿಶಾಖ,
- ಯೋಗ: ಪರಿಗ,
- ಕರಣ: ಬಾಲವ,
- ರಾಹುಕಾಲ: 3:30 ರಿಂದ 5:05
- ಗುಳಿಕಕಾಲ: 12:20 ರಿಂದ 1:55
- ಯಮಗಂಡಕಾಲ: 9:10 ರಿಂದ 10:45

## ಸಂಕ್ಷಿಪ್ತ ಸುದ್ದಿ

### ಮೋದಿ ಮನೆ ಮೇಲೆ ಮೊದಲು ಬಾಂಬ್ ಹಾಕಿ ಎಂಬ ವಿಡಿಯೋ ವೈರಲ್

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪ್ರಚೋದನಾಕಾರಿ ಹೇಳಿಕೆಯ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್ಲೋಡ್ ಮಾಡಿದ್ದ ಯುವಕನನ್ನು ಬೆಂಗಳೂರಿನ ಬಂಡೆಪಾಳ್ಯ ಪೊಲೀಸರು ಬಂಧಿಸಿದ್ದಾರೆ. ವಿಡಿಯೋ ವೈರಲ್ ಆಗುತ್ತಿದ್ದಂತೆಯೇ ಆರೋಪಿ ನವಾಜ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು ಆತನನ್ನು ಬಂಧಿಸಿದ್ದಾರೆ.



» ಬೆಂಗಳೂರಿನಲ್ಲಿ ಯುವಕನ ಬಂಧನ

ಪುಟ 2

### ಹೊತ್ತಿ ಉರಿದ ಗೋದಾಮು 30 ಕೋಟಿ ಮೌಲ್ಯದ ಆಯಿಲ್ ಬೆಂಕಿಗಾಹುತಿ



**ನೆಲಮಂಗಲ:** ಶಾರ್ಟ್ ಸರ್ಕ್ಯೂಟ್‌ನಿಂದ ಆಯಿಲ್ ಗೋದಾಮು ಬೆಂಕಿಗಾಹುತಿಯಾಗಿರುವ ಘಟನೆ ನೆಲಮಂಗಲ ಬಳಿಯ ಅಡಕಮಾರನಹಳ್ಳಿ ಬಳಿ ಘಟನೆ ನಡೆದಿದೆ.

ಶಲ್ ಕಂಪನಿಗೆ ಸೇರಿದ ಆಯಿಲ್ ಗೋದಾಮು ಧಗಧಗನೆ ಹೊತ್ತಿ ಉರಿದಿದೆ. ಬೆಳಗಿನ ಜಾವ ಮೂರು ಗಂಟೆಯಲ್ಲಿ ಈ ಅವಘಡ ಸಂಭವಿಸಿದೆ. ನೆಲಮಂಗಲ, ಪೀಣ್ಯಾ, ಯಶವಂತಪುರ ಭಾಗದ 8 ಕ್ಕೂ ಹೆಚ್ಚು ಅಗ್ನಿಶಾಮಕ ತಂಡದಿಂದ ಬೆಂಕಿ ನಂದಿಸುವ ಕಾರ್ಯ ನಡೆದಿದೆ. ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಬೆಂಕಿಯ ನರ್ತನ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿದೆ. ಅಕ್ಕದ ಗೋದಾಮು ಮನೆಗೆ ಬೆಂಕಿ ತಗುಲುವ ಆತಂಕ ಎದುರಾಗಿದೆ. ಸರಿಸುಮಾರು 30 ಕೋಟಿ ರೂಪಾಯಿ ಮೌಲ್ಯದ ಆಯಿಲ್ ಬೆಂಕಿಗಾಹುತಿ ಆಗಿರಬಹುದು ಎನ್ನಲಾಗಿದೆ.

ಪುಟ 2

### ಆಪರೇಷನ್ ಸಿಂಧೂರ ನಿಂತಿಲ್ಲ ಪ್ರಧಾನಿ ಮೋದಿ ಹೇಳಿಕೆ

# ಉಗ್ರರು, ಪಾಕ್‌ಗೆ ಎಚ್ಚರಿಕೆ



**ನವದೆಹಲಿ:** ನರೇಂದ್ರ ಮೋದಿ ಇವತ್ತು ಪಾಕಿಸ್ತಾನ ಹಾಗೂ ಉಗ್ರಗಾಮಿಗಳ ವಿರುದ್ಧ ಕಟುವಾಗಿ ವಾಗ್ದಾಳಿ ನಡೆಸಿದರು. ಭಾರತ ಆರಂಭಿಸಿದ ಆಪರೇಷನ್ ಸಿಂದೂರ ಇನ್ನೂ ಅಂತ್ಯವಾಗಿಲ್ಲ. ಭಯೋತ್ಪಾದನೆ ಮತ್ತು ಅದರ ಪ್ರಾಯೋಜಕರಿಗೆ ಅವರದ್ದೇ ಭಾಷೆಯಲ್ಲಿ ಭಾರತ ಉತ್ತರ ನೀಡುತ್ತದೆ ಎಂದು ಪ್ರಧಾನಿಗಳು ಹೇಳಿದರು. ಆಪರೇಷನ್ ಸಿಂದೂರ ಶುರುವಾದ ಬಳಿಕ ಅವರು ಮೊದಲ ಬಾರಿಗೆ ಸಾರ್ವಜನಿಕವಾಗಿ ಭಾಷಣ ಮಾಡಿರುವುದು. ಈ ಭಾಷಣದಲ್ಲಿ ಅವರು, ಪಾಕಿಸ್ತಾನವನ್ನು ತೀವ್ರ ರೀತಿಯಲ್ಲಿ ತರಾಟೆಗೆ ತೆಗೆದುಕೊಂಡರು. ಭಾರತದ ಮಿಲಿಟರಿ ಕಾರ್ಯಾಚರಣೆಗೆ ತತ್ತರಗೊಂಡು ಪಾಕಿಸ್ತಾನ ಶಾಂತಿಗಾಗಿ ವಿಶ್ವ ನಾಯಕರ ಬಳಿಕ ಬಿಕ್ಷೆ ಕೇಳಬೇಕಾಗಿ ಬಂದು ಎಂದು ಲೇವಡಿ ಮಾಡಿದರು.

**ನೀರು ಮತ್ತು ರಕ್ತ ಒಟ್ಟಿಗೆ ಹರಿಯಲು ಸಾಧ್ಯವಿಲ್ಲ:** ಈ ಮೇಲಿನವು ನರೇಂದ್ರ ಮೋದಿ ಅವರ ಭಾಷಣದ ಕೆಲ ಪ್ರಮುಖ ಅಂಶಗಳು. ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಬರಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಪ್ರಧಾನಿಗಳು ಪಾಕಿಸ್ತಾನಕ್ಕೆ ದೊಡ್ಡ ಸಂದೇಶ ರವಾನಿಸಿದ್ದಾರೆ. ಮಾತುಕತೆ ಬೇಕೆಂದರೆ ಭಯೋತ್ಪಾದನೆಗೆ ಬೆಂಬಲ ನಿಲ್ಲಿಸಿ ಎನ್ನುವ ಖಡಕ್ ಸಂದೇಶ ಅದು.

### ಮೋದಿ ಭಾಷಣದ ಹೈಲೈಟ್ಸ್

- » ಆಪರೇಷನ್ ಸಿಂದೂರದ ಯಶಸ್ವಿಯು ಭಾರತದ ನಾರಿ ಶಕ್ತಿಗೆ ಮುಡಿಪು
- » ಬಹವಾಲಪುರ್ ಮತ್ತು ಮುರಿಡ್ಕೆಯು ಭಯೋತ್ಪಾದನೆಯ ವಿಶ್ವವಿದ್ಯಾಲಯ. ಇಡೀ ಪಾಕಿಸ್ತಾನವು ಉಗ್ರ ಕಾರ್ಯಾಲಯ.
- » ಪಾಕಿಸ್ತಾನ ನಮ್ಮ ಹೆಣ್ಮಕ್ಕಳ ಸಿಂದೂರ ಅಳಿಸಲು ಯತ್ನಿಸಿತು. ನಾವು ಅವರ ಭಯೋತ್ಪಾದನಾ ಕೇಂದ್ರಗಳನ್ನೇ ಬುಡಮೇಲು ಮಾಡಿದೆವು.
- » ಭಾರತದ ಸೇನಾ ಪಡೆಗಳ ಗುರಿ ಶತಕ ದಾಟಿದೆ. ಪಾಕಿಸ್ತಾನಕ್ಕೆ ಅದಕ್ಕೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಲಾಗಿದೆ.
- » ಪಾಕಿಸ್ತಾನದ ಸೇನೆಯು ಭಾರತದ ಸೇನೆಗೆ ಯಾವ ಸಾಟಿಯೂ ಅಲ್ಲ.
- » ಪಾಕಿಸ್ತಾನವು ಬೆಂಬಲಿಸುವ ಉಗ್ರರ ಪ್ರತಿಯೊಂದು ಜಾಗವನ್ನೂ ಭಾರತದ ಸೇನಾ ಪಡೆಗಳು ತಲುಪಬಲ್ಲುವು.
- » ಪಾಕಿಸ್ತಾನವು ಭಾರತದ ದಾಳಿ ತಡೆಯಲಾಗದೆ ಶಾಂತಿಗಾಗಿ ಬೇಡುವ ಪರಿಸ್ಥಿತಿ ಬಂತು.
- » ಪಾಕಿಸ್ತಾನದ ಪರಮಾಣು ಬೆದರಿಕೆ ನಡೆಯಲ್ಲ. ಭಾರತವು ಉತ್ತರ ಕೊಟ್ಟೇ ಕೊಡುತ್ತದೆ. ಇದು ಹೊಸ ನಿಯಮ.
- » ಭಯೋತ್ಪಾದಕರಿಗೂ, ಅವರನ್ನು ಬೆಂಬಲಿಸುವವರಿಗೂ ಯಾವ ವ್ಯತ್ಯಾಸ ಇಲ್ಲ.
- » ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಸಾಧ್ಯವಿಲ್ಲ. ಭಯೋತ್ಪಾದನೆ ಮತ್ತು ವ್ಯಾಪಾರ ಒಟ್ಟಿಗೆ ಸಾಧ್ಯವಿಲ್ಲ.

## ಪರಮಾಣು ಬೆದರಿಕೆಗೆ ಖಡಕ್ ಸಂದೇಶ

**ನವದೆಹಲಿ:** ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಬಹಳ ಆಕ್ರೋಶ ಭರಿತವಾಗಿ ಮಾತನಾಡಿದ್ದಾರೆ. ಅಷ್ಟೇ ಅಲ್ಲ ಪ್ರತಿ ಮಾತಿನಲ್ಲೂ ವೈರಿಗಳಿಗೆ ಎಚ್ಚರಿಕೆ ಕೊಟ್ಟ ಪ್ರಧಾನಿ ಮೋದಿ, ಭಾರತದ ಸ್ಪಷ್ಟ ಸಂದೇಶವನ್ನು ಇಡೀ ವಿಶ್ವಕ್ಕೆ ಸಾರಿದ್ದಾರೆ. ಆಪರೇಷನ್ ಸಿಂದೂರ್ ಬಳಿಕ ಕತ್ತರಿಸಿ ಹೋಗಿದ್ದ ಪಾಕಿಸ್ತಾನ ಪರಮಾಣು ಅಸ್ತ್ರ ಬಳಕೆ ಮಾಡುವ ಬೆದರಿಕೆ ಹಾಕಿತ್ತು. ಇದನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಮೋದಿ, ಭಾರತ ನಮ್ಮ ಮೇಲೆ ದಾಳಿ ನಡೆಸಿದರೆ ನಾವು ಪರಮಾಣು ಅಸ್ತ್ರ ಬಳಕೆ ಮಾಡುತ್ತೇವೆ ಎಂದು ಪಾಕಿಸ್ತಾನ ಎಚ್ಚರಿಕೆ ನೀಡುತ್ತಿತ್ತು. ನಿಮ್ಮ ಅಣ್ವಸ್ತ್ರ ಬೆದರಿಕೆಗೆ ನಾವು ಜಗ್ಗಲ್ಲ, ಬಗ್ಗಲ್ಲ. ನಾವು ಯಾವ ರೀತಿ ಪ್ರತಿಕ್ರಿಯೆ ನೀಡಬೇಕೋ ನಾವು ಅದೇ ರೀತಿಯ ಪ್ರತಿಕ್ರಿಯೆ ನೀಡುತ್ತೇವೆ ಎಂದು ಹೇಳುವ ಮೂಲಕ ಭಾರತ ಎಲ್ಲದ್ದಕ್ಕೂ ಸಿದ್ಧವಿದೆ ಎಂಬ ಸಂದೇಶ ರವಾನಿಸಿದರು.

ಭಾರತ ಯಾವುದೇ ರೀತಿಯ ಪರಮಾಣು ಬೆದರಿಕೆಯನ್ನು ಸಹಿಸುವುದಿಲ್ಲ. ಭಾರತದ ಸರ್ಜಿಕಲ್ ದಾಳಿಗಳು ಪಾಕಿಸ್ತಾನದ ಯುದ್ಧ ಸಿದ್ಧತೆಗಳನ್ನು ಛಿದ್ರಗೊಳಿಸಿವೆ. ಬಹಾವಲ್ಪುರ್ ಮತ್ತು ಮುರಿಡ್ಕೆಯಲ್ಲಿನ ಭಯೋತ್ಪಾದಕ

ಪುಟ 2

### 3 ಸೇನೆ, ತಂತ್ರಜ್ಞರು, ಅಧಿಕಾರಿಗಳಿಗೆ

## ಮೋದಿ ಸೆಲ್ಯೂಟ್



**ನವದೆಹಲಿ:** ಆಪರೇಷನ್ ಸಿಂದೂರ್ ಯಶಸ್ವಿ ಕಾರ್ಯಾಚರಣೆ ಮತ್ತು ಪಾಕಿಸ್ತಾನದ ವಾಯುನೆಲೆಗಳ ಮೇಲೆ ಭಾರತದ ದಾಳಿ ಸೇರಿದಂತೆ ಹಲವು ವಿಷಯಗಳು ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಉದ್ದೇಶಿಸಿ ಮಾತಾಡಿದರು. ಈ ವೇಳೆ ಹಲವಾರ ವಿಚಾರಗಳ ಬಗ್ಗೆ ತಿಳಿಸಿದ್ದು, ಅದರಲ್ಲೂ ಮುಖ್ಯವಾಗಿ ಈ ಆಪರೇಷನ್ ಸಿಂದೂರವನ್ನು ದೇಶದ ಹೆಣ್ಣುಮಕ್ಕಳಿಗೆ ಸಮರ್ಪಣೆ ಮಾಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಭಾರತೀಯ ಮೂರು ಸೇನೆಗಳು, ತಂತ್ರಜ್ಞರು ಮತ್ತು ಅಧಿಕಾರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯರ ಪರವಾಗಿ ಧನ್ಯವಾದಗಳನ್ನು ತಿಳಿಸಿದ್ದಾರೆ.

ನಮ್ಮ ದೇಶದ ಮಹಿಳೆಯರ ಸಿಂದೂರವನ್ನು ಅಳಿಸಿದ್ರೆ ಏನಾಗುತ್ತೆ ಎಂದು ಆಪರೇಷನ್ ಸಿಂದೂರ ಮೂಲಕ ಉತ್ತರ ನೀಡಲಾಗಿದೆ. ಮೇ 6ರ ರಾತ್ರಿ, ಮೇ 7ರ ಬೆಳಗಿನ ಜಾವ ಆಪರೇಷನ್ ಸಿಂದೂರ ಕಾರ್ಯಚರಣೆ ನಡೆಸಲಾಯ್ತು. ನಾವು ನೇರವಾಗಿ ಭಯೋತ್ಪಾದಕ ತಾಣಗಳ ಮೇಲೆ ದಾಳಿ ನಡೆಸಲಾಯ್ತು. ಭಾರತ ಇಂತಹ ಮಹತ್ವದ ನಿರ್ಧಾರ ತೆಗೆದುಕೊಳ್ಳುವಂತೆ ಪಾಕಿಸ್ತಾನ ಕಲ್ಪನೆಯೂ ಮಾಡಿಕೊಂಡಿರಲಿಲ್ಲ. ಪಾಕಿಸ್ತಾನ ತನ್ನ ಕ್ಷಿಪಣಿ ಮತ್ತು ಡ್ರೋನ್‌ಗಳ ಮೂಲಕ ದಾಳಿ ನಡೆಸಿತು. ಇವುಗಳನ್ನು ನಾಶ ಪಡಿಸುವ ಮೂಲಕ ಪಾಕಿಸ್ತಾನಕ್ಕೆ ತಿರುಗೇಟು ನೀಡಲಾಗಿದೆ ಎಂದರು.

ಪುಟ 2

## ಹೆಣ್ಮಕ್ಕಳ ಸಿಂದೂರ ಅಳಿಸಿದರೆ ಪರಿಣಾಮ ಏನೆಂತ ಉಗ್ರರಿಗೆ ತೋರಿಸಿದ್ದೇವೆ

**ನವದೆಹಲಿ:** ನಮ್ಮ ವೈರಿಗಳಿಗೆ ಭಾರತೀಯ ಮಹಿಳೆಯರ ಸಿಂದೂರ ಅಳಿಸಿದರೆ ಏನಾಗುತ್ತದೆ ಎನ್ನುವ ಪಾಠ ಗೊತ್ತಾಗಿದೆ. ಸಿಂದೂರ ಎನ್ನುವುದು ಸಾಮಾನ್ಯದ ಸಂಗತಿ ಅಲ್ಲ. ಆಪರೇಷನ್ ಸಿಂದೂರ್ ನ್ಯಾಯದ ಅಖಂಡ ಪ್ರತಿಜ್ಞೆ ಆಗಿದೆ. ವೈರಿಗಳು ಆಪರೇಷನ್ ಸಿಂದೂರ ಇಷ್ಟು ಕಟುವಾಗಿರುತ್ತದೆ ಎಂದು ಎಣಿಸಿರಲಿಲ್ಲ ಎಂದು ನರೇಂದ್ರ ಮೋದಿ ಹೇಳಿದ್ದಾರೆ. ಆಪರೇಷನ್ ಸಿಂದೂರ ಕಾರ್ಯಾಚರಣೆ ಆರಂಭಗೊಂಡ ಬಳಿಕ ಪ್ರಧಾನಿಗಳು ಮೊದಲ ಬಾರಿಗೆ ದೇಶವನ್ನುದ್ದೇಶಿಸಿ ಮಾತನಾಡಿದ್ದಾರೆ. ಇಂದು ಸಂಜೆ 8 ಗಂಟೆಗೆ ಪ್ರಸಾರವಾದ ಭಾಷಣದಲ್ಲಿ ಅವರು ಆಪರೇಷನ್ ಸಿಂದೂರವನ್ನು ಯಶಸ್ವಿಯಾಗಿಸಿದ ಭಾರತೀಯ ಯೋಧರಿಗೆ ವಂದನೆಗಳನ್ನು ಸಲ್ಲಿಸಿದ್ದಾರೆ.

ನಂತರ, ಪ್ರಧಾನಿಗಳು ಭಯೋತ್ಪಾದಕರ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಭಾರತೀಯ ಹೆಣ್ಮಕ್ಕಳ ಸಿಂದೂರ ಅಳಿಸಿದರೆ ಏನು ಪರಿಣಾಮ ಆಗುತ್ತದೆ ಎಂಬುದು ಎಲ್ಲಾ ಉಗ್ರ ಸಂಘಟನೆಗಳಿಗೂ ಗೊತ್ತಾಗಿದೆ. ನಮ್ಮ ಸೇನಾಪಡೆಗಳು ಉಗ್ರರ ಶಿಬಿರಗಳ ಮೇಲೆ ನಿಖರ ದಾಳಿ ನಡೆಸಿವೆ. ದೇಶ ಒಗ್ಗಟ್ಟಾಗಿದ್ದಾಗ ಇಂತ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬಹುದು ಎಂದು ಮೋದಿ ಹೇಳಿದರು.

ಪುಟ 2

## ರಕ್ತ, ನೀರು ಒಟ್ಟಿಗೆ ಹರಿಯಲ್ಲ

**ನವದೆಹಲಿ:** ಪಾಕಿಸ್ತಾನದ ಜೊತೆ ಮಾತುಕತೆ ನಡೆಸುವುದೇ ಆದಲ್ಲಿ ಅದು ಭಯೋತ್ಪಾದನೆ ವಿಚಾರವಾಗಿ ಆಗುತ್ತದೆ, ಅಥವಾ ಪಿಒಕೆ (ಪಾಕ್ ಆಕ್ರಮಿತ ಕಾಶ್ಮೀರ) ವಿಚಾರವಾಗಿ ಆಗುತ್ತದೆ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆಪರೇಷನ್ ಸಿಂದೂರ ಶುರುವಾದ ಬಳಿಕ ಮೊದಲ ಬಾರಿಗೆ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿಗಳು, ಪಾಕಿಸ್ತಾನ ಹಾಗೂ ಅದರ ಉಗ್ರ ಕೃತ್ಯಗಳನ್ನು ಕಟುವಾಗಿ ಖಂಡಿಸಿದರು. ಮಾತುಕತೆಗೆ ಕೂರುವಂತೆ ಭಾರತವನ್ನು ಒತ್ತಾಯಿಸುತ್ತಿರುವ ಪಾಕಿಸ್ತಾನಕ್ಕೆ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಇರಲು ಸಾಧ್ಯ ಇಲ್ಲ. ವ್ಯಾಪಾರ ಮತ್ತು ಭಯೋತ್ಪಾದನೆ ಒಟ್ಟಿಗೆ ಆಗಲು ಸಾಧ್ಯವಿಲ್ಲ. ನೀರು ಮತ್ತು ರಕ್ತ ಒಟ್ಟಿಗೆ ಹರಿಯಲು ಸಾಧ್ಯ ಇಲ್ಲ ಎಂದು ನರೇಂದ್ರ ಮೋದಿ ಹೇಳಿದರು. ಈ ಮೂಲಕ, ಪಾಕಿಸ್ತಾನ ಭಾರತದ ಜೊತೆ ಮಾತುಕತೆಗೆ ಬರುವ ಆಸಕ್ತಿ ಇದ್ದರೆ ಭಯೋತ್ಪಾದನಾ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಡುವುದನ್ನು ನಿಲ್ಲಿಸಲಿ ಎನ್ನುವ ಖಡಕ್ ಸಂದೇಶವನ್ನು ಪ್ರಧಾನಿಗಳು ರವಾನಿಸಿದರು.

ಹಾಗೆಯೇ, ನೀರು ಮತ್ತು ರಕ್ತ ಒಟ್ಟಿಗೆ ಹರಿಯೋದಿಲ್ಲ ಎಂದು ಹೇಳುವ ಮೂಲಕ ಅವರು ಸಿಂಧೂ ನದಿ ನೀರನ್ನು ಪಾಕಿಸ್ತಾನಕ್ಕೆ ಬಿಡುವ ನಿರ್ಧಾರ ಸದ್ಯಕಂತೂ ಇಲ್ಲ ಎನ್ನುವ ಸಂದೇಶ ನೀಡಿದರು. ಪಹಲ್ಗಾಂ ಉಗ್ರ ದಾಳಿ ಬಳಿಕ ಪಾಕಿಸ್ತಾನದೊಂದಿಗೆ ಮಾಡಿಕೊಳ್ಳಲಾದ ಸಿಂಧೂ ಜಲ ಒಪ್ಪಂದದಿಂದ ಭಾರತ ಹಿಂದಕ್ಕೆ ಸರಿಯಿತು. ತನ್ನ ಅಣೆಕಟ್ಟೆಯಿಂದ ಪಾಕಿಸ್ತಾನಕ್ಕೆ ನೀರು ಹರಿಸುವುದನ್ನು ನಿಲ್ಲಿಸಿದೆ. ಈ ಸಿಂಧೂ ನದಿಯು ಪಾಕಿಸ್ತಾನದ ಶೇ. 40ರಷ್ಟು ಕೃಷಿಗೆ ಆಧಾರವಾಗಿದೆ. ಭಾರತದ ಈ ನಿರ್ಧಾರವು ಪಾಕಿಸ್ತಾನವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

## ದೇಶದ ಹೆಣ್ಣುಮಕ್ಕಳಿಗೆ 'ಆಪರೇಷನ್ ಸಿಂಧೂರ' ಅರ್ಪಿಸಿದ ಪ್ರಧಾನಿ ಮೋದಿ

**ನವದೆಹಲಿ:** ಆಪರೇಷನ್ ಸಿಂಧೂರ್ ಯಶಸ್ವಿ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಇಂದು (ಮೇ 12) ಮೊದಲ ಬಾರಿಗೆ ದೇಶವನ್ನುದ್ದೇಶಿಸಿ ಮಾತನಾಡಿದ್ದು, 'ಆಪರೇಷನ್ ಸಿಂಧೂರ' ದೇಶದ ಹೆಣ್ಣುಮಕ್ಕಳಿಗೆ ಸಮರ್ಪಣೆ ಮಾಡಿದ್ದಾರೆ. ಭಾರತ ಶೌರ್ಯ ಮತ್ತು ಸಂಯಮ ಎರಡನ್ನೂ ನೋಡಿದೆ. ಗುಪ್ತಚರ, ವೀರ ಸೈನಿಕರು, ವಿಜ್ಞಾನಿಗಳಿಗೆ ಸೆಲ್ಯೂಟ್ . ಪರಾಕ್ರಮಿ ಸೇನೆಗೆ ನನ್ನ ಸಲಾಂ. 'ಆಪರೇಷನ್ ಸಿಂಧೂರ' ದೇಶದ ಹೆಣ್ಣುಮಕ್ಕಳಿಗೆ ಸಮರ್ಪಣೆ. ಪಹಲ್ಗಾಮ್ ದಾಳಿ ಕ್ರೂರತೆ ಮತ್ತು ಬರ್ಬರವಾಗಿ ನಡೆದಿತ್ತು. ಕುಟುಂಬಸ್ಥರ ಮುಂದೆಯೇ ಪ್ರವಾಸಿಗರನ್ನು ಹತ್ಯೆ ಮಾಡಿದ್ದರು. ಹೆಣ್ಣುಮಕ್ಕಳ ಸಿಂಧೂರ್ ಅಳಿಸಿದ ಉಗ್ರರಿಗೆ ಈಗ ಗೊತ್ತಾಗಿದೆ. ಆಪರೇಷನ್ ಸಿಂಧೂರ ನ್ಯಾಯದ ಅಖಂಡ ಪ್ರತಿಜ್ಞೆಯಾಗಿದೆ ಎಂದು ಹೇಳಿದರು.




ಭಾರತೀಯ ಹೆಣ್ಮಕ್ಕಳ ಸಿಂದೂರ ಅಳಿಸಿದರೆ ಏನು ಪರಿಣಾಮ ಆಗುತ್ತದೆ ಎಂಬುದು ಎಲ್ಲಾ ಉಗ್ರ ಸಂಘಟನೆಗಳಿಗೂ ಗೊತ್ತಾಗಿದೆ. ವೈರಿಗಳು ಆಪರೇಷನ್ ಸಿಂದೂರ ಇಷ್ಟು ಕಟುವಾಗಿರುತ್ತದೆ ಎಂದು ಊಹಿಸಿರಲಿಲ್ಲ. ನಮ್ಮ ಸೇನಾಪಡೆಗಳು ಉಗ್ರರ ಶಿಬಿರಗಳ ಮೇಲೆ ನಿಖರ ದಾಳಿ ನಡೆಸಿವೆ. ದೇಶ ಒಗ್ಗಟ್ಟಾಗಿದ್ದಾಗ ಇಂತ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬಹುದು. ಉಗ್ರರು ನಮ್ಮ ಹೆಣ್ಣು ಮಕ್ಕಳ ಸಿಂಧೂರ ಅಳಿಸಿ ಹಾಕಿದರು. ಆದರೆ ನಾವು ಉಗ್ರರ ಅಡಗು ತಾಣವನ್ನೇ ಧ್ವಂಸ ಮಾಡಿದ್ದೇವೆ ನರೇಂದ್ರ ಮೋದಿ ಹೇಳಿದರು.

ದೇಶದ ಜನರು, ತಾಯಂದಿರಿಗೆ ಆಪರೇಷನ್ ಸಿಂದೂರವನ್ನು ಅರ್ಪಿಸುತ್ತೇನೆ. ರಜೆ ಹಿನ್ನೆಲೆ ಪಹಲ್ಗಾಮ್ ನಲ್ಲಿ ಕುಟುಂಬದೊಂದಿಗೆ ಜನರು ಸಮಯ ಕಳೆಯುತ್ತಿದ್ದರು. ಇಲ್ಲಿಗೆ ಬಂದ ಉಗ್ರರು,

ಪುಟ 2

### ಪೂಂಚ್‌ನಲ್ಲಿ ಪಾಕ್ ದಾಳಿ: ಅವಳಿ ಮಕ್ಕಳ ಸಾವು

## ಇಡೀ ಕುಟುಂಬವೇ ನಾಶ

**ಪೂಂಚ್:** ಜಮ್ಮು ಮತ್ತು ಕಾಶ್ಮೀರದ ಪೂಂಚ್‌ನಲ್ಲಿ ಪಾಕಿಸ್ತಾನಿ ಶೆಲ್ ದಾಳಿಯು ಇಡೀ ಕುಟುಂಬವನ್ನು ನಾಶಮಾಡಿದೆ. ಈ ದಾಳಿಯಲ್ಲಿ 12 ವರ್ಷದ ಅವಳಿ ಸಹೋದರ ಮತ್ತು ಸಹೋದರಿ ಜೋಯಾ ಮತ್ತು ಅಯಾನ್ ಸಾವನ್ನಪ್ಪಿದ್ದಾರೆ. ಪಾಕಿಸ್ತಾನದಿಂದ ಬಂದ ಶೆಲ್ ಮನೆಯ ಮೇಲೆ ಬಿದ್ದಾಗ ಈ ಅಪಘಾತ ಸಂಭವಿಸಿದೆ. ಕುಟುಂಬದ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಕೂಡ ಸ್ಥಳದಲ್ಲೇ ಸಾವನ್ನಪ್ಪಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಲಿ ಎಂದು ಈ ಕುಟುಂಬ ಕೇವಲ ಎರಡು ತಿಂಗಳ ಹಿಂದೆ ಪೂಂಚ್‌ಗೆ ಬಂದಿತ್ತು.

ಅವರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಆದರೆ ಮೇ 5 ರ ರಾತ್ರಿ, ಪಾಕಿಸ್ತಾನಿ ಸೇನೆಯ ಶೆಲ್ ದಾಳಿಯು ಅವರ ಪುಟ್ಟ ಕುಟುಂಬವನ್ನೇ ನಾಶ ಮಾಡಿತು.

ಆ ಮಕ್ಕಳ ತಂದೆ 48 ವರ್ಷದ ರಮೀಜ್ ಖಾನ್ ಪ್ರಸ್ತುತ ಜಮ್ಮು ಆಸ್ಪತ್ರೆಯ ಐಸಿಯುನಲ್ಲಿ ದಾಖಲಾಗಿದ್ದಾರೆ. ಅವರ ಸ್ಥಿತಿ ಗಂಭೀರವಾಗಿದ್ದು, ಮಕ್ಕಳ ಸಾವಿನ ಬಗ್ಗೆ ಅವರಿಗೆ ಇನ್ನೂ ಮಾಹಿತಿ ನೀಡಲಾಗಿಲ್ಲ. ತಾಯಿ ಉರ್ಷಾ ಖಾನ್ ಮಾನಸಿಕವಾಗಿ ಕುಸಿದಿದ್ದಾರೆ.



ಒಂದೆಡೆ ತಾಯಿಯ ನೋವು, ಮತ್ತೊಂದೆಡೆ ಐಸಿಯುನಲ್ಲಿ ದಾಖಲಾಗಿರುವ ಗಂಡನನ್ನು ನೋಡಿಕೊಳ್ಳುವುದು. ಜೋಯಾ ಮತ್ತು ಅಯಾನ್ ತುಂಬಾ ಬುದ್ಧಿವಂತ ಮತ್ತು ಪ್ರೀತಿಯ ಮಕ್ಕಳಾಗಿದ್ದರು ಎಂದು ಕುಟುಂಬದ ನಿಕಟ ಸಂಬಂಧಿಗಳಾದ ಮಾರಿಯಾ ಮತ್ತು ಸೊಹೈಲ್ ಖಾನ್ ಹೇಳಿದರು.

ಅಯಾನ್ ನನ್ನು ಉಳಿಸಲು ಪ್ರಯತ್ನಿಸಲಾಯಿತು ಆದರೆ ಅವನ ಕರುಳುಗಳು ಆಗಲೇ ದೇಹದಿಂದ ಹೊರಬಂದಿದ್ದವು. ಜೋಯಾ ಕೂಡ ತೀವ್ರವಾಗಿ ಗಾಯಗೊಂಡಿದ್ದರು.

ಪುಟ 2

### ಬೆಂಗಳೂರಿನ ಮಾಲ್‌ಗಳಲ್ಲಿ ಕಟ್ಟೆಚ್ಚರ

## ಭದ್ರತೆ ಹೆಚ್ಚಳ

**ಬೆಂಗಳೂರು:** ಪಹಲ್ಗಾಮ್ ಉಗ್ರ ದಾಳಿ ಹಾಗೂ ಅದರ ನಂತರ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂದೂರ್ ಬೆನ್ನಲ್ಲೇ ದೇಶದ ಒಳಗಡೆ ಭಯೋತ್ಪಾದಕ ದಾಳಿಗಳ ಬಗ್ಗೆ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಚನೆ ನೀಡಿವೆ. ಬೆಂಗಳೂರಿನಲ್ಲಿ ಅತಿಹೆಚ್ಚು ಜನರು ಸೇರುವ ಸ್ಥಳಗಳಲ್ಲಿ ಹೆಚ್ಚಿನ ಭದ್ರತಾ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆ ಸೂಚನೆ ನೀಡಿದ್ದು, ಸಿಲಿಕಾನ್ ಸಿಟಿಯ 41 ಮಾಲ್ ಗಳಲ್ಲಿ ಬಿಗಿ ಭದ್ರತೆ ಒದಗಿಸಲು ಸೂಚಿಸಲಾಗಿದೆ. ಹೀಗಾಗಿ ಮಾಲ್ ಗಳಿಗೆ ಬರುವ ಪ್ರತಿಯೊಬ್ಬರನ್ನೂ ಭದ್ರತಾ ಸಿಬ್ಬಂದಿ ತಪಾಸಣೆ ಮಾಡಿಯೇ ಒಳಗೆ ಬಿಡುತ್ತಿದ್ದಾರೆ. ಚಾಕು-ಚೂರಿ ಸೇರಿದಂತೆ ಅಪರಾಧ ಕೃತ್ಯಕ್ಕೆ ಬಳಕೆ ಮಾಡುವ



ಯಾವುದೇ ರೀತಿಯ ವಸ್ತುಗಳನ್ನು ಒಳಗೆ ಬಿಡದಿರಲು ಸೂಚನೆ ನೀಡಲಾಗಿದೆ.

ಭದ್ರತಾ ತಪಾಸಣೆ ಹೆಚ್ಚಿಸಿರುವುದು ಮಾತ್ರವಲ್ಲದೆ, ಮಾಲ್ ಹೊರಗೆ ಮತ್ತು ಒಳಗೆ ಹೆಚ್ಚಿನ ಕ್ಯಾಮರಾಗಳನ್ನು ಅಳವಡಿಸಲು ಸೂಚನೆ ನೀಡಲಾಗಿದೆ. ಸೆಕ್ಯುರಿಟಿ ಗಾರ್ಡ್ ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ಪುಟ 2

### ಬೆಂಗಳೂರಿನ ಕಂಪನಿಗಳಿಂದ ಸ್ಪೈ ಸೆಟಿಲೈಟ್‌ಗಳ ತಯಾರಿಕೆ

## ಪಾಕ್ ಮೇಲೆ ಹದ್ದಿನಗಣ್ಣಿಡಲು ಬಳಕೆ

**ಬೆಂಗಳೂರು:** ಪಾಕಿಸ್ತಾನದಿಂದ ಯಾವಾಗ ಬೇಕಾದರೂ ಕಿತಾಪತಿ ಎದುರಾಗುವ ಸಾಧ್ಯತೆ ದಟ್ಟವಾಗಿರುವ ಹಿನ್ನೆಲೆಯಲ್ಲಿ ಭಾರತವು ತನ್ನ ಶತ್ರು ದೇಶಗಳ ಮೇಲೆ ಹದ್ದಿನ ಕಣ್ಣಿಡಲು ಸರ್ವೇಲೆನ್ಸ್ ಸೆಟಿಲೈಟ್‌ಗಳನ್ನು ಹೆಚ್ಚೆಚ್ಚು ಸಂಖ್ಯೆಯಲ್ಲಿ ನಿಯೋಜಿಸಲು ಹೊರಟಿದೆ. ಮುಂದಿನ ನಾಲ್ಕೈದು ವರ್ಷದಲ್ಲಿ ನಿರ್ಮಾಣವಾಗುವ ಉದ್ದೇಶವಿದ್ದ ಸ್ಪೈ ಸೆಟಿಲೈಟ್ ಗಳನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ತಯಾರಿಸಿ ಆಗಸದಲ್ಲಿ ನಿಯೋಜಿಸುವ ಇರಾದೆಯಲ್ಲಿ ಸರ್ಕಾರ ಇದೆ. ವರದಿ ಪ್ರಕಾರ, ಕೆಲ ಸ್ಪೈ ಸೆಟಿಲೈಟ್ ಗಳ ತಯಾರಿಕೆಗೆ ಮೂರು ಕಂಪನಿಗಳಿಗೆ ನೀಡಿದ್ದ ಡೆಡ್ ಲೈನ್ ನ ಅವಧಿಯನ್ನು ಕಡಿಮೆಗೊಳಿಸಲಾಗಿದೆ. ಈ ಮೂರು ಕಂಪನಿಗಳಲ್ಲಿ ಎರಡು ಬೆಂಗಳೂರಿನದ್ದಾಗಿವೆ.

ಹೈದರಾಬಾದ್ ಮೂಲದ ಅನಂತ್ ಟೆಕ್ನಾಲಜೀಸ್, ಬೆಂಗಳೂರು ಮೂಲದ ಸೆಂಟಮ್ ಎಲೆಕ್ಟ್ರಾನಿಕ್ಸ್ ಮತ್ತು ಆಲ್ಫಾ ಡಿಸೈನ್ ಟೆಕ್ನಾಲಜೀಸ್ ಸಂಸ್ಥೆಗಳು ಸರ್ವೇಲೆನ್ಸ್ ಸೆಟಿಲೈಟ್ ಗಳನ್ನು ತಯಾರಿಸಲು ಗುತ್ತಿಗೆ ಪಡೆದಿದ್ದುವು. 2028ರ ಕೊನೆಗೆ ಈ ಸೆಟಿಲೈಟ್ ಗಳನ್ನು ತಯಾರಿಸಿಕೊಡಬೇಕು. ಆದರೆ, ಗಡುವನ್ನು



12-18 ತಿಂಗಳಿಗೆ ಪರಿಷ್ಕರಿಸಲಾಗಿದೆ. ಅಂದರೆ, 2028 ಬದಲು 2026ರಷ್ಟರಲ್ಲಿ ಈ ಸ್ಪೈ ಉಪಗ್ರಹಗಳನ್ನು ತಯಾರಿಸಬೇಕು ಎಂದು ಸರ್ಕಾರ ಸೂಚಿಸಿದೆ ಎಂದು ಮನಿ ಕಂಟ್ರೋಲ್ ವೆಬ್ ಸೈಟ್ ನಲ್ಲಿ ವರದಿಯಾಗಿದೆ.

2024ರ ಅಕ್ಟೋಬರ್ ನಲ್ಲಿ ಸರ್ಕಾರವು ಬಾಹ್ಯಾಕಾಶ ಆಧಾರಿತ ಸರ್ವೇಲೆನ್ಸ್-3 ಮಿಷನ್ ಅನ್ನು ಆರಂಭಿಸಿತು. 3 ಬಿಲಿಯನ್ ಡಾಲರ್ ನ ಈ ಯೋಜನೆ ಅಡಿ 52 ಸೆಟಿಲೈಟ್ ಗಳ ಜಾಲವನ್ನು ಭೂಕಕ್ಷೆಯಲ್ಲಿ ಸೇರಿಸುವ ಉದ್ದೇಶ ಇದೆ.

ಪುಟ 2

### ಮಳೆಗಾಲದಲ್ಲಿ ಅಂಗಡಿ ಕುಸಿಯಬಹುದು ಎಂಬ ಕಾರಣ ನೀಡಿ ಮಳಿಗೆ ಹಸ್ತಾಂತರಿಸಲು ಸೂಚನೆ

# ಪಪಂನಿಂದ ಮಳಿಗೆ ಹಸ್ತಾಂತರಿಸಲು 6 ಮಳಿಗೆದಾರರಿಗೆ ನೋಟಿಸ್

**ಹುಳಿಯಾರು:** ಹುಳಿಯಾರು ಪಟ್ಟಣ ಪಂಚಾಯ್ತಿ ಮತ್ತೆ ವಾಣಿಜ್ಯ ಮಳಿಗೆಗಳ ವಿಚಾರಕ್ಕೆ ಕೈ ಹಾಕಿದೆ. ಕಳೆದ ಕೆಲ ತಿಂಗಳ ಹಿಂದೆ ನೋಟಿಸ್ ನೀಡದೆ ಮಳಿಗೆಗಳಿಗೆ ಬೀಗ ಹಾಕಿ ಪೇಚಿಗೆ ಸಿಲುಕಿ ಮರುದಿನವೇ ಬೀಗ ತೆಗೆಸಿ ಸುದ್ದಿಯಾಗಿತ್ತು. ಈಗ 6 ಮಳಿಗೆದಾರರಿಗೆ ತೆರವು ಮಾಡಲು ನೋಟಿಸ್ ನೀಡಿ ಮತ್ತೆ ಸಾರ್ವಜನಿಕ ಚರ್ಚೆಗೆ ಕಾರಣವಾಗಿದೆ.

ಹುಳಿಯಾರು ಪಟ್ಟಣ ಪಂಚಾಯಿಯು 4 ಬ್ಲಾಕ್ ನಲ್ಲಿ ಒಟ್ಟು 52 ಅಂಗಡಿ ಮಳಿಗೆಗಳನ್ನು ಹೊಂದಿದ್ದು ಹಲವಾರು ವರ್ಷಗಳ ಹಿಂದೆಯೇ ಹರಾಜು ಪ್ರಕ್ರಿಯೆ ಮೂಲಕ ವಿತರಣೆ ಮಾಡಲಾಗಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಹರಾಜಿನಲ್ಲಿ ಹಾಲಿ ಮಳಿಗೆದಾರರಿಗೆ ಬಾಡಿಗೆ ಹೆಚ್ಚಳ ಮಾಡುವ ಮೂಲಕ ನವೀಕರಿಸಿಕೊಂಡು ಬಂದಿದೆ. ಇದೀಗ ಪಟ್ಟಣ ಪಂಚಾಯಿತಿಯಾಗಿ ಬದಲಾದ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ನವೀಕರಿಸುವ ಬದಲು ಹರಾಜು ಹಾಕುವ ಪ್ರಕ್ರಿಯೆ ಮಾಡಬೇಕಿದೆ. ಆದರೆ ಹಾರಾಜು ಹಾಕುವುದನ್ನು ಬಿಟ್ಟು ಬೀಗ ಹಾಕುವ, ನೋಟಿಸ್ ನೀಡುವ, ಸಭೆಯಲ್ಲಿ ಗಂಭೀರವಾಗಿ ಚರ್ಚಿಸುವುದಕಷ್ಟೆ ಕಳೆದ ಐದಾರು ವರ್ಷಗಳಿಂದ ಕಾಲಾಹರಣ ಮಾಡುತ್ತಿದೆ.

ಇಷ್ಟೂ ಮಳಿಗೆಗಳ ಬಾಡಿಗೆ ಕಾರಾರು ಅವಧಿ 2018 ಕ್ಕೆ ಮುಗಿದಿದ್ದು 2019 ರಲ್ಲಿ ಇ-ಹರಾಜಿಗೆ ಪಂಚಾಯ್ತಿ ಮುಂದಾಗಿತ್ತು. ಆಗ ಮಳಿಗೆದಾರರು ಕೋರ್ಟ್ ಮೆಟ್ಟಲೇರಿದ್ದರಿಂದ ಹರಾಜು ಪ್ರಕ್ರಿಯೆ ಅರ್ಧಕ್ಕೆ ನಿಂತಿತು. ಆದಾದ ನಂತರ ಇಷ್ಟು ವರ್ಷ ಇವರ ತಂಟೆಗೆ ಹೋಗದ ಪಂಚಾಯ್ತಿ ಕಳೆದ ಕೆಲ ತಿಂಗಳ ಹಿಂದಷ್ಟೆ ನೋಟಿಸ್ ನೀಡದೆ ಮಳಿಗೆಗಳ ಬಾಡಿಗೆ ಅವಧಿ ಮೀರಿದೆ ಎಂದು ಪೊಲೀಸ್ ಬಂದೋಬಸ್ತಿನಲ್ಲಿ ಬೀಗ ಜಡಿದಿತ್ತು. ಮರುದಿನವೇ ಆಡಳಿತಾಧಿಕಾರಿಯಾಗಿದ್ದ ತಹಸೀಲ್ದಾರ್ ಅವರು ಕಾನೂನುಬಾಹೀರವಾಗಿ ಕ್ರಮ ಕೈಗೊಳ್ಳುವುದು ನ್ಯಾಯಸಮ್ಮತವಲ್ಲವೆಂದು ಅಷ್ಟೂ ಮಳಿಗೆಗಳ ಬೀಗ ತೆಗೆಸಿದ್ದರು. ನಂತರ ಪಂಚಾಯ್ತಿ ಸದಸ್ಯರು ಮತ್ತು ಮಳಿಗೆದಾರರ ಸಭೆ ನಡೆಸಿ ಇಬ್ಬರ ಅಹವಾಲು ಆಲಿಸಿ ಸುಮ್ಮನಾದರು.

ಈಗ ಮತ್ತೆ ಪಂಚಾಯ್ತಿ ಮಳಿಗೆ ವಿಚಾರ ಮುನ್ನೆಲೆಗೆ ಬಂದಿದೆ. 52 ಮಳಿಗೆಗಳ ಪೈಕಿ ಖಾಸಗಿ ಬಸ್ ನಿಲ್ದಾಣದಲ್ಲಿ ಇರುವ 6 ಮಳಿಗೆಗಳು ಹಾಗೂ ಒಂದು ಹೋಟೆಲ್‌ನ ಬಾಡಿಗೆದಾರರಿಗೆ ನೋಟಿಸ್ ನೀಡಿದೆ. ಈ ಕಟ್ಟಡಗಳು ತೀರ ಹಳೆಯದಾಗಿದ್ದು ಶಿಥಿಲಾವಸ್ಥೆಯಲ್ಲಿ ಇರುವುದರಿಂದ ಒಡೆದು ಪುನಃ ನಿರ್ಮಿಸಬೇಕಿದೆ ಎಂದು ಲೋಕೋಪಯೋಗಿ ಇಲಾಖೆ ವರದಿ ನೀಡಿದೆ ಎನ್ನುವ ಕಾರಣ ಮುಂದಿಟ್ಟಿದೆ. ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ಮಳಿಗೆ ಕುಸಿಯಬಹುದು ಎಂಬ ಕಾರಣವೊಡ್ಡಿ ಬಾಡಿಗೆ ಹಣ ಚುಕ್ತಾ ಮಾಡಿ ಮಳಿಗೆ ಹಸ್ತಾಂತರಿಸುವಂತೆ ತಿಳುವಳಿಕೆ ಪತ್ರದಲ್ಲಿ ಸೂಚಿಸಿದ್ದಾರೆ.

ಆದರೆ ಆ ಪತ್ರದಲ್ಲಿ ಬಾಡಿಗೆ ಹಣ ಎಷ್ಟು ಬಾಕಿ ಇದೆ ಎಂಬುದಾಗಲಿ, ಅವರುಗಳು ಎಂದು ಖಾಲಿ ಮಾಡಿಕೊಡಬೇಕು ಎಂಬುವುದಾಗಲಿ ತಿಳಿಸಿಯೇ ಇಲ್ಲ. ಮಳಿಗೆದಾರರು ಬಾಡಿಗೆ ಹಣ ಪೂರಾ ಚುಕ್ತ ಮಾಡಿದ್ದರು ಸಹ ಪಂಚಾಯಿತಿಯಲ್ಲಿ ಡಿಸಿಬಿ ರಿಜಿಸ್ಟರ್ ಸರಿಯಾಗಿ ನಿರ್ವಹಿಸಿದರುವುದರಿಂದ ಬಾಡಿಗೆ ಚುಕ್ತಾ ಆಗಿದೆಯೋ ಇಲ್ಲ ಬಾಕಿ ಇದೆಯೋ ಎಂಬುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅಂಗಡಿದಾರರಿಗೆ ವಾಪಸ್ ನೀಡಬೇಕಾಗಿರುವ ಡಿಪಾಸಿಟ್ ಹಣದ ಬಗ್ಗೆ ಚಕಾರವೇ ಎತ್ತುತ್ತಿಲ್ಲ. ಅಚ್ಚರಿ ಎನ್ನುವಂತೆ ಪಂಚಾಯ್ತಿಯವರು ನಮ್ಮಿಂದ ಹೆಚ್ಚಿನ ಬಾಡಿಗೆ ವಸೂಲಿ ಮಾಡಿದ್ದು ಬಾಕಿ ಹಣವನ್ನು ಅದರಲ್ಲೇ ಮುರಿದುಕೊಂಡು ಹಣ ವಾಪಸ್ಸು ಕೊಡಬೇಕಾಗಿದೆ ಎಂಬುದು ಮಳಿಗೆದಾರರ ವಾದವಾಗಿದೆ. ಅಲ್ಲದೆ ಅದೇ ಸ್ಥಳದಲ್ಲಿ ಮಳಿಗೆ ಕಟ್ಟಿ ಹಾಲಿ ಮಳಿಗೆದಾರರಿಗೆ ಅವಕಾಶ ಕಲ್ಪಿಸಲಾಗುವುದು ಇಲ್ಲವೋ ಎಂಬುದ ಸ್ಪಷ್ಟವಾದ ನಿರ್ದೇಶನವೇ ಇಲ್ಲ. ಪುನಹ ವಾಣಿಜ್ಯ ಸಂಕೀರ್ಣ ಕಟ್ಟಲು ಪ್ಲಾನ್, ಎಸ್ಟಿಮೇಶನ್ ಹಾಗೂ ಅನುದಾನ ಇಡಲಾಗಿದೆಯಾ ಎಂಬುದರ ಬಗ್ಗೆ ಅಧಿಕಾರಿಗಳು ಮಾಹಿತಿಯೇ ನೀಡುವುದಿಲ್ಲ. ಪಂಚಾಯಿತಿ ಒಡೆತನದ ಮಳಿಗೆಯ ಬಾಡಿಗೆ ಅವಧಿ ಕರಾರು ಮುಗಿದಿರುವ ಮಳಿಗೆಗಳನ್ನು ಖುಲ್ಲಾ ಪಡಿಸಲು ಮುಂದಾಗಿರುವ ಪಟ್ಟಣ ಪಂಚಾಯಿತಿ ನಿಯಮಬಾಹಿರ ಕ್ರಮಗಳನ್ನು ಅನುಸರಿಸಿ ಪುನಃ ಕೋರ್ಟು ಕಚೇರಿ ಅಲೆದಾಡಲು ಅವಕಾಶ ಮಾಡಿಕೊಡದಂತೆ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ. ಹಾಗಾಗಿ ಸರ್ಕಾರದ ಸುತ್ತೋಲೆಯಂತೆ ಕರ್ನಾಟಕ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ ಅಧಿನಿಯಮ 1974 ರನ್ನು ಪಾಲಿಸಬೇಕಿದೆ. ಇಲ್ಲವಾದರೆ ಮತ್ತೆ ಬಾಡಿಗೆದಾರರ ಮತ್ತು ಪಂಚಾಯ್ತಿಯ ಕಾನೂನು ಸಂಘರ್ಷ ನಿಶ್ಚಿತ.

# ಅತಿಥಿ ಶಿಕ್ಷಕ, ಉಪನ್ಯಾಸಕರ ಹುದ್ದೆಗೆ ಅರ್ಜಿ

**ಬೆಂಗಳೂರು ಗ್ರಾಮಾಂತರ:** 2025-26ನೇ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳು ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು 36 ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರ ಹುದ್ದೆಗಳಿಗೆ ಗೌರವಧನ ಆಧಾರದ ಮೇಲೆ ಅರ್ಜಿ ಆಹ್ವಾನಿಸಲಾಗಿದೆ. ಅತಿಥಿ ಶಿಕ್ಷಕ ಹಾಗೂ ಅತಿಥಿ ಉಪನ್ಯಾಸಕರ ಹುದ್ದೆಗೆ ಬಿಎ, ಬಿಎಸ್ಸಿ, ಬಿ.ಎಸ್.ಸಿ, ಬಿ.ಸಿ.ಎ ಮತ್ತು ಎಂ.ಎ, ಎಂ.ಎಸ್.ಸಿ ಹಾಗೂ ಬಿ.ಎಡ್ ಸೇರಿ ಸಂಬಂಧಪಟ್ಟ ವಿಷಯವಾರು ವಿದ್ಯಾರ್ಹತೆ ಹೊಂದಿರಬೇಕು.

ಹುದ್ದೆಗಳು ಖಾಲಿಯಿರುವ ಶಾಲೆಗಳ ಪಟ್ಟಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ,(1 ರಿಂದ 10ನೇ ತರಗತಿ ಸಿ.ಬಿ.ಎಸ್.ಇ) ಹಾಗೂ (ಪದವಿ ಪೂರ್ವ ರಾಜ್ಯ ಪಠ್ಯಕ್ರಮ ಪಿ.ಸಿ.ಎಂ.ಬಿ) ಗಿಡ್ಡಪ್ಪನಹಳ್ಳಿ, ಹೊಸಕೋಟೆ ತಾಲ್ಲೂಕು. ಮೊರಾರ್ಜಿ ದೇಸಾಯಿ ವಸತಿ ಶಾಲೆ, (1 ರಿಂದ 10ನೇ ತರಗತಿ ಸಿ.ಬಿ.ಎಸ್.ಇ) ಹಾಗೂ (ಪದವಿ ಪೂರ್ವ ರಾಜ್ಯ ಪಠ್ಯಕ್ರಮ ಪಿ.ಸಿ.ಎಂ.ಬಿ) ದೇವನಾಯಕನಹಳ್ಳಿ, ದೇವನಹಳ್ಳಿ ತಾಲ್ಲೂಕು. ಮೌಲಾನಾ ಆಜಾದ್ ಮಾದರಿ ಶಾಲೆ, ವಿಜಯಪುರ,ದೇವನಹಳ್ಳಿ ತಾಲ್ಲೂಕು. ಮೌಲಾನಾ ಆಜಾದ್ ಮಾದರಿ ಶಾಲೆ, ಮುತ್ತೂರು, ದೊಡ್ಡಬಳ್ಳಾಪುರ ತಾಲ್ಲೂಕು. ಮೌಲಾನಾ ಆಜಾದ್ ಮಾದರಿ ಶಾಲೆ, ಇಸ್ಲಾಂಪುರ, ನೆಲಮಂಗಲ ತಾಲ್ಲೂಕು.

ಮೇಲ್ಕಂಡ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಧಿಕೃತ ಜಾಲತಾಣವಾದ https://dom.karnataka.gov.in ಅಥವಾ ನೇರವಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ,ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ:216, 2ನೇ ಮಹಡಿ ಜಿಲ್ಲಾಡಳಿತ ಭವನದಲ್ಲಿ ತಮ್ಮ ದಾಖಲೆಗಳೊಂದಿಗೆ ಕೊನೆಯ ದಿನಾಂಕ ಮೇ 19 ರ ಒಳಗಾಗಿ ಕಛೇರಿ ಸಮಯದಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,ದೂರವಾಣಿ ಸಂಖ್ಯೆ:080-29787455 ಗೆ ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀರಂಭಾಪುರಿ ಜಗದ್ಗುರುಗಳು ಅಭಿಮತ

# ಸಚ್ಚಾರಿತ್ರ್ಯದಿಂದ ಬದುಕು ಶ್ರೀಮಂತ

**ಅರಕಲಗೂಡು:** ಸತ್ಕಾರ್ಯಗಳಿಂದ ಮನುಷ್ಯನ ಅಂತರಂಗ ಪರಿಶುದ್ಧವಾಗುತ್ತದೆ. ಸತ್ಯ ಶುದ್ಧ ಕಾಯಕದಿಂದ ಬದುಕು ಉಜ್ವಲಗೊಳ್ಳುತ್ತದೆ. ಮೌಲ್ಯಾಧಾರಿತ ಸದ್ಗುಣವಂತನ ಬದುಕು ಇನ್ನಿತರರಿಗೆ ದಾರಿ ದೀಪವಾಗುತ್ತದೆ. ಸದ್ಗುಣ ಮತ್ತು ಸಚ್ಚಾರಿತ್ರ್ಯದಿಂದ ಮನುಷ್ಯನ ಬದುಕು ಶ್ರೀಮಂತಗೊಳ್ಳಬೇಕೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ತಾಲೂಕಿನ ಮುಸವತ್ತೂರು ಗ್ರಾಮದ ನೂತನ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಹಾಗೂ ಶ್ರೀ ಶಂಕರಲಿಂಗೇಶ್ವರ ಜಂಪೋತ್ಸವದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಈಶ ನಿರ್ಮಿತವಾದ ಈ ಪ್ರಪಂಚದಲ್ಲಿ ಇರುವುದೆಲ್ಲವೂ ಅಮೂಲ್ಯ ಸಂಪತ್ತು. ಮಣ್ಣು ನೀರು ಬೆಂಕಿ ಗಾಳಿ ಮತ್ತು ಕಲ್ಲಿನಲ್ಲಿಯೂ ದೇವರನ್ನು ಕಂಡು ಪೂಜಿಸಿದವರು ಭಾರತೀಯರು. ಚಿನ್ನವಿಲ್ಲದೇ ಮನುಷ್ಯ ಬದುಕಬಹುದು. ಆದರೆ ಅನ್ನವಿಲ್ಲದೇ ಬದುಕಲು ಸಾಧ್ಯವಿಲ್ಲ. ದೇಹ ಮನ ಬುದ್ಧಿ ಕೈಕಾಲು ಇವುಗಳೆಲ್ಲವೂ ನಿಜವಾದ ಸಂಪತ್ತು. ಹಣ ಚಿನ್ನ ಬೆಳ್ಳಿ ವಸ್ತು ಒಡವೆಗಳಿಂಗ ಬದುಕು ಕಟ್ಟಿಕೊಳ್ಳುವುದು ಒಳಿತಲ್ಲ. ಮೌಲ್ಯಾಧಾರಿತ ಧರ್ಮದ ಪರಿಪಾಲನೆಯನ್ನು ಮಾಡಿ ಮುನ್ನಡೆದರೆ ಬದುಕು ಆದರ್ಶಗೊಳ್ಳುತ್ತದೆ. ಮನಸಿನ ಹೊಯ್ದಾಟವನ್ನು ಶಾಂತ ಪ್ರಶಾಂತಗೊಳಿಸುವ ಮಾರ್ಗವೇ ಆಧ್ಯಾತ್ಮವೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ. ಆಚಾರ್ಯರು ಋಷಿಮುನಿಗಳು ಸಂತ ಮಹಾಂತರು ಭೌತಿಕ ಬದುಕಿಗೆ ಸೋಲದೇ ಆಧ್ಯಾತ್ಮ ಮಾರ್ಗದಲ್ಲಿ ಆನಂದದಿಂದ ಬಾಳಿ ಇನ್ನಿತರರ ಬಾಳಿಗೆ ದಾರಿದೀಪವಾದರು. ಮುಸವತ್ತೂರು ಗ್ರಾಮದ ಸಕಲ ಸದ್ಭಕ್ತರ ಸಹಕಾರದಿಂದ ನೂತನ ಶ್ರೀ ವೀರಭದ್ರೇಶ್ವರ ದೇವಸ್ಥಾನ ನಿರ್ಮಿಸಿ ಮೂರ್ತಿ ಪ್ರತಿಷ್ಠಾಪನೆ ಮಾಡಿಸಿರುವುದು ತಮ್ಮೆಲ್ಲರಲ್ಲಿರುವ ಧರ್ಮಶ್ರದ್ಧೆ ದೇವರಲ್ಲಿಟ್ಟ ನಂಬಿಕೆ ಕಂಡು ಅತ್ಯಂತ ಹರುಷ ತಮಗೆ ಉಂಟಾಗಿದೆ ಎಂದರು. ಸಮ್ಮುಖ ವಹಿಸಿದ



ಕಾರ್ಜುವಳ್ಳಿ ಹಿರೇಮಠದ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮಾನವ ಜೀವನ ಅಮೂಲ್ಯ. ದೇವರು ಕೊಟ್ಟ ಕೊಡುಗೆಗೆ ಸರಿಸಾಟಿಯಾದುದು ಇನ್ನೊಂದಿಲ್ಲ. ಅರಿತು ಬಾಳಿದರೆ ಬಾಳು ಬಂಗಾರ. ಮರೆತು ಬಾಳಿದರೆ ಬಾಳು ಬಂಧನಕಾರಿಯಾಗುತ್ತದೆ. ಮನುಷ್ಯ ಜೀವನದಲ್ಲಿ ಆಸ್ತಿ ಅಂತಸ್ತು ಅಧಿಕಾರ ಮುಖ್ಯವಲ್ಲ. ಶಾಂತಿ ಜ್ಞಾನದ ಸಂಪತ್ತು ಮುಖ್ಯ. ಶ್ರೀ ಜಗದ್ಗುರು ರೇಣುಕಾಚಾರ್ಯರ ಧಾರ್ಮಿಕ ಮತ್ತು ಸಾಮಾಜಿಕ ವಿಚಾರ ಧಾರೆಗಳು ನಮ್ಮೆಲ್ಲರ ಬಾಳಿಗೆ ಆಶಾಕಿರಣ. ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಮತ್ತು ಗೋತ್ರಪುರುಷನಾಗಿ ಪೂಜೆಗೊಳ್ಳುವ ಶ್ರೀ ವೀರಭದ್ರಸ್ವಾಮಿ ಮುಸವತ್ತೂರಿನಲ್ಲಿ ನೆಲೆಗೊಂಡಿರುವುದು ತಮ್ಮೆಲ್ಲರ ಸೌಭಾಗ್ಯವೆಂದರು.

ಸಮಾರಂಭ ಉದ್ಘಾಟಿಸಿದ ಹಾಸನ ಜಿಲ್ಲಾ ಬಿ.ಜೆ.ಪಿ.ಅಧ್ಯಕ್ಷರಾದ ಸಿದ್ದೇಶ ನಾಗೇಂದ್ರ, ಮಾತನಾಡಿ ವಿದ್ಯಾ ಬುದ್ಧಿ, ಹೃದಯ ಹೊಟ್ಟೆ, ನೆಲ ಜಲ, ಅನ್ನ ಗಾಳಿ ಬೆಳಕು ಕೊಟ್ಟವನು ಭಗವಂತ. ಬದುಕಿನ ಬೆಂಗಾಡು ಸಮೃದ್ಧಗೊಳ್ಳಲು ದೇವರ ಕಾರುಣ್ಯದ ಕಿರಣ ಬೇಕು. ಸಂಸ್ಕಾರ ಸಂಸ್ಕೃತಿ ಎಂಬ ಬೀಜ ಬಿತ್ತಿ ಜೀವನದಲ್ಲಿ ಸತ್ಫಲಗಳನ್ನು ಪಡೆಯಬೇಕು. ಶ್ರೀ ರಂಭಾಪುರಿ ಜಗದ್ಗುರುಗಳು ಸಣ್ಣ ಹಳ್ಳಿಗೆ ದಯಮಾಡಿಸಿರುವುದು ತಮ್ಮೆಲ್ಲರ ಪೂರ್ವಾರ್ಜಿತ ಪುಣ್ಯದ ಫಲವಾಗಿದೆ ಎಂದು ಹರುಷ ವ್ಯಕ್ತಪಡಿಸಿದರು. ದೊಡ್ಡಬೆಮ್ಮತ್ತಿ ಅ.ಭಾ. ವೀ.ಮಹಾಸಭೆಯ ಅಧ್ಯಕ್ಷ ಸುರೇಶ ಅವರು ನೇತೃತ್ವ ವಹಿಸಿದ್ದರು. ಕುಮಾರಿ ಹಾರಿಕಾ ಮಂಜುನಾಥ ಭಾರತೀಯ ಸಂಸ್ಕೃತಿ ಕುರಿತು ವಿಶೇಷ ಉಪನ್ಯಾಸವನ್ನಿತ್ತರು.

ಈ ಅಪೂರ್ವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಹಾಸನದ ಅ.ಭಾ.ವೀ.ಮಹಾಸಭೆ ನಿರ್ದೇಶಕ ಯೋಗೇಶ್ ರಂಗಾಪುರ, ಶ್ರೀಕಂಠಪ್ಪ, ಬಸವರಾಜು, ಮಲ್ಲೇಶಣ್ಣ ಕತ್ತಿಮಲ್ಲೇನಹಳ್ಳಿ, ಜಗದೀಶ ದಡದಹಳ್ಳಿ, ಬಸವರಾಜು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.ಹೆಗ್ಗಡಹಳ್ಳಿಮಠದ ಷಡ್ಭಾವರಹಿತೇಶ್ವರ ಶ್ರೀಗಳು, ಕೆಸವತ್ತೂರು ಬಸವರಾಜೇಂದ್ರ ಸ್ವಾಮಿಗಳು, ಶಿರದನಹಳ್ಳಿ ಸದಾಶಿವ ಸ್ವಾಮಿಗಳು ಉಪಸ್ಥಿತರಿದ್ದರು. ಶ್ರೀಮತಿ ರಶ್ಮಿ ಪರಮೇಶ ನಿರೂಪಿಸಿದರು. ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಜಗದ್ಗುರುಗಳವರ ಆಶೀರ್ವಾದ ಪಡೆದರು.

## ಮಕ್ಕಳಿಗೆ ಕುಟುಂಬದಿಂದ ದೊರೆಯುವ ಶಿಕ್ಷಣವೇ ಶ್ರೇಷ್ಠ

**ಚಿತ್ರದುರ್ಗ:** ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ಕುಟುಂಬದಿಂದ ದೊರೆಯುವ ಶಿಕ್ಷಣವೇ ಅತ್ಯುತ್ತಮ ಶಿಕ್ಷಣವಾಗಿ ಪರಿಣಮಿಸುತ್ತಿದೆ, ಬೇಸಿಗೆ ರಜೆಯದಲ್ಲಿ ತಂದೆಯ ಜೊತೆ ಕೆಲಸ ಮಾಡುತ್ತಾ, ತಾಯಿಯ ಜೊತೆ ಮನೆ ಕೆಲಸಗಳನ್ನ ಕಲಿತು, ಮಕ್ಕಳು ಸಮೃದ್ಧವಾಗಿ ಬೆಳೆಯುವುದನ್ನ ನಾವು ಕಾಣಬಹುದು. ಹಾಗಾಗಿ ಕೌಟುಂಬಿಕ ಉದ್ಯೋಗಗಳನ್ನ, ಕೌಶಲ್ಯಗಳನ್ನು ನಾವು ಮರೆತರೆ, ಮುಂದಿನ ಜನಾಂಗಕ್ಕೆ ದೊಡ್ಡ ನಷ್ಟವನ್ನೇ ಉಂಟು ಮಾಡಿದಂತಾಗುತ್ತದೆ. ಮಕ್ಕಳಿಗೆ ತಂದೆಯಿಂದ ಹಲವಾರು ಕಲೆಗಳನ್ನ, ಕೌಶಲ್ಯಗಳನ್ನು ತನ್ನಿಂದ ತಾನೇ ದಾರೆ ಎರೆಯಬಹುದು, ಹಾಗಾಗಿ ಇಂತಹ ಶಿಕ್ಷಣವನ್ನೇ ಗಾಂಧೀಜಿಯವರು ಹೆಚ್ಚು ಪ್ರೋತ್ಸಾಹ ನೀಡಲು, ಗುಡಿ ಕೈಗಾರಿಕೆಗಳಿಗೆ ಆದ್ಯತೆ ನೀಡಿದ್ದರು ಎಂದು ಕರ್ನಾಟಕ ಜ್ಞಾನ-ವಿಜ್ಞಾನ ಸಮಿತಿ ರಾಜ್ಯ ಉಪಾಧ್ಯಕ್ಷ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಡಾ ಎಚ್ ಕೆ ಎಸ್ ಸ್ವಾಮಿ ಅವರು ಕರೆ ನೀಡಿದ್ದಾರೆ. ಶಿಲ್ಪಕಲೆಯಲ್ಲಿ ಪ್ರಪಂಚದಲ್ಲೇ ಅತ್ಯುತ್ತಮ ಹೆಸರುವಾಸಿಯಾದಂತ ನಮ್ಮ ದೇಶ, ಇಂದೂ ಸಹ ಆ ಸಂಸ್ಕೃತಿಯನ್ನು ತನ್ನ ಮುಂದಿನ ಜನಾಂಗಕ್ಕೆ ದಾರೆ ಎರೆದು ಕೊಡುತ್ತಿದೆ. ತಂದೆ ಶಿಲ್ಪಕಲೆಯಲ್ಲಿ ಶ್ರೇಷ್ಠತೆಯನ್ನು ಪಡೆದು, ತನ್ನ ಮಕ್ಕಳಿಗೆ ಗೊತ್ತಿಲ್ಲದ ಹಾಗೆ ಆ ಕಲೆಯನ್ನು ಹಸ್ತಾಂತರಿಸುತ್ತಿರುವುದನ್ನು ನಾವು ಅವರ ಕುಟುಂಬಗಳಲ್ಲಿ ನೋಡಬಹುದು. ಅದೇ ರೀತಿ ಗ್ರಾಮೀಣ ಉದ್ಯೋಗಗಳನ್ನ ನಮಗೆ ಗೊತ್ತಿಲ್ಲದ ಹಾಗೆ ಮಕ್ಕಳು ಕಲಿತು, ತಮ್ಮ ತಂದೆ ತಾಯಿಗಳಿಂದ ಕಲಿತು, ತಮ್ಮ ದೇಶಕ್ಕೆ ಅದನ್ನ ಅಳವಡಿಸಿಕೊಳ್ಳಲು ಸುಲಭವಾಗಿರುತ್ತದೆ ಎಂದರು. ಶಿಲ್ಪಕಲೆಯಲ್ಲಿ ಮಕ್ಕಳಿಗೆ ಕೈಯಲ್ಲಿ ನಾಜೂಕಾಗಿ ಶಿಲ್ಪಗಳನ್ನು, ಕೆತ್ತನೆಯಿಂದ ಹಿಡಿದು, ಅವುಗಳನ್ನ ಸುಂದರಗೊಳಿಸುವ ಕಲೆಯನ್ನ ತಂದೆಯಿಂದ ಮಕ್ಕಳು ಸ್ವಾಭಾವಿಕವಾಗಿ ನೋಡಿ ಕಲಿಯುತ್ತಿವೆ, ಮುಂದೆ ಅವು ದೊಡ್ಡ ಶಿಲ್ಪಿಗಳಾಗಿ, ಪ್ರಪಂಚದಲ್ಲಿ ಹೆಸರುವಾಸಿ ಆಗುವಂತಹ ಕಲ್ಲಿನ ವಿಗ್ರಹಗಳನ್ನು ಕೆತ್ತುವ ಅವಕಾಶಗಳು ದೊರೆಯುತ್ತದೆ. ಇದರಿಂದ ಮುಂದಿನ ಜನಾಂಗಕ್ಕೆ ತಮ್ಮ ಐತಿಹಾಸಿಕ ಉದ್ಯೋಗಗಳು ಮರೆತು ಹೋಗದಂತೆ ರಕ್ಷಿಸುವ ಅವಕಾಶವಿದೆ ಎಂದರು. ಸಾಕಷ್ಟು ಗುಡಿ ಕೈಗಾರಿಕೆಗಳನ್ನ ನಾವು ಇಂದು ನಾಶ ಮಾಡಿದ್ದೇವೆ, ಇದರ ಪರಿಣಾಮವಾಗಿ ತಂದೆ ತಾಯಿಗಳು ತಮಗೆ ಗೊತ್ತಿರುವ ಕೌಶಲ್ಯಗಳನ್ನ ಮಕ್ಕಳಿಗೆ ಹೇಳಿಕೊಡಲಾರದಂತ ಅತಂತ್ರ ಸ್ಥಿತಿಗೆ ಬಂದು ನಿಂತಿದ್ದಾರೆ, ಶಿಕ್ಷಣ ಸಂಸ್ಥೆಗಳು ಈಗಲಾದರೂ ಬದಲಾವಣೆ ಮಾಡಿಕೊಂಡು, ಶಿಕ್ಷಣದಲ್ಲಿ ಗ್ರಾಮೀಣ ಕೌಶಲ್ಯಗಳನ್ನು, ಗುಡಿ ಕೈಗಾರಿಕೆಗಳನ್ನ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಕಲಿಸಿ, ಮಕ್ಕಳನ್ನು ತಮ್ಮ ಸ್ವಂತ ಕಾಲು, ಕೈಗಳಲ್ಲ ದುಡಿಮೆ ಮಾಡಿ ಬದುಕುವುದನ್ನು ಹೇಳಿ ಕೊಡಬೇಕಾಗಿದೆ ಎಂದರು.

## ದಸೂಡಿ ಕೃಷಿ ಸಹಕಾರ ಸಂಘಕ್ಕೆ ತಿಪ್ಪೇಸ್ವಾಮಿ ಅಧ್ಯಕ್ಷರಾಗಿ ಆಯ್ಕೆ

**ಹುಳಿಯಾರು:** ಹುಳಿಯಾರು ಹೋಬಳಿಯ ದಸೂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಭಾನುವಾರ ನಡೆಯಿತು. ಅಧ್ಯಕ್ಷರಾಗಿ ತಿಪ್ಪೇಸ್ವಾಮಿ ಮತ್ತು ಉಪಾಧ್ಯಕ್ಷರಾಗಿ ಚಂದ್ರನಾಯಕ್ ರವರು ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿಯಾಗಿ ಮಹೇಶ್ ಮತ್ತು ಮಂಜುನಾಥ್ ಕರ್ತವ್ಯ ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಅಣ್ಣಪ್ಪ, ರಂಗನಾಥಪ್ಪ, ಜಯಣ್ಣ, ಪಂಚರತ್ನಮ್ಮ, ರಂಗಮಣಿ, ವೆಂಕಟೇಶ್, ರಮೇಶ್, ಅಳ್ಳಪ್ಪ ಭಾಗವಹಿಸಿದ್ದರು. ಜೆಡಿಸ್ ಮುಖಂಡರುಗಳಾದ ಡಿ.ಬಿ.ರವಿಕುಮಾರ್, ತಾಪಂ ಮಾಜಿ ಸದಸ್ಯ ಪ್ರಸನ್ನ ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಮರಿಯಪ್ಪ, ಬಲ್ಲಪ್ಪನಹಟ್ಟಿ ಎರ್ರಲ್ಲಪ್ಪ, ಯುವ ಮುಖಂಡರಾದ ಸುಬ್ರಹ್ಮಣ್ಯ, ದೇವರಾಜ್ ಮುಂತಾದವರು ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಶುಭಹಾರೈಸಿದರು.



## ದೇಶ ಸೇವೆಗೆ ಯುವ ಜನತೆ ಮುಂದಾಗಬೇಕು

**ಹುಳಿಯಾರು:** ಹುಳಿಯಾರು-ಕೆಂಕೆರೆ ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದಿಂದ 2024-25 ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರವನ್ನು ಬೆಳಗುಲಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕ ಸಿ.ಬಿ.ಸುರೇಶ್‌ಬಾಬು ಉದ್ಘಾಟಿಸಿ ಮಾತನಾಡಿ ಎನ್‌ಎಸ್ ಎಸ್ ಶಿಬಿರದಲ್ಲಿ ನಾಯಕತ್ವ ಗುಣ, ಸೇವಾ ಮನೋಬಾವ ಬೆಳಸಿಕೊಂಡು ದೇಶ ಸೇವೆಗೆ ಯುವ ಜನತೆ ಮುಂದಾಗಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಎಸ್.ಸಿ.ವೀರಣ್ಣ ಅವರು ಮಾತನಾಡಿ ಪರಿಸರ ಸಂರಕ್ಷಣೆ, ಸ್ವಚ್ಛ ಗ್ರಾಮ ನಿರ್ಮಾಣ, ಜಲ ಸಂರಕ್ಷಣೆ, ಸ್ವ-ಉದ್ಯೋಗ ಹಾಗೂ ಆರೋಗ್ಯದ ಬಗ್ಗೆ ಶಿಬಿರದಲ್ಲಿ ಒತ್ತು ನೀಡಲಾಗಿದೆ ಎಂದರು. ಶಿಬಿರಾಧಿಕಾರಿಗಳಾದ ಲಕ್ಷ್ಮೀ ಎಸ್. ಎಸ್.ರಮೇಶ್, ಸುಮಯ್ಯ, ಎಂ.ಕೆ.ತಿಪ್ಪೇಸ್ವಾಮಿ, ಸಿಡಿಸಿ ಸದಸ್ಯರುಗಳಾದ ಸೈಯದ್ ಜಹೀರ್, ರಾಘವೇಂದ್ರ, ಭಾಗವಹಿಸಿದ್ದರು.



# ದಾದಿಯರ ಪಾತ್ರ ಹೆಚ್ಚು ಮಹತ್ವ



**ಶಿರಾ :** ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವಂತಹಗಳಿಗೆ ರೋಗಿಗಳಿಗೆ ನಗುಮುಖದ ಸೇವೆ ನೀಡುವ ಮೂಲಕ ಅರ್ಧ ರೋಗ ನಿವಾರಣೆ ಮಾಡುವಲ್ಲಿ ದಾದಿಯರ ಮಾತ್ರ ಹೆಚ್ಚು ಮಹತ್ವ ಪಡೆಯುತ್ತದೆ. ಆರೋಗ್ಯ ಸೇವೆ ಉತ್ತಮವಾಗಿ ನೀಡಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವುದರಲ್ಲಿ ದಾದಿಯರ ಪಾತ್ರ ಮಹತ್ವದ್ದು ಎಂದು ದ್ವಾರನ ಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಗೌರಮ್ಮ ನಾಗರಾಜ್ ಹೇಳಿದರು. ಶಿರಾ ತಾಲೂಕಿನ ಹುಲಿಕುಂಟೆ ಹೋಬಳಿಯ ದ್ವಾರನ ಕುಂಟೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ದಾದಿ ಯರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಿ, ಆರೋಗ್ಯ ಇಲಾಖೆ ನೀಡುವ ಸಲಹೆಯನ್ನು ಎಲ್ಲರೂ ಪಾಲಿಸಿದಾಗ ಗ್ರಾಮಗಳಲ್ಲಿ ಯಾವುದೇ ರೋಗ ರುಜನಗಳು ಹರಡಲು ಸಾಧ್ಯವಾಗುವುದಿಲ್ಲ ಎಂದರು.

ವೈದ್ಯಾಧಿಕಾರಿ ಡಾ. ತಿಮ್ಮರಾಜು ಮಾತನಾಡಿ ವೈದ್ಯ, ಆರೋಗ್ಯ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಸಾರ್ವಜನಿಕರ ಬಾಂಧವ್ಯ ಉತ್ತಮವಾಗಿದ್ದಾಗ ಆರೋಗ್ಯ ಕ್ಷೇತ್ರ ಸುಸ್ಥಿರವಾಗಿರಲಿದೆ. ದಾದಿಯರ ಸೇವೆ ಆರೋಗ್ಯ ಇಲಾಖೆ ಎಂದು ಮರೆಯಲು ಸಾಧ್ಯವಿಲ್ಲ ಎಂದರು. ಇದೇ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿ ಜನ ಮೆಚ್ಚುಗೆ ಪಡೆದ ತಾಯಿ ಮಕ್ಕಳ ಆಸ್ಪತ್ರೆಯ ಶುಶ್ರೂಷಕಿ ಬಿ.ಸಿ.ಮಮತಾ, ಶಿರಾ ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಕಿ ಸೀಮಾ ಫಿರ್ದೋಸ್, ದೊಡ್ಡ ಹುಲಿಕುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕಿ ಸೌಮ್ಯ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಲಕ್ಷ್ಮಿಕಾಂತ್, ಆರೋಗ್ಯ ಕೇಂದ್ರದ ನಿರಂಜನ್, ರಘು, ಫಾತಿಮಾ, ಕವಿತಾ, ಸವಿತಾ, ರೋಜಾ, ಲಲಿತಮ್ಮ ನರಸಿಂಹಮೂರ್ತಿ ಉಪಸ್ಥಿತರಿದ್ದರು.

# ಅಂಬೇಡ್ಕರ್ ಅವರ ಸಾಧನೆಗಳು ಇಂದು ಎಲ್ಲರಿಗೂ ಪ್ರೇರಣೆ

**ಬೆಂಗಳೂರು:** ಅಂಬೇಡ್ಕರ್ ಅವರ ಜೀವನವು ದಲಿತ ಸಮುದಾಯದ ಹಕ್ಕುಗಳ ಹೋರಾಟ, ಶಿಕ್ಷಣದ ಮಹತ್ವ, ಮತ್ತು ಸಾಮಾಜಿಕ ನ್ಯಾಯದ ಸಂಕೇತವಾಗಿದೆ ಎಂದು ಅಖಿಲ ಕರ್ನಾಟಕ ಕೊರಚ ಕೊರಮ ಮಹಾಸಭಾ ಮಾಲೂರು ತಾಲೂಕು ಅಧ್ಯಕ್ಷರಾದ ಮಂಜುನಾಥ್ ರವರು ತಿಳಿಸಿದ್ದಾರೆ.

ಶ್ರೀ ನುಲಿಯ ಚಂದಯ್ಯ ರಾಜ್ಯ ಕೊರಮ ಜನಾಂಗದ ಅಂಬೇಡ್ಕರ್ ಸಿದ್ಧಾಂತ ವೇದಿಕೆಯ (ರಿ), ಸಂಸ್ಥಾಪಕಧ್ಯಕ್ಷ ಶ್ರೀ ಎಂ ಶ್ರೀನಿವಾಸ್ ಕಲ್ಲಹಳ್ಳಿ ರವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಸಿ ರಾಮಾಂಜಿನಿ , ಸೌಭಾಗ್ಯ ಹಾಗೂ ಎಲ್ಲ ಪ್ರದಾಧಿಕಾರಿಗಳ ವತಿಯಿಂದ ಶ್ರೀ ನುಲಿಯ ಚಂದಯ್ಯ ರಾಜ್ಯ ಕೊರಮ ಜನಾಂಗದ ಅಂಬೇಡ್ಕರ್ ಸಿದ್ಧಾಂತ ವೇದಿಕೆಯ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಘದ ವಾರ್ಷಿಕೋತ್ಸವ ಮತ್ತು ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ರವರ 134ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಸಾಧನೆಗಳು ಇಂದು ದೇಶಾದ್ಯಾಂತ ಪ್ರೇರಣೆಯಾದರೂ,



ಅವರ ತತ್ವಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಿ ಉಳಿಯುತ್ತವೆ.12ನೇ ಶತಮಾನದ ದಾರ್ಶನಿಕರಾದ ಬಸವಣ್ಣನವರ ಸಮಕಾಲಿನ ಶರಣರಾದ ನುಲಿಯ ಚಂದಯ್ಯ ಅವರು ರಚಿಸಿರುವ ಕಾಯಕ ಮತ್ತು ದಾಸೋಹದಂತಹ ವಚನಗಳಲ್ಲಿ ಸಮ ಸಮಾಜ ನಿರ್ಮಾಣದ ತಾತ್ವಿಕ ಚಿಂತನೆಗಳು ಅಡಗಿವೆ. ಹಾಗಾಗಿ ಅವರ ಜೀವನಾದರ್ಶಗಳನ್ನು ನಮ್ಮ ಬದುಕಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಕೊರಮ ಸಂಘದ ಅಧ್ಯಕ್ಷರಾದ ಶ್ರೀ ಜಿ.ಮಾದೇಶಣ್ಣ, ಶ್ರೀ ಎಂ ವೆಂಕಟೇಶ್, ಅಖಿಲ ಕರ್ನಾಟಕ ಕೊರಚ ಕೊರಮ ಮಹಾಸಭಾ ಹಾಗೂ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಸಂಪತ್ ಕುಮಾರ್, ಶ್ರೀ ಬಾಲಾಜಿ, ಯತಿರಾಜ್, ಗೋಪಾಲಕೃಷ್ಣ, ಡಾಕ್ಟರ್ ಜಗದೀಶ್, ಹಿರಿಯರಾದ ಶ್ರೀ ಪ್ರಸನ್ನ, ಶ್ರೀ ಮಂಜುನಾಥ್, ಶ್ರೀ ಮಂಜುನಾಥ ಎಲೆಕ್ಟ್ರಿಷಿಯನ್, ಶ್ರೀ ಗೋಪಿ, ಶ್ರೀ ಎಂ ಗಂಗಾಧರ್, ಶ್ರೀ ವರದರಾಜ್, ಈಶ್ವರಪ್ಪ ನಿವೃತ್ತ ಎಸ್ ಪಿ, ಹಾಗೂ ನಮ್ಮ ಕುಲ ಗುರುಗಳಾದ ಶ್ರೀ ನುಲಿಯ ಚಂದಯ್ಯ ರವರ ಹೆಸರಿನಲ್ಲಿ ನಿತ್ಯ 20 ರೂಗಳಿಗೆ ಹೊಟ್ಟೆ ತುಂಬಾ ಊಟವನ್ನು ನೀಡುತ್ತಿರುವ ಎಚ್ ಕೆ ಎಸ್ ಫೌಂಡೇಶನ್ ಹೇಮಂತ್ ಕುಮಾರ್, ಗೋವಿಂದ್ ಶೆಟ್ಟಿ ಇದ್ದರು.

# ಕನ್ನಿಕಾ ಪರಮೇಶ್ವರಿ ಜಯಂತಿ ಆಚರಣೆ

**ವಿಜಯಪುರ:** ಪಟ್ಟಣದ ಆರ್ಯವೈಶ್ಯ ಸಂಘ ಹಾಗೂ ಮಹಿಳಾ ಸಂಘಗಳ ಸಹಕಾರದೊಂದಿಗೆ ಇತಿಹಾಸ ಪ್ರಸಿದ್ಧ ಹರಿಹರ ಸಂಗಮ ಕ್ಷೇತ್ರ ಶ್ರೀನಗರೇಶ್ವರ ಸ್ವಾಮಿ ದೇವಾಲಯದಲ್ಲಿ 23ನೇ ವರ್ಷದ ವಾಸವಿ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. .

ಪಟ್ಟಣದ ಆರ್ಯ ವೈಶ್ಯ ಮಂಡಳಿಯವರು, ಅರ್ಚಕರಾದ ವೆಂಕಟೇಶ ಗುಪ್ತ ರವರ ನೇತೃತ್ವದಲ್ಲಿ ದೇವನಹಳ್ಳಿ ಇಂದ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ದೇವಿಯವರ ಉತ್ಸವ ಮೂರ್ತಿಯನ್ನು ವಿಜಯಪುರಕ್ಕೆ ತಂದು ಇಲ್ಲಿನ ಶ್ರೀ ನಗರೇಶ್ವರ ಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿ, ಬೆಳಗಿನಿಂದ ಗಣಪತಿ ಹೋಮದೊಂದಿಗೆ ಮತ್ತಿತರ ಹೋಮ ಹವನಾದಿಗಳನ್ನು ನಡೆಸಿ ಪೂರ್ಣಹುತಿ ನೀಡಿ, ವಾಸವಿ ದೇವಿಯವರಿಗೆ ಆರತಿ ಬೆಳಗಲಾಯಿತು.

ಮದುವೆಯಾಗದ ಹೆಣ್ಣು ಮಕ್ಕಳನ್ನು ಕುಳ್ಳಿರಿಸಿ ಅವರನ್ನು ಪೂಜಿಸಿ ಅರಿಶಿಣ ಕುಂಕುಮ ಕಾಣಿಕೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅರ್ಚಕರಾದ ವೆಂಕಟೇಶ ಗುಪ್ತಾರವರು ಪೆನುಗೊಂಡಾದ ಕುಸುಮ ಶ್ರೇಷ್ಠಿ ಹಾಗೂ ಕುಸುಮಾಂಬೆ ದಂಪತಿಗಳ ಪುತ್ರಿಯಾದ ವಾಸವಿ ಮಾತೆ ಬಾಲ್ಯದಿಂದಲೇ ತನ್ನನ್ನು ತಾನು ಶಿವನಿಗೆ ಅರ್ಪಿಸಿಕೊಂಡಿದ್ದು, ಬಲವಂತದಿಂದ ವಿವಾಹವಾಗಲು ಬಂದ ದೊರೆ ವಿಷ್ಣುವರ್ಧನ್ ನಿಂದ ದೂರ ಹೋಗಿ ತಾಯಿ ಕನ್ನಿಕಾ ಪರಮೇಶ್ವರಿ ತನ್ನನ್ನು ತಾನು ಅಗ್ನಿಗೆ ಸಮರ್ಪಿಸಿಕೊಂಡಳೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರ್ಯ ವೈಶ್ಯ ಸಂಘದ ಜಯಂತ ಬಾಬು, ಪ್ರಕಾಶ್, ಅಶೋಕ್, ಅರ್ಜುನ್, ಆರ್ ಬಿ ಶಿವಕುಮಾರ್, ಶ್ರೀನಿವಾಸ್, ಮುನಿಯಪ್ಪ, ಸುನಿಲ್, ನಾಗೇಂದ್ರ, ಆವತಿ ನಾರಾಯಣಶೆಟ್ಟಿ, ಪಶುವೈದ್ಯರಾದ ಡಾ. ರಾಜೇಶ್ ಹಾಗೂ ಆರ್ಯ ವೈಶ್ಯ ಮಹಿಳಾ ಸಂಘದ ಶ್ರೀವಳ್ಳಿ, ಪ್ರಮೀಳಮ್ಮ, ಪದ್ಮಲತಾ, ಪದ್ಮಕ್ಕ ಹಾಗೂ ದೇವನಹಳ್ಳಿ, ಆವತಿ, ಜಂಗಮಕೋಟೆ, ಕಂತಳ್ಳಿ, ಕೊಳವನಹಳ್ಳಿ, ಮುತ್ತೂರು ಮತ್ತಿತರರು ಕಡೆಗಳಿಂದಲೂ ನೂರಾರು ಮಂದಿ ಆರ್ಯ ವೈಶ್ಯರು ಆಗಮಿಸಿದ್ದರು.



# ಜಾತಿಗಣತಿಯ ಸಮೀಕ್ಷೆ ಮೂಲ ಜಾತಿಗಳ ಹೆಸರು ನಮೂದಿಸಿ

**ವಿಜಯಪುರ:** ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಒಳಮೀಸಲಾತಿ ಜಾರಿಗೊಳಿಸಬೇಕೆನ್ನುವ ಉದ್ದೇಶದಿಂದ ಮೇ 5 ರಿಂದ ನಡೆಯುತ್ತಿರುವ ಜಾತಿಗಣತಿಯ ಸಮೀಕ್ಷೆಯಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು, ನಿಮ್ಮ ನಿಮ್ಮ ಮೂಲ ಜಾತಿಗಳ ಹೆಸರು ಬರೆಯಿಸಬೇಕು ಎಂದು ಬಿ.ಎಸ್.ಪಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದಿಗುಂದ ವೆಂಕಟೇಶ್ ಮನವಿ ಮಾಡಿದರು.

ಪಟ್ಟಣದ 19 ನೇ ವಾರ್ಡಿನ ರಾಜೀವ್ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲಿ ಆದಿಕರ್ನಾಟಕ, ಆದಿದ್ರಾವಿಡ ಎಂಬ ಪಂಗಡಗಳಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಸಮುದಾಯಗಳ ಉಪಜಾತಿಗಳ ಜನರು, ಜಾತಿ ಪ್ರಮಾಣ ಪತ್ರಗಳನ್ನು ಮಾಡಿಸಿಕೊಂಡಿದ್ದು, ಈಗ ಜಾತಿ ಸಮೀಕ್ಷೆಯ ವೇಳೆ, ಪರಿಶಿಷ್ಟ ಜಾತಿಯಲ್ಲಿ ಉಪಜಾತಿಯಾಗಿರುವ ಮಾದಿಗ, ಹೊಲೆಯ, ಬೋವಿ, ಲಂಬಾಣಿ, ಕೊರಚ, ಕೊರಮ, ದಕ್ಕಲಿಗ, ಮುಂತಾದ ಜಾತಿಗಳವರು, ತಮ್ಮ ಮೂಲ ಜಾತಿಯನ್ನೆ ಬರೆಯಿಸಬೇಕು. ಪ್ರತಿಯೊಂದು ಗ್ರಾಮದಲ್ಲಿನ ಯುವಕರು ಸ್ಥಳೀಯರು ಜನರಿಗೆ ಜಾಗೃತಿ ಮೂಡಿಸಿ, ಸಹಕಾರ ನೀಡಬೇಕು ಎಂದರು.

ಪರಿಶಿಷ್ಟ ಜಾತಿಯ ಮೀಸಲಾತಿ ಕಸಿಯಲಾಗುತ್ತಿದೆ: ಕರ್ನಾಟಕ ರಾಜ್ಯದಲ್ಲಿ ಲಿಂಗಾಯಿತ-ವೀರಶೈವ ಸಮಾಜದ ಹೊನ್ನಾಳಿಯ ರೇಣುಕಾಚಾರ್ಯ ಮತ್ತು ಕೆಲವು ಮಠಾಧೀಶರು, ಪರಿಶಿಷ್ಟಜಾತಿಗೆ ಲಭ್ಯವಿರುವ ಮೀಸಲಾತಿ ಕಬಳಿಕೆಗೆ ಮುಂದಾಗಿದ್ದಾರೆ. ಹಾಲಿ ನಡೆಯುತ್ತಿರುವ ಪರಿಶಿಷ್ಟಜಾತಿ ಜನಗಣತಿಯಲ್ಲಿ ತಮ್ಮನ್ನು ಬೇಡಜಂಗಮ, ಬುಡಗಜಂಗಮ ಎಂದು ದಾಖಲಿಸುವಂತೆ, ಜನರಿಗೆ ಅರಿವು ಮೂಡಿಸಲು ಸಂಘವನ್ನು ರಚಿಸಿಕೊಂಡು ವ್ಯಾಪಕ



ಪ್ರಚಾರ ಮಾಡುತ್ತಿರುವುದು ಅತ್ಯಂತ ಶೋಚನೀಯ. ಸ್ವತಃ ರೇಣುಕಾಚಾರ್ಯ ಅವರ ಅಣ್ಣ ದಾರಕೇಶ್ವರಯ್ಯ ಮತ್ತು ಅವರ ಮಕ್ಕಳು, ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರದ ಸೌಲತ್ತುಗಳನ್ನು ಕಬಳಿಸಿದ್ದಾರೆ. ರಾಜ್ಯ, ತೆಲಂಗಾಣ, ಆಂದ್ರ, ಮಹಾರಾಷ್ಟ್ರ ಗಡಿಭಾಗದಲ್ಲಿರುವ ಬೇಡಜಂಗಮ ಮತ್ತು ಬುಡುಗ ಜಂಗಮರು ಮಾಂಸಾಹಾರಿಗಳು. ಇವರು, ಕಣಿ ಹೇಳುವ ಮತ್ತು ಭೇಟೆಯಾಡುವ ಕಾಯಕದಲ್ಲಿ ತೊಡಗಿದ್ದಾರೆ. ಇವರ ಎಲ್ಲಾ ಶುಭಕಾರ್ಯಗಳಲ್ಲಿ ಮಾಂಸಹಾರ ಸೇವಿಸುತ್ತಾರೆ. ಅಲ್ಲಲ್ಲಿ ಧಾರ್ಮಿಕ ವಿಷಯಗಳ ಕುರಿತು ಬುರಕಥೆ ನಾಟಕಗಳನ್ನು ಪ್ರದರ್ಶಿಸುತ್ತಿದ್ದು, ಬಹುತೇಕರು ಅನಕ್ಷರಸ್ಥರಾಗಿದ್ದಾರೆ. ಇಂತಹ ಕುಟುಂಬಗಳ ಸಂಖ್ಯೆ ಕಡಿಮೆ. ಆದರೆ, ವೀರಶೈವ-ಲಿಂಗಾಯಿತ ಸಮಾಜದ ಕೆಲವರು ಪ್ರಭಾವಿಗಳ ಪ್ರಚೋದನೆಯಿಂದ ಲಿಂಗಾಯಿತರು, ಬೇಡಜಂಗಮ, ಬುಡುಗಜಂಗಮ ಹೆಸರಿನಲ್ಲಿ ಪರಿಶಿಷ್ಟಜಾತಿ ಪ್ರಮಾಣಪತ್ರ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಇವರ ಅಕ್ರಮಗಳ ಬಗ್ಗೆ ಇವರ ಜನಸಂಖ್ಯೆ ಪ್ರಮಾಣವು ಅಸ್ವಾಭಾವಿಕವಾಗಿ ಏರಿಕೆಯಾಗಿದೆ. 2001 ರ ಜನಗಣತಿಯಲ್ಲಿ 54.873, 2010 ರ ಸದಾಶಿವ ಆಯೋಗದ ವರದಿಯಲ್ಲಿ 20,289, 2011 ರಲ್ಲಿ 1.17,164, 2014 ರ ಕಾಂತರಾಜು ಆಯೋಗದ ವರದಿ 4.10,804 ಕ್ಕೆ ಏರಿಕೆಯಾಗಿದ್ದು, 2025 ಜಾತಿ ಜನಗಣತಿಯಲ್ಲೂ ಬೇಡಜಂಗಮ, ಬುಡಗಜಂಗಮ ಹೆಸರಿನಲ್ಲಿ ಪರಿಶಿಷ್ಟಜಾತಿಯ ಮೀಸಲಾತಿಯನ್ನು ಕಬಳಿಕೆ ಮಾಡುವುದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕು, ಸುಳ್ಳು ಜಾತಿ ಪತ್ರವನ್ನು ರದ್ದುಗೊಳಿಸಬೇಕು. ಅಂತಹವರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಕಾರ್ಯದರ್ಶಿ ಎಂ.ನಾಗರಾಜ್, ಜಿಲ್ಲಾ ಮಹಿಳಾ ಅಧ್ಯಕ್ಷೆ ರಾಧ, ತಾಲ್ಲೂಕು ಉಪಾಧ್ಯಕ್ಷ ದೇವರಾಜ್, ಗುರುಪ್ರಸಾದ್, ತಾಲ್ಲೂಕು ಪ್ರ.ಕಾ.ವೇಣುಗೋಪಾಲ್, ವಿಜಯಪುರ ಹೋಬಳಿ ಉಸ್ತುವಾರಿ ಜಗದೀಶ್, ಟೌನ್ ಅಧ್ಯಕ್ಷ ಎಸ್.ಐ.ನಾರಾಯಣಸ್ವಾಮಿ, ಮುನಿಗಂಗಪ್ಪ, ಶಂಕರಪ್ಪ,ಗೋವಿಂದ, ರಂಗಪ್ಪ, ಮೈಲಾರಪ್ಪ, ನಂಜುಂಡಪ್ಪ, ದೀಪಿಕಾ,ಮೇಘಾ, ನರಸಮ್ಮ, ಜಾನಿ, ಮುಂತಾದವರು ಹಾಜರಿದ್ದರು.

# ಕಾನೂನು ಕಾಪಾಡುವವರೆ ಶಾಸಕರ ತಾಳಕ್ಕೆ ಕುಣಿಯುತ್ತಿರುವುದು ಶೋಚನೀಯ

**ಮಾಲೂರು:** ನೀವು ಶಾಸಕರಾಗಿರುವುದೇ ನನ್ನಿಂದ ತಾಲ್ಲೂಕಿನಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿರುವುದರ ಜೊತೆಗೆ ದ್ವೇಷದ ರಾಜಕಾರಣ ಮಾಡುತ್ತಿದ್ದು ಕಾನೂನು ವ್ಯವಸ್ಥೆ ಕಾಪಾಡುವವರೆ ಶಾಸಕರ ತಾಳಕ್ಕೆ ಕುಣಿಯುತ್ತಿರುವುದು ಶೋಚನೀಯ ಎಂದು ಸ್ವಾಭಿಮಾನಿ ಜನತಾ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಹೂಡಿ ವಿಜಯ್ ಕುಮಾರ್ ಅವರು ತಿಳಿಸಿದರು.



ತಾಲ್ಲೂಕಿನ ಹಂಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡ ಕಡತೂರು ಗ್ರಾಮದಲ್ಲಿ ಸ್ವಾಭಿಮಾನಿ ಜನತಾ ಪಕ್ಷ ಹಾಗೂ ಸಪ್ತಗಿರಿ ಆಸ್ಪತ್ರೆ, ಬೆಂಗಳೂರು ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ವಾಭಿಮಾನಿ ಜನತಾ ಪಕ್ಷ ಪಕ್ಷದಿಂದ ಸ್ವತಂತ್ರವಾಗಿ ಕಣಕ್ಕಿಳಿದು ನನಗೆ ತಾಲ್ಲೂಕಿನ ಜನತೆ ಸುಮಾರು 50 ಸಾವಿರ ಮತಗಳನ್ನು ನೀಡಿ ಬೆಂಬಲಿಸಿದ್ದಾರೆ. ಆದರೆ ಇಲ್ಲಿನ ಶಾಸಕರು ಜನಾಂಗಗಳ ನಡುವೆ ತಂದಿಟ್ಟು ಒಂದು ಜನಾಂಗವನ್ನು ಯಾಮಾರಿಸಿ ಮತ ಪಡೆದಿದ್ದಾರೆ ಎಂದು ಪ್ರಚಾರ ಮಾಡುತ್ತಿದ್ದು. ಮಾಲೂರು ತಾಲ್ಲೂಕಿನಲ್ಲಿ ಸುಮಾರು 18 ಸಾವಿರ ಜನ ಮಾತ್ರ ನಮ್ಮ ಸಮುದಾಯದವರಿದ್ದಾರೆ. ತಾಲ್ಲೂಕಿನ ಎಲ್ಲಾ ಸಮುದಾಯದ ಜನತೆ ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಕಳೆದ ಚುನಾವಣೆಯಲ್ಲಿ ನಾನು ಸ್ವತಂತ್ರ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದುಕೊಂಡಿದ್ದಕ್ಕೆ ಇವರು ಶಾಸಕರಾಗಲು ಕಾರಣವಾಯಿತು. ಆದರೆ ಶಾಸಕರಾದ ಮೇಲೆ ತಾಲ್ಲೂಕಿನಲ್ಲಿ ದ್ವೇಷದ ರಾಜಕಾರಣ ಮಾಡುತ್ತಾ ವಿರೋಧ ಪಕ್ಷದವರಿಗೆ ತೊಂದರೆ ನೀಡುತ್ತಿದ್ದಾರೆ. ಇನ್ನೂ ಇತ್ತೀಚಿಗೆ ತೊರಲಕ್ಕಿ ಗ್ರಾಮದ ಜಾತ್ರಾ ಮಹೋತ್ಸವದ ಪ್ರಯುಕ್ತ ನಮ್ಮ ಸ್ವಾಭಿಮಾನಿ ಜನತಾ ಪಕ್ಷದ ಹೋಬಳಿ ಅಧ್ಯಕ್ಷ ಗೋಪಾಲ್ ಅವರು ಅನ್ನದಾನ ಮಾಡಲು ನಮಗೆ ತಿಳಿಸಿದ್ದು ಅದರಂತೆ ಗ್ರಾಮದಲ್ಲಿ ಜಾತ್ರಪಯುಕ್ತ ನಮ್ಮ ಪಕ್ಷದ ಮುಖಂಡರ ಹಾಗೂ ಗ್ರಾಮದೇವತೆಯ ಭಾವಚಿತ್ರವನ್ನು ಒಳಗೊಂಡ ಬ್ಯಾನರನ್ನು ತೊರಲಕ್ಕಿ ಗ್ರಾಮದಲ್ಲಿ ಅಳವಡಿಸುವ ಸಂದರ್ಭದಲ್ಲಿ ಕೆಲ ಯುವಕರು ಬಂದು ಅಡ್ಡಿ ಪಡಿಸಿದ ಹಿನ್ನಲೆ ಬೇರೆ ಜಾಗದಲ್ಲಿ ಕಟ್ಟಲು ಹೊರಟಾಗ ಶಾಸಕರ ಸಹೋದರ ಈರೇಗೌಡ ಅವರು ಫೋನ್ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಸ್ಥಳಕ್ಕೆ ಬಂದು ಏಕಾಏಕಿ ಕೈ ಮಾಡಿ ಹಲ್ಲೆ ಮಾಡಿದರು. ಈ ಹಿನ್ನಲೆ ನಿನ್ನೆ ಮಾಸ್ತಿ ಪೋಲಿಸ್ ಸ್ಟೇಷನ್ ನಲ್ಲಿ ಪ್ರಕರಣ ದಾಖಲು ಮಾಡುವಂತೆ ನಮ್ಮ ಸ್ವಾಭಿಮಾನ ಜನತಾ ಪಕ್ಷದ ಮುಖಂಡರು ಹಾಗೂ ಹಲ್ಲೇಗೊಳಗಾದ ಗೋಪಾಲ್ ಅವರು ಹೋಗಿ ದೂರು ನೀಡಿದಾಗ ಪ್ರಕರಣ ದಾಖಲಿಸದೆ ಹೈಡ್ರಾಮ ನಡೆಸಿ ತಮಗೆ ಅನುಕೂಲವಾಗುವಂತೆ ದೂರು ಬರೆಯಿಸಿಕೊಂಡು ಸುಮಾರು 12 ಗಂಟೆಗಳ ಕಾಲ ಕಾಯಿಸಿ ಪ್ರಕರಣ ದಾಖಲಿಸಿ ಎಫ್ ಐ ಆರ್ ಕಾಫಿ ನೀಡುವಾಗ ಈರೇಗೌಡ ಅವರ ಚಾಲಕ ಮತ್ತು ಇತರರು ಎಂದು ನೀಡಿದ್ದು ಇಲ್ಲಿನ ಅಧಿಕಾರಿಗಳು ಶಾಸಕರ ಕುಟುಂಬವನ್ನು ರಕ್ಷಣೆ ಮಾಡಲು ನಿಂತಿದ್ದು ಸಾರ್ವಜನಿಕರಿಗೆ ನ್ಯಾಯ ಸಿಗದಂತಾಗಿದೆ. ತಾಲ್ಲೂಕಿನಲ್ಲಿ ಕಾನೂನು ಕಾಪಾಡುವವರೆ ಶಾಸಕರ ತಾಳಕ್ಕೆ ಕುಣಿಯುತ್ತಿರುವುದು ಶೋಚನೀಯ. ಇದರಿಂದಾಗಿ ಈ ವಿಚಾರವನ್ನು ಐಜಿ ಅವರ ಗಮನಕ್ಕೆ ತಂದು ಕಾನೂನು ಹೋರಾಟ ಮಾಡಲಾಗುವುದು. ತಾಲ್ಲೂಕಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮುಂದಿನ ದಿನಗಳಲ್ಲಿ ದಾಖಲೆಗಳ ಸಮೇತ ಮತ್ತೇ ಬರಲಾಗುವುದು. ಹಾಗೇ ಮುಖ್ಯವಾಗಿ ಇನ್ನೂ ಸ್ವಾಭಿಮಾನಿ ಜನತಾ ಪಕ್ಷ ಹಾಗೂ ಸಪ್ತಗಿರಿ ಆಸ್ಪತ್ರೆಯ ವತಿಯಿಂದ ಸಾಮಾನ್ಯ ಜನರ ಆರೋಗ್ಯ ರಕ್ಷಣೆಗಾಗಿ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜನೆ ಮಾಡುತ್ತಿದ್ದು ಈಗಾಗಲೇ ಮಾಲೂರು ಪಟ್ಟಣ ಸೇರಿದಂತೆ ಚಿಕ್ಕತಿರುಪತಿ, ಮಾಸ್ತಿ, ಲಕ್ಕೂರು ಗ್ರಾಮ ಪಂಚಾಯಿತಿಗಳಲ್ಲಿ ಯಶಸ್ವಿಯಾಗಿ ಶಿಬಿರಗಳನ್ನು ಆಯೋಜಿಸಿದ್ದು ಇಂದು ಮಾಲೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ಕರ್ನಾಟಕ ಸರ್ಕಾರ ರೇಷ್ಮೆ ಮಹಾಮಂಡಳಿ ಅಧ್ಯಕ್ಷರಾದ ದಿವಂಗತ ಹೆಚ್. ಬಿ. ದ್ಯಾವೀರಪ್ಪನವರ ನೆನಪಿನಾರ್ಥವಾಗಿ ಹಂಗೇನಹಳ್ಳಿ ಗ್ರಾಮ ಪಂಚಾಯತಿಯ ದೊಡ್ಡಕಡತೂರು ಗ್ರಾಮದ ಸರ್ಕಾರಿ ಶಾಲಾ ಆವರಣದಲ್ಲಿ ಆಯೋಜಿಸಿದ್ದು ಎಲ್ಲರೂ ಈ ಸುವರ್ಣ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಸ್ವಾಭಿಮಾನಿ ಜನತಾ ಪಕ್ಷದ ತಾಲೂಕು ಅಧ್ಯಕ್ಷ ಆರ್ ಪ್ರಭಾಕರ್, ಬಿ ಆರ್ ವೆಂಕಟೇಶ್ ಮಾಜಿ ಶಾಸಕ ದ್ಯಾವೀರಪ್ಪನವರ ಮೊಮ್ಮಗ ಬಾಬು, ಶ್ರೀನಾಥ್, ಗೋಪಾಲ್ ಗೌಡ, ಮಾಜಿ ಪುರಸಭೆ ಸದಸ್ಯ ಕುಟ್ಟಿ, ರಾಮಕೃಷ್ಣ, ಸುಬ್ಬಣ್ಣ, ಸೋಮಣ್ಣ, ಶ್ರೀನಾಥ್, ನಹೀಮ್, ಲೀಲಾವತಿ, ಗಿರೀಶ್, ಗೋಪಾಲ್, ಶ್ರೀವಲ್ಲಿ, ಸುರೇಶ್ ಗೌಡ, ಮಣಿ, ಅಂಬರೀಷ್ ರೆಡ್ಡಿ ಸೇರಿದಂತೆ ಇನ್ನಿತರರು ಇದ್ದರು.

## ವಿಶ್ವತಾಯಂದಿರ ದಿನಾಚರಣೆ

**ಮೈಸೂರು:** ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯತಾಣ ವಾತ್ಸಲ್ಯ ಸೇವಾಕೇಂದ್ರದಲ್ಲಿ ಇಂದು ವಿಶ್ವತಾಯಂದಿರ ದಿನಾಚರಣೆಯನ್ನು ಹಿರಿಯ ಜೀವಿಗಳೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಎ.ಸಿ.ರವಿಕುಮಾರ್ ರವರು ಮಾತಾನಾಡಿಇಂದು ನಾವು ವಿಶ್ವತಾಯಂದಿರ ದಿನವನ್ನುಆಚರಿಸುತ್ತಿದ್ದೇವೆ, ಇದುಅತ್ಯಂತ ಸಂತೋಷದ ಸಂಗತಿ.ತಾಯಿಯಋಣವನ್ನು ಎಂದಿಗೂ ತೀರಿಸಲಾಗದು, ತಾಯಿ ನಮಗೆ ಜನ್ಮ ನೀಡುವುದರಜೊತೆಗೆತಾಯಿಯೇ ಮೊದಲ ಗುರುವಾಗಿ ನಮಗೆ ಸಂಸ್ಕಾರವನ್ನು ನೀಡಿತ್ಯಾಗಮಯಿಯಾಗಿ ಬದುಕಲು ಪ್ರೇರಪಣೆ ನೀಡುತ್ತಾಳೆ.ಅಂತಹ ಮಾತೆಯ ದಿನವನ್ನು ನಾವು ಪ್ರತಿದಿನವೂ ನೆನೆಪಿಸಿಕೊಳ್ಳುವುದು ನಮ್ಮೆಲ್ಲರಕರ್ತವ್ಯವಾಗಬೇಕುಎಂದು ತಿಳಿಸಿದರು.ಆಶ್ರಮದಗೌರವ ಕಾರ್ಯದರ್ಶಿಗಳಾದ ಶ್ರೀಮತಿ ನಾಗರತ್ನರವರು ಮಾತನಾಡಿತಾಯಿಯೇದೇವರುಒಂಬತ್ತು ತಿಂಗಳು ಹೆತ್ತು ಹೊತ್ತು ಸಾಕಿ ಸಲುಹಿ ಮಕ್ಕಳನ್ನು ಬೆಳಸುತ್ತಾಳೆ. ಅಂತಹ ಮಾತೆಯನ್ನು ಮುಂದಿನ ದಿನಗಳಲ್ಲಿ ಮಕ್ಕಳು ಚೆನ್ನಾಗಿ ನೋಡಿಕೊಳ್ಳುವುದು ಅವರಜವಾಬ್ದಾರಿಯಾಗಬೇಕು, ತಾಯಿಯ ವಾತ್ಸಲ್ಯ ಮಮತೆಗೆ ಬೆಲೆ ಕಟ್ಟಲಾಗದುಅಂತಹಜನ್ಮದಾತೆಯನ್ನು ಸ್ಮರಿಸುವುದು ನಮ್ಮೆಲ್ಲರಕರ್ತವ್ಯ ಹಾಗೂ ಜವಾಬ್ದಾರಿ, ಒತ್ತಡದ ಬದುಕಿನಲ್ಲಿ ಮನೆಯ ಹಿರಿಯ ಜೀವಿಗಳನ್ನು ಗೌರವಕೊಟ್ಟು ನಡೆಸಿಕೊಳ್ಳುವುದು ಪ್ರಸ್ತುತ ದಿನಗಳಲ್ಲಿ ಪ್ರಮುಖವಾಗಿದೆಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಜೀವಿಗಳಿಗೆ ಸಿಹಿ ವಿತರಿಸಿ ಗೌರವ ಸಲ್ಲಿಸಲಾಯಿತು.



## ದಾಸೋಹ ಸೇವೆಯಿಂದ ಬದುಕು ಸಾರ್ಥಕ

**ಮಂಡ್ಯ :** ಮನುಷ್ಯನಲ್ಲಿರುವ ಅಹಂಕಾರ ಮನೋಭಾವ ಹೋಗಲಾಡಿಸಲು ವಿಶ್ವಗುರು ಬಸವಣ್ಣನವರ ಕಾಯಕ ಮತ್ತು ದಾಸೋಹ ಭಾವವನ್ನು ಬೆಳೆಸಿಕೊಳ್ಳಬೇಕೆಂದು ನಾಗಮಂಗಲ ಕಾಂಗ್ರೆಸ್ ಮುಖಂಡ ಹೊನ್ನಾವರ ಪುಟ್ಟರಾಜು ಹೇಳಿದರು.

ನಗರದ ಸ್ವರ್ಣಸಂದ್ರ, ಬಡಾವಣೆಯ ಪರಮಪೂಜ್ಯ ಡಾ.ಶ್ರೀ ಶಿವಕುಮಾರಮಹಾಸ್ವಾಮೀಜಿಯವರ ಉದ್ಯಾನವನದಲ್ಲಿ ಕಾಯಕಯೋಗಿ ಫೌಂಡೇಶನ್ ಹಾಗೂ ಸಿದ್ದಗಂಗಾಶ್ರೀ ಸೇವಾ ಸಮಿತಿ ವತಿಯಿಂದ ನಡೆದ ಬುದ್ಧಪೂರ್ಣಿಮಾ ಕಾರ್ಯಕ್ರಮದಲ್ಲಿ ದಾಸೋಹಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವಕ್ಕೆ ಶಾಂತಿ ಮಂತ್ರ ಬೋದಿಸಿದ ಮಹಾಮಾನವತಾವಾದಿ ಭಗವಾನ್ ಬುದ್ಧರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಂಡಾಗ ಯುದ್ಧ, ಅಶಾಂತಿ, ಅಸಮಾನತೆ ದೂರಾಗುತ್ತದೆ. ಬುದ್ಧ, ಬಸವಣ್ಣ, ಅಂಬೇಡ್ಕರ್, ನಾಡಪ್ರಭು ಕೆಂಪೇಗೌಡ, ಅಬ್ದುಲ್ ಕಲಾಂ ಅವರಂತಹ ಆದರ್ಶ ಪುರುಷರು ನಮಗೆ ದಾರಿದೀಪವಾಗಬೇಕೆಂದರು.

ಲಿಂಗಾಯತ ಮಹಾಸಭಾ ಅಧ್ಯಕ್ಷ ಎಂ.ಎಸ್.ಮಂಜುನಾಥ್ ಬೆಟ್ಟಹಳ್ಳಿ ಮಾತನಾಡಿ, ಪ್ರತಿಯೊಬ್ಬರಿಗೂ ವಿದ್ಯೆ, ಅನ್ನ, ಆಸರೆ ದೊರೆಯುವಂತಾಗಬೇಕೆಂದು ನೂರಾರು ವರ್ಷಗಳಿಂದ ದಾಸೋಹ ಸೇವೆ ನಡೆಸುತ್ತಾ ಬಂದಿರುವ ಶ್ರೀ ಸಿದ್ದಗಂಗಾಮಠದ ಪೀಠಾಧ್ಯಕ್ಷರಾಗಿದ್ದ ಲಿಂಗೈಕ್ಯ ಪರಮಪೂಜ್ಯ ಸಿದ್ದಗಂಗಾಶ್ರೀಗಳ ಸಂಸ್ಮರಣೆಯ ಅಂಗವಾಗಿ ಪ್ರತಿ ಹುಣ್ಣಿಮೆಯಂದು ದಾಸೋಹ ನಡೆಸುತ್ತಾ ಬಂದಿರುವ ಕಾಯಕಯೋಗಿ ಫೌಂಡೇಶನ್ ಕಾರ್ಯ ಶ್ಲಾಘನೀಯ ಎಂದರು. ಬಡತನ, ನಿರುದ್ಯೋಗ, ಹಸಿವು ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಅಣ್ಣ ಬಸವಣ್ಣನವರ ಕಾಯಕತತ್ವವನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು. ದುಡಿದು ತಿನ್ನುವ ಪ್ರವೃತ್ತಿಯಿಂದ ಸಮಾಜದಲ್ಲಿ ಸಾಮರಸ್ಯ, ಶಾಂತಿ ಮನೆಮಾಡುತ್ತದೆ. ದುಡಿಮೆಯನ್ನು ಹಂಚಿ ತಿನ್ನುವ ದಾಸೋಹ ಭಾವದಿಂದ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ ಎಂದರು.

ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಜನನ ಮರಣದ ಅಂತರದ ಅರ್ಥವನ್ನು ತಮ್ಮ ಸಂದೇಶದ ಮೂಲಕ ಇಡೀ ಜಗತ್ತಿಗೆ ಸಾರಿದ ಬುದ್ಧನ ಆದರ್ಶಗಳನ್ನು ಪ್ರತಿಯೊಬ್ಬರೂ ಅರಿಯಬೇಕಾದ ಅನಿವಾರ್ಯತೆ ಇಂದಿನ ದಿನಮಾನದಲ್ಲಿ ಎದುರಾಗಿದೆ. ಕಲಹಗಳಿಂದಲೇ ಉದಯವಾಗುವ ಸೂರ್ಯೋದಯ ಬುದ್ಧ, ಬಸವ, ಮಹಾವೀರನ ಶಾಂತಿಯ ಮಂತ್ರದಿಂದ ಅಂತ್ಯಕಾಣಬೇಕಾಗಿದೆ ಎಂದು ಮಾರ್ಮಿಕವಾಗಿ ನುಡಿದರು. ಬಸವಣ್ಣನವರ ಆದರ್ಶಗಳನ್ನು ತಮ್ಮ ನೂರ ಹನ್ನೊಂದು ವರ್ಷಗಳ ಜೀವಿತಾವಧಿಯ ಕಾಲದಲ್ಲಿ ಚಾಚೂತಪ್ಪದೆ ಅನುಸರಿಸುತ್ತಾ ಬಂದು ಕೋಟ್ಯಾಂತರ ಭಕ್ತರ ಭಾವಕೋಶದಲ್ಲಿ ನೆಲೆಯಾಗಿರುವ ಸಿದ್ದಗಂಗಾಶ್ರೀಗಳು ಎಲ್ಲಾ ಜಾತಿ ಧರ್ಮದವರಿಗೂ ಶಿಕ್ಷಣ, ಅನ್ನ, ಆಸರೆಯನ್ನು ನೀಡಿದ ಕಾಯಕಯೋಗಿ. ಈ ಶತಮಾನ ಕಂಡ ದೇವಮಾನವ ಎಂದು ಬಣ್ಣಿಸಿದರು. ಮುಖಂಡರಾದ ಎಂ.ಆರ್. ಮಂಜುನಾಥ್, ಬಸರಾಳು ಬಸವರಾಜ್, ಚಿಕ್ಕಬಳ್ಳಿ ಅಭಿಷೇಕ್, ಬಿಜೆಪಿ ಮುಖಂಡ ಜಗದೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬುದ್ಧರ ಮೌಲ್ಯಯುತ ಆದರ್ಶ ಚಿಂತನೆಗಳು ವಿಶ್ವಶಾಂತಿಗೆ ಪ್ರೇರಕ

**ಚಾಮರಾಜನಗರ:** ಭಗವಾನ್ ಬುದ್ಧರು ಪ್ರಸ್ತುತಪಡಿಸಿದ ಸಮಾನತೆ, ಸಹೋದರತೆ, ಭ್ರಾತೃತ್ವದಂತಹ ಮೌಲ್ಯಯುತ ಆದರ್ಶ ಚಿಂತನೆಗಳು ವಿಶ್ವಶಾಂತಿಗೆ ಪ್ರೇರಕವಾಗಿವೆ ಕೊಳ್ಳೇಗಾಲ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ತಿಳಿಸಿದರು.



ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 2569ನೇ ಬುದ್ಧ ಪೂರ್ಣಿಮೆ ಅಂಗವಾಗಿ ಆಯೋಜಿಸಲಾಗಿದ್ದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಡೀ ಜಗತ್ತಿಗೆ ಶಾಂತಿಮಂತ್ರ ಬೋಧಿಸಿದ ಬುದ್ಧರ ಜಯಂತಿಯನ್ನು ಇದೇ ಮೊದಲ ಬಾರಿಗೆ ಆಚರಿಸುವ ಮೂಲಕ ಸರ್ಕಾರ ಉತ್ತಮ ನಿರ್ಧಾರ ಕೈಗೊಂಡಿದೆ. ಇದೊಂದು ಗೌರವಪೂರ್ವಕ ಕಾರ್ಯಕ್ರಮವಾಗಿದೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಕಣ್ಣೀರು ಒರೆಸಿದ ಬುದ್ಧ ಪರಿಪೂರ್ಣ ಜೀವನದ ಆತ್ಮವಿಶ್ವಾಸ ತುಂಬಿದರು. ಹುಟ್ಟು ಸಾವುಗಳ ಮಧ್ಯೆ ಇರಬೇಕಾದ್ದು ಪ್ರೀತಿ ಮಾತ್ರ ಎಂದು ಸಾರಿದ ಬುದ್ಧ ಮಾನವಪ್ರೇಮವನ್ನು ಜಗತ್ತಿಗೆ ಉಣಬಡಿಸಿದರು ಎಂದರು.

ಮನುಕುಲಕದ ಒಳಿತಿಗೆ ಸ್ಪಂದಿಸುವುದೇ ನಿಜವಾದ ಧರ್ಮ, ಅದು ಬೌದ್ಧದರ್ಮವಾಗಿದೆ. ಬುದ್ಧ ಅವರ ವೈಚಾರಿಕ ಪ್ರಜ್ಞೆಯಿಂದ ಕೂಡಿದ ತತ್ವ ಆದರ್ಶ ಚಿಂತನೆಗಳಿಗೆ ಮಾರುಹೋದವರೇ ಇಲ್ಲ. ವಿಶ್ವಶಾಂತಿಗೆ ಬುದ್ಧರ ಮೌಲ್ಯಯುತ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು ಸೂಕ್ತವಾಗಿದೆ. ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಭಗವಾನ್ ಬುದ್ಧರ ಮಹತ್ವವನ್ನು ಅರಿತು 1956ರಲ್ಲಿ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮ ಸ್ವೀಕರಿಸಿದರು ಎಂದು ಶಾಸಕರಾದ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರು ಮಾತನಾಡಿ ಬುದ್ಧ ಅವರ ಎಲ್ಲಾ ಚಿಂತನೆಗಳು ಮಾನವ ಜೀವನವನ್ನು ಉತ್ಕೃಷ್ಟತೆಯಡೆಗೆ ಕೊಂಡೊಯ್ಯಲಿವೆ. ಬುದ್ಧರು ಯಾವುದೇ ಬಲವಂತದ ಆಚರಣೆಗೆ ಆದ್ಯತೆ ನೀಡದೇ ಸಹಜ ಜೀವನಕ್ಕೆ ಒತ್ತು ನೀಡಿದರು. ಪ್ರತಿಯೊಬ್ಬರು ಸರಳ ಸಮರಸದ ಜೀವನ ನಡೆಸಬೇಕು. ಆಗ ಮಾತ್ರ ಸ್ವಸ್ಥ ಸಮಾಜ ಸಾಧ್ಯವಾಗಲಿದೆ ಎಂದು ಬುದ್ಧರು ಪ್ರತಿಪಾದಿಸಿದರು ಎಂದು ಹೇಳಿದರು.

ಮುಖ್ಯಭಾಷಣ ಮಾಡಿದ ನಗರದ ಸಾಹಿತಿಗಳಾದ ಡಾ. ಬಿ.ಆರ್. ಕೃಷ್ಣಕುಮಾರ್ ಅವರು ಬುದ್ಧ ಎಂದರೇ ಅರಿವು. ಬುದ್ಧಮಾರ್ಗ ಎಂದರೇ ಜಾಗೃತಿಯ ಮಾರ್ಗವಾಗಿದೆ. ವ್ಯಕ್ತಿಯು ತನ್ನ ಸಮಸ್ಯೆಗಳನ್ನು ತಾನೇ ಅರ್ಥೈಸಿಕೊಂಡು ಪರಿಹಾರ ಕಂಡುಕೊಳ್ಳಬೇಕು. ನಿಮಗೆ ನೀವೇ ಬೆಳಕು. ಇಂತಹ ಸಾರ್ವಕಾಲಿಕ ಶ್ರೇಷ್ಠ ಹಾಗೂ ಅದ್ಭುತ ಚಿಂತನೆಗಳನ್ನು ಜನಸಾಮಾನ್ಯರಿಗೆ ಬೋಧಿಸಿದ ಭಗವಾನ್ ಬುದ್ಧ ಅವರು ಈ ಜಗತ್ತಿನ ಮೊದಲ ಮನೋ ವಿಜ್ಞಾನಿಯಾಗಿದ್ದಾರೆ.

ತಳಸಮುದಾಯಗಳನ್ನು ತಮ್ಮೆಡೆಗೆ ಸೆಳೆದು ಜೀವನ ಉನ್ನತೀಯಡೆಗೆ ಕೊಂಡೊಯ್ದ ಬುದ್ಧ ಪರಂಪರೆ ಇಂದಿಗೂ ಪ್ರಸ್ತುತವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು ಅವರು ಬುದ್ಧ ಯಾವುದೇ ಜಾತಿ, ಸಮುದಾಯಕ್ಕೆ ಸೀಮಿತಗೊಳ್ಳದ ಮೇರುವ್ಯಕ್ತಿತ್ವ. ಮನುಷ್ಯನಾಗಿ ಹುಟ್ಟಿ ಮನುಷ್ಯನಾಗಿ ಬದುಕಬೇಕು. ಬುದ್ಧರ ಅದರ್ಶ ಚಿಂತನೆಗಳನ್ನು ಭಾರತ ಮಾತ್ರವಲ್ಲ. ಪ್ರಪಂಚದ ಬಹುತೇಕ ರಾಷ್ಟ್ರಗಳು ಅಳವಡಿಸಿಕೊಂಡಿವೆ. ಅನುಸರಿಸುತ್ತಿವೆ. ವಿಶ್ವಶಾಂತಿಗೆ ಬುದ್ಧರ ತತ್ವಚಿಂತನೆಗಳು ಪರಿಹಾರವಾಗಿವೆ. ಪ್ರತಿಯೊಬ್ಬರು ಸಹೋದರತೆಯಿಂದ ಬದುಕಬೇಕೆಂಬುದೇ ಬುದ್ಧರ ಆಶಯವಾಗಿತ್ತು ಎಂದರು.

ಟಿ. ನರಸೀಪುರದ ಲುಂಬಿಣಿ ಬೌದ್ಧವಿಹಾರದ ಭಂತೆ ಸವಣಪಾಲ ಬಂತೇಜೀ ಹಾಗೂ ಕಿರಿಯ ಬಂತೇಜೀ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಚುಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭಾ ಸದಸ್ಯರಾದ ಮಹೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ನಂಜುಂಡಯ್ಯ, ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾಧ್ಯಕ್ಷರಾದ ಬಸವರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆರಂಭದಲ್ಲಿ ಜನಪದ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡ ನಡೆಸಿಕೊಟ್ಟ ಬುದ್ಧ ಗೀತಗಾಯನ ಕಾರ್ಯಕ್ರಮ ಗಮನ ಸೆಳೆಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಸಾರಾನಾಥ ಬೌದ್ಧವಿಹಾರದಿಂದ ಆರಂಭವಾದ ಭಗವಾನ್ ಬುದ್ಧ ಪ್ರತಿಮೆ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನ ತಲುಪಿತು. ಬಳಿಕ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

## ನೇರ ಫೋನ್-ಇನ್ ಕಾರ್ಯಕ್ರಮ

**ಮೈಸೂರು:** ವಿದ್ಯಾರ್ಥಿಗಳು ಎಸ್‌ಎಸ್‌ಎಲ್ಸಿ ನಂತರ ತೆಗೆದುಕೊಳ್ಳಬಹುದಾದ ಕೋರ್ಸ್‌ಗಳು ಮತ್ತು ಇರುವಂತಹ ಅವಕಾಶಗಳು ಕುರಿತು ನೇರ ಸಂದರ್ಶನ ಫೋನ್-ಇನ್ ಕಾರ್ಯಕ್ರಮವನ್ನು ಮೇ 14 ರಂದು ಬೆಳಗ್ಗೆ 11:30ರಿಂದ 12:30ರ ವರೆಗೆ ಊಟಿ ರಸ್ತೆಯಲ್ಲಿನ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿರು ಜೆಎಸ್‌ಎಸ್ ರೇಡಿಯೋ 91.2ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್ನ ಪ್ರಾಂಶುಪಾಲರಾದ ಡಾ. ಭಕ್ತವತ್ಸಲ ರವರು ಭಾಗವಹಿಸಲಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಕುರಿತು ಯಾವುದೇ ಸಲಹೆಗಳಿಗಾಗಿ ಕರೆಮಾಡಿ ನೇರವಾಗಿ ಮಾತನಾಡಬಹುದು. ಅದಕ್ಕಾಗಿ ನೀವು ಮಾಡಬಹುದಾದ ನಿಲಯದ ದೂರವಾಣಿ ಸಂಖ್ಯೆ: 8296725912, 0821-2546563 ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ?ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರು ಆಲಿಸಬಹುದು.

## ಪಿಡಿಒಗಳಿಗೆ ಕಾರ್ಯಗಾರ

**ಚಾಮರಾಜನಗರ:** ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಉಪವಿಭಾಗದ ಅಭಿಯಂತರರಿಗೆ ಒ ಅಂಡ್ ಎಂ ಪಾಲಿಸಿ, ಸರ್ವಿಸ್ ಲೆವಲ್ ಬೆಂಚ್ ಮಾರ್ಕ್ (ಎಸ್.ಎಲ್.ಬಿ) ವಿ.ಡಬ್ಲ್ಯೂ. ಎಸ್.ಸಿ ನಡಾವಳಿ ಪ್ರತ್ಯೇಕ ನೀರಿನ ಖಾತೆ ನಿರ್ವಹಣೆ, 24★7 ನೀರು ಸರಬರಾಜು ಗ್ರಾಮ ಘೋಷಣೆ, ಮಾದರಿ ಗ್ರಾಮ ಪಂಚಾಯಿತಿಗಳ ಘೋಷಣೆ ಸಂಬಂಧ ಕಾರ್ಯಗಾರವನ್ನು ಮೇ 13 ರಿಂದ 16ರವರೆಗೆ ಆಯಾ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ತಾಲೂಕಿನ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತರಬೇತಿಯನ್ನು ಆಯೋಜಿಸಲಾಗಿದೆ. ಮೇ 13ರಂದು ಚಾಮರಾಜನಗರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಚಾಮರಾಜನಗರ ತಾಲೂಕಿನ 43 ಗ್ರಾಮ ಪಂಚಾಯಿತಿಗಳು, ಮೇ 14ರಂದು ಗುಂಡ್ಲುಪೇಟೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಗುಂಡ್ಲುಪೇಟೆ ತಾಲೂಕಿನ 34 ಗ್ರಾಮ ಪಂಚಾಯಿತಿಗಳು, ಮೇ 15ರಂದು ಕೊಳ್ಳೇಗಾಲ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನ 28 ಗ್ರಾಮ ಪಂಚಾಯಿತಿಗಳು ಹಾಗೂ ಮೇ 16ರಂದು ಹನೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಹನೂರು ತಾಲೂಕಿನ 25 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಗಾರ ನಡೆಯಲಿದೆ. ಆಯಾ ದಿನದಂದು ಬೆಳಿಗ್ಗೆ 10 ಗಂಟೆಗೆ ತರಬೇತಿ ಆರಂಭವಾಗಲಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಹನಗಳ ಬಹಿರಂಗ ಹರಾಜು

**ಚಾಮರಾಜನಗರ:** ಜಿಲ್ಲೆಯಾದ್ಯಂತ ವಿವಿಧ ಅಬಕಾರಿ ಪ್ರಕರಣಗಳಲ್ಲಿ ಜಪ್ತಿಪಡಿಸಿ ಮುಟ್ಟುಗೋಲು ಹಾಕಿಕೊಂಡಿರುವ 31 ವಾಹನಗಳನ್ನು ಅಬಕಾರಿ ಇಲಾಖೆಯ ವಲಯ ಕಚೇರಿ ಆವರಣಗಳಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಮೇ 22ರಂದು ಚಾಮರಾಜನಗರ ವಲಯದ 13 ವಾಹನಗಳು, ಮೇ 26ರಂದು ಕೊಳ್ಳೇಗಾಲ ವಲಯದ 9 ವಾಹನಗಳು, ಮೇ 28ರಂದು ಗುಂಡ್ಲುಪೇಟೆ ವಲಯದ 9 ವಾಹನಗಳು ಸೇರಿದಂತೆ ಒಟ್ಟು 31 ವಾಹನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಹರಾಜಿಗೆ ಇರುವ ವಾಹನಗಳನ್ನು ಸಂಬಂಧಪಟ್ಟ ವಲಯ ಅಬಕಾರಿ ನಿರೀಕ್ಷಕರ ಕಚೇರಿಗಳಲ್ಲಿ ಪರಿಶೀಲಿಸಬಹುದು.



**ತಿಪಟೂರು ತಾಲ್ಲೂಕಿನ ಚಿಕ್ಕ ಹೊನ್ನವಳ್ಳಿ ಗ್ರಾಮದಲ್ಲಿ ಪಲ್ಲಾಗಟ್ಟೆ ಅಡವಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು ವತಿಯಿಂದ ಆಯೋಜನೆಗೊಂಡಿದ್ದ ಎನ್‌ಎಸ್‌ಎಸ್ ವಾರ್ಷಿಕ ವಿಶೇ? ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಶಶಿಧರ್ ವಹಿಸಿದ್ದರು. ಸಮಾರೋಪದಲ್ಲಿ ವೈಧ್ಯ ಪ್ರವೀಣ್ ರಂಗಪ್ಪ, ರಂಗಪ್ಪ. ಮಧು, ನವೀನ್, ಲಿಖಿತ್ ಗೌಡ, ಚರಣ್ ರಾಜ್ ಪ್ರಾಶುಂಪಾಲೆ ವಿಜಯಕುಮಾರಿ, ಎನ್‌ಎಸ್‌ಎಸ್ ಅಧಿಕಾರಿಗಳಾದ ಲೋಕೇಶ್, ಶ್ರೀನಿವಾಸ್, ಲಾಲಟಾಕ್ಷ ಮೂರ್ತಿ, ಯೋಗನಂದ್ ಹಾಜರಿದ್ದರು.**

**ಬೆಂಗಳೂರು: ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ಮಾರ್ಗದರ್ಶನದಲ್ಲಿ ಪೌರ್ಣಮಿ ಪ್ರಯುಕ್ತ ಸಾಮೂಹಿಕ ಶ್ರೀ ಸತ್ಯನಾರಾಯಣಸ್ವಾಮಿಯ ವ್ರತ ಪೂಜೆಯು ಪುರೋಹಿತರಾದ ಶ್ರೀ ನಂದಕಿಶೋರಾಚಾರ್ಯರು ಹಾಗೂ ಕಟ್ಟಿ ರಾಘವೇಂದ್ರ ಆಚಾರ್ಯರು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ನೆರವೇರಿಸಿದರು. ಈ ಸಂದರ್ಭದಲ್ಲಿ ಭಕ್ತರು ಮತ್ತು ಸೇವಾ ಕರ್ತೃಗಳು ಸಂಕಲ್ಪವನ್ನು ಮಾಡಿ ವ್ರತ ಪೂಜೆಯಲ್ಲಿ ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿ ಪ್ರಸಾದ ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.**



ಸತ್ಯನಾರಾಯಣ ವ್ರತ ಪೂಜೆ

# ಮೆರುಗು ನೀಡಿದ ಸಾಂಸ್ಕೃತಿಕ ಉತ್ಸವ



**ಮೈಸೂರು:** ಕಲ್ಪಶ್ರೀ ಪರ್‌ಫಾರ್‌ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ್, ಚೆನ್ನಪಟ್ಟಣ ಹಾಗೂ ಕೇಂದ್ರ ಸಂಸ್ಕೃತಿ ಇಲಾಖೆ ಹಾಗೂ ನಾಟ್ಯಲಾಯಂ ಸಂಸ್ಥೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ಹಾಗೂ ಭಾನುವಾರ ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನೃತ್ಯ ಸಮ್ಮೇಳನ ಆಯೋಜಿಸಲಾಗಿತ್ತು. ಎರಡು ದಿನಗಳ ಕಾಲ ಏರ್ಪಡಿಸಿದ್ದ ಈ ಉತ್ಸವದಲ್ಲಿ ಭಾರತದಾದ್ಯಂತ 200ಕ್ಕೂ ಅಧಿಕ ನೃತ್ಯ ಕಲಾವಿದರು ಆಗಮಿಸಿ ಭರತನಾಟ್ಯ, ಕುಚಿಪುಡಿ ಹಾಗೂ ಕಥಕ್ ನೃತ್ಯವನ್ನು ಪ್ರದರ್ಶಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ನೃತ್ಯ ಕಲಾವಿದೆ ಶ್ರೀಮತಿ ಜ್ಯೋತಿ ಹೆಗ್ಡೆ ಅವರು ಮಾತನಾಡಿ, ಕಲ್ಪಶ್ರೀ ಸಂಸ್ಥೆ ಕಳೆದ 10 ವರ್ಷಗಳಿಂದ ಮೈಸೂರಿನಲ್ಲಿ ನೃತ್ಯ ಸಮ್ಮೇಳನವನ್ನು ಆಯೋಜಿಸುತ್ತಾ ಬಂದಿರುವುದು ಸಂತಸದ ಸಂಗತಿ. ದೇಶದ ಎಲ್ಲಾ ಭಾಗದ ನೃತ್ಯ ಕಲಾವಿದರನ್ನು ಒಂದೆಡೆ ಕಲೆ ಹಾಕಿ ಅವರ ನೃತ್ಯದ ಸೊಬಗನ್ನು ಇಡೀ ಮೈಸೂರು ಜನತೆಗೆ ಉಣಬಡಿಸಿದ್ದಾರೆ. ಇವರ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದು ತಿಳಿಸಿದರು.

ಮತ್ತೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಮಾಜ ಸೇವಕ ಕಿಶೋರ್ ರೆಡ್ಡಿ ಮಾತನಾಡಿ, ಕಲ್ಪಶ್ರೀ ಸಂಸ್ಥೆ ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿದೆ. ಇವರು ಆಯೋಜನೆ ಮಾಡುವ ನೃತ್ಯ ಉತ್ಸವಗಳು ಜನಪ್ರಿಯವಾಗಿದೆ. ಸಾವಿರಾರು ಯುವ ನೃತ್ಯ ಕಲಾವಿದರಿಗೆ ತಮ್ಮ ಕಲೆ ಪ್ರದರ್ಶನ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ನಡೆಸಿದೆ ಎಂದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ನಗರದ ಖ್ಯಾತ ಸಂಗೀತ ಶಿಕ್ಷಕಿ ವಿದುಷಿ ಸುಮ ಹರಿನಾಥ್ ಮಾತನಾಡಿ, ಎಲ್ಲ ನೃತ್ಯ ಕಲಾವಿದರು ಬಹಳ ಸೊಗಸಾಗಿ ನೃತ್ಯ ಪ್ರದರ್ಶನ ಪ್ರದರ್ಶಿಸಿದ್ದಾರೆ. ಅವರಿಗೆ ಅಭಿನಂದನೆಗಳು ಎಂದು ಹರ್ಷ ವ್ಯಕ್ತಪಡಿಸಿದರು. ಇದರ ಮತ್ತೊಂದು ಆಕರ್ಷಣೆ ಏನೆಂದರೆ ದೂರದ ಮಲೇಷಿಯಾದಿಂದ ಇಲ್ಲಿಗೆ ಆಗಮಿಸಿ ನೃತ್ಯ ಪ್ರದರ್ಶಿಸಿರುವುದು ಮೈಸೂರು ಜನತೆಗೆ ಹೆಮ್ಮೆ ತರುವ ವಿಷಯ ಎಂದರು.

ಈ ಎರಡೂ ದಿನದ ಸಾಂಸ್ಕೃತಿಕ ಉತ್ಸವ 2025ರ ಸಂಪೂರ್ಣ ಕಾರ್ಯಕ್ರಮವನ್ನು ಕಲ್ಪಶ್ರೀ ನೃತ್ಯ ಸಂಸ್ಥೆ ಕಾರ್ಯದರ್ಶಿ ಎಂ.ಸಿ.ಸುಜೇಂದ್ರ, ಬಾಬು ಆಯೋಜಿಸಿದ್ದರು.

# ಹೈ ಥಿಂಕಿಂಗ್ ಹೊಂದಿದ್ದ ಕೃಷಿ ವಿಜ್ಞಾನಿ ಅಯ್ಯಪ್ಪ

**ವಿಜಯಪುರ;** ಸರಳ, ಸಂಸ್ಕೃತಿ, ಸಂಸ್ಕಾರ ಹೊಂದಿದ್ದ, ಇತರರ ಬಗ್ಗೆ ಸದಾ ಗೌರವದಿಂದ ಕೂಡಿದ್ದ ಕಡು ಬಡತನದಿಂದ ಬಂದಿದ್ದರು ಎಷ್ಟೇ ಉನ್ನತ ಸ್ಥಾನಕ್ಕೆ ಏರಿದ್ದರೂ ಸಹ ಪಾಠಿಗಳನ್ನು ಮರೆಯದ ಪ್ರಾಮಾಣಿಕ ವ್ಯಕ್ತಿ ಪದ್ಮಶ್ರೀ ಪ್ರಶಸ್ತಿ ವಿಜೇತ ಎಸ್ ಐಯಪ್ಪ ರವರ, ಅನಿರೀಕ್ಷಿತ ನಿಧನದಿಂದ ಭಾರತ ಕೃಷಿ ಕ್ಷೇತ್ರದಲ್ಲಿ ತುಂಬಲಾರದ ನಷ್ಟ ಅನುಭವಿಸಿದೆ ಎಂದು ರಾಜ್ಯ ತೋಟಗಾರಿಕಾ ಇಲಾಖೆಯ ನಿವೃತ್ತ ನಿರ್ದೇಶಕ ಸಂತೆ ನಾರಾಯಣಸ್ವಾಮಿ ರವರು ತಿಳಿಸಿದರು.



ಇಲ್ಲಿನ ಎಸ್ ಎನ್ ಫಾರಂ ಹೌಸ್ ನ ಕುಂಬಿಗಲ್ ಕುಟೀರದಲ್ಲಿ ಶ್ರೇಷ್ಠ ಕೃಷಿ ವಿಜ್ಞಾನಿ ಪದ್ಮಶ್ರೀ ಪ್ರಶಸ್ತಿ ವಿಜೇತ ಎಸ್ ಅಯ್ಯಪ್ಪನ್ ರವರ ನಿಧನಕ್ಕೆ ಜೆ ಸಿ ಐ, ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘ ಹಾಗೂ ಸೀನಿಯರ್ ಚೇಂಬರ್ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆ ಕಾರ್ಯಕ್ರಮದಲ್ಲಿ ಅಯ್ಯಪ್ಪನ್ ರವರನ್ನು ಕುರಿತು ಮಾತನಾಡುತ್ತಿದ್ದರು.

ಬೆಂಗಳೂರಿನ ಅಗ್ರಿಕಲ್ಚರ್ ಕಾಲೇಜಿನಲ್ಲಿ ತಮ್ಮ ಸಹಪಾಠಿಯಾಗಿದ್ದ ಎಸ್ ಅಯ್ಯಪ್ಪನ್ ರವರು ಇಡೀ ಕಾಲೇಜಿಗೆ ಪಂಚೆ ಹುಟ್ಟು ಬರುತ್ತಿದ್ದ ಏಕೈಕ ವ್ಯಕ್ತಿಯಾಗಿದ್ದರಿಂದ, ನಂತರ ತಿಳಿದು ಬಂದಿದ್ದು ಏನೆಂದರೆ ತೀರ ಬಡತನದಿಂದ ಪ್ಯಾಂಟ್ ಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲವೆಂದು ತಿಳಿಯಿತೆಂದು ಹೇಳಿದರು.

ಅಂತಹ ವ್ಯಕ್ತಿ ತಮ್ಮ ಸ್ವಸಾಮರ್ಥ್ಯದಿಂದ ಮಂಗಳೂರಿನ ಫಿಶರಿ ಸೈನ್ಸ್ ನಲ್ಲಿ ಎಂ ಎಸ್ ಸಿ ಏಜಿ ಮುಗಿಸಿಕೊಂಡು ಕೇಂದ್ರದ ಒರಿಸ್ಸಾ ವಿಶ್ವವಿದ್ಯಾನಿಲಯದಲ್ಲಿ ಡಿಪ್ಯೂಟಿ ಡೈರೆಕ್ಟರ್ ಜನರಲ್ ಆಗಿದ್ದು, ನಂತರ ದೆಹಲಿಯ ಕೃಷಿ ಅನುಸಂಧಾನ ಪರಿಷತ್ತಿನ ಟಿಸಿಎಆರ್ ನಲ್ಲಿ ಡೈರೆಕ್ಟರ್ ಜನರಲ್ ಆಗಿದ್ದು ನಂತರ ದೆಹಲಿಯಲ್ಲಿ ಕೃಷಿ ಕಾರ್ಯದರ್ಶಿ, ನಿರ್ದೇಶಕರು ಆಗಿದ್ದು ಪ್ರಧಾನಿ ನರೇಂದ್ರ, ಮೋದಿ ರವರ ಆಪ್ತವಲಯದವರು ಆಗಿದ್ದರೆಂದು ಇವರ ನಿಗೂಢ ಅಕಾಲಿಕ ಮರಣ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ್ ಹಡಪದ್ ರವರು ಮಾತನಾಡಿ ಹತ್ತಾರು ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದ ಅಯ್ಯಪ್ಪನ್ ರವರು ಹಲವಾರು ದೇಶಗಳಲ್ಲಿ ಕೃಷಿ ವಿಷಯದ ಬಗ್ಗೆ ಪ್ರಭುತ್ವ ಪೂರ್ವಕವಾದ ಉಪನ್ಯಾಸಗಳನ್ನು ನೀಡಿದ್ದಾರೆಂದು ಮೂಲತಹ ನಂಜನಗೂಡು ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಅಯ್ಯಪ್ಪನ್‌ರವರ ಸಾವು ದೇಶಕ್ಕೆ ಹಾಗೂ ಕೃಷಿ ಕ್ಷೇತ್ರಕ್ಕೆ ತೀರಲಾರದ ನಷ್ಟವೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ವಿಎಂ ಕಿಶೋರ್ ಕುಮಾರ್ ,ಕಾರ್ಯದರ್ಶಿಗಳಾದ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಎಂ ಶಿವಕುಮಾರ್, ಅನಿವಾಸಿ ಭಾರತೀಯರಾದ ಅಮೆರಿಕಾದ ಟೆಕ್ಸಾಸ್ ನಿವಾಸಿ ಶಂಕರ್, ಹಿರಿಯ ರೈತರದ ವೆಂಕಟರಮಣಪ್ಪ, ಸೀನಿಯರ್ ಚೇಂಬರ್ ನ ಅಧ್ಯಕ್ಷ ಅನೀಸ್ ಉರ್ ರಹಮಾನ್, ಟೌನ್ ಕಾಂಗ್ರೆಸ್ ಅಧ್ಯಕ್ಷ ವಿಎಂ ನಾಗರಾಜು, ಸಿ ಮಂಜುನಾಥ್, ವಕೀಲರಾದ ಜಯರಾಮ್, ಮಹಂತಿನ ಮಠದ ಕಾರ್ಯದರ್ಶಿ ವಿ ವಿಶ್ವನಾಥ್, ಕೆ ಮುರಳಿಧರ್‌ಉಪಸ್ಥಿತರಿದ್ದರು.

# ಸಂಜೆ ಟಿಪ್ಸ್

## ಸ್ಮಾರ್ಟ್‌ವ್ಯಾಲ್ಯೂ ಇನ್ ಕಮ್‌ಆಂಡ್‌ಬೆನಿಫಿಟ್ ಎನ್‌ಹಾನ್ಸರ್‌ಪ್ಲಾನ್ ಅನ್ನು ಬಿಡುಗಡೆ ಮಾಡಿದ ಆಕ್ಸಿಸ್‌ಮ್ಯಾಕ್ಸ್‌ಲೈಫ್

ಆಕ್ಸಿಸ್‌ಮ್ಯಾಕ್ಸ್‌ಲೈಫ್ ಇನ್ಶೂರೆನ್ಸ್‌ಲಿಮಿಟೆಡ್ ಸಂಸ್ಥೆಯು ಗ್ರಾಹಕರಿಗೆ ಅನೇಕ ಆಕರ್ಷಕ ಪ್ರಯೋಜನಗಳನ್ನು ಒದಗಿಸುವ ಆಕ್ಸಿಸ್‌ಮ್ಯಾಕ್ಸ್‌ಲೈಫ್‌ಸ್ಮಾರ್ಟ್‌ವ್ಯಾಲ್ಯೂ ಇನ್‌ಕಮ್‌ಆಂಡ್‌ಬೆನಿಫಿಟ್‌ಎನ್ ಹಾನ್ಸರ್ ಪ್ಲಾನ್‌ಅನ್ನುಬಿಡುಗಡೆ ಮಾಡಿದೆ. ಇದೊಂದು ನಾನ್- ಲಿಂಕ್ಡ್,ನಾನ್-ಪಾರ್ಟಿಸಿಪೇಟಿಂಗ್ ಇಂಡಿವಿಜುವಲ್ ಜೀವವಿಮೆಉಳಿತಾಯ ಯೋಜನೆಯಾಗಿದ್ದು, 2025ರಮೇ5ರಿಂದ ಎಲ್ಲಾ ವಿತರಣಾ ವ್ಯವಸ್ಥೆಗಳಲ್ಲಿ ಲಭ್ಯವಿದೆ. ಗ್ರಾಹಕರಿಗೆಖಾತರಿಯಆದಾಯ,ತಕ್ಷಣದ ನಗದು ವ್ಯವಸ್ಥೆ ಮತ್ತು ರಕ್ಷಣೆ ಒದಗಿಸುವ ಈಯೋಜನೆಯು ವಿವಿಧ ಯೋಜನಾವಿಧಗಳು, ಪಾವತಿ ವಿಧಾನಗಳು ಮತ್ತು ಐಚ್ಛಿಕ ಪ್ರಯೋಜನಗಳ ಆಯ್ಕೆ ಸೌಲಭ್ಯವನ್ನೂ ನೀಡುತ್ತದೆ.ದೀರ್ಘಾವಧಿಯಲ್ಲಿ ಉತ್ತಮ ಆದಾಯದ ಹರಿವನ್ನು ಬಯಸುವ ವ್ಯಕ್ತಿಗಳಿಗೆ ಇದು ಅತ್ಯಂತ ಸೂಕ್ತವಾಗಿದೆ. ಖಾತರಿಯಲಾಭ: ಈಯೋಜನೆಯುಜೀವವಿಮೆ ರಕ್ಷಣೆಯೊಂದಿಗೆ ಖಾತರಿಯ ಆದಾಯವನ್ನು ನೀಡುತ್ತದೆ ಮತ್ತು ದೀರ್ಘಾವಧಿಯ ಆರ್ಥಿಕ ಭದ್ರತೆ ರೂಪಿಸಿಕೊಳ್ಳಲು ಸಹಾಯಮಾಡುತ್ತದೆ. ಮೂರುಫ್ಲೆಕ್ಸಿಬಲ್ ಯೋಜನಾ ವಿಧಗಳು: ಇನ್‌ಸ್ಟಾವೆಲ್ತ್,ಫ್ಯೂಚರ್‌ವೆಲ್ತ್‌ಮತ್ತುಇನ್‌ಸ್ಟಾವೆಲ್ತ್‌ಬೂಸ್ಟ್ ಎಂಬ ಮೂರು ವಿಧಗಳಲ್ಲಿ ಲಭ್ಯವಿರುವ ಈಯೋಜನೆಯು ಪಾಲಿಸಿದಾರರಿಗೆ ತಮ್ಮ ನಿರ್ದಿಷ್ಟ ಅಗತ್ಯಗಳಿಗೆ ಸರಿಹೊಂದುವ ಉಳಿತಾಯ ಮತ್ತು ಪಾವತಿ ವಿಧಾನಗಳನ್ನು ಆಯ್ಕೆಮಾಡಲು ಅನುವು ಮಾಡಿಕೊಡುತ್ತದೆ. ಕಸ್ಟಮೈಸ್ ಮಾಡಬಹುದಾದ ಯೋಜನಾ ಆಯ್ಕೆಗಳು: ಪಾಲಿಸಿ ಆರಂಭದ ಸಮಯದಲ್ಲಿಗ್ರಾಹಕರು ಪ್ರೀಮಿಯಂ ಪಾವತಿ ಅವಧಿ, ಪಾಲಿಸಿ ಅವಧಿ, ಆದಾಯ ಪಾವತಿ ವ್ಯವಸ್ಥೆ (ಮುಂಗಡ/ ಬಾಕಿ) ಮತ್ತು ವಾರ್ಷಿಕ ಪ್ರೀಮಿಯಂನ ಬೆನಿಫಿಟ್ ಅಥವಾ ಮರಣ ಸಂದರ್ಭದ ಆರ್ಥಿಕ ಪ್ರಯೋಜನವನ್ನು ಆಯ್ಕೆಮಾಡಬಹುದು. ನಿಮ್ಮ ಆದಾಯವನ್ನುನಿರ್ವಹಿಸಿ ಮತ್ತು ಹೆಚ್ಚಿಸಿಕೊಳ್ಳಿ: ಈಯೋಜನೆಯು ಮೊದಲಪಾಲಿಸಿ ವರ್ಷದಿಂದಫ್ಲೆಕ್ಸಿ ಇನ್‌ಕಮ್‌ಪ್ರಯೋಜನಗಳನ್ನು ನೀಡುತ್ತದೆ. ಜೊತೆಗೆ ಪ್ರಸ್ತುತ ಆದಾಯ ಮತ್ತುಭವಿಷ್ಯದಆದಾಯಪ್ರಯೋಜನಗಳನ್ನುಸಂಗ್ರಹಿಸಿಹೆಚ್ಚಿನಲಾಭ ಮಾಡುವ ಆಯ್ಕೆ ಆರಿಸಿಕೊಳ್ಳಬಹುದು. ಸಾಲಸೌಲಭ್ಯ:ಪಾಲಿಸಿದಾರರು ಪಾಲಿಸಿಯಆಧಾರದಲ್ಲಿ ಸಾಲಸೌಲಭ್ಯವನ್ನು ಪಡೆಯ ಬಹುದುಮತ್ತು ಆದಾಯಪಾವತಿಹಂತದಲ್ಲಿತಮ್ಮಭವಿಷ್ಯದಪ್ರಯೋಜನಗಳನ್ನು ಪಡೆಯುವಸೌಲಭ್ಯ ಹೊಂದಿರುತ್ತಾರೆ.

## ತೆಂಗಿನಕಾಯಿ ಮಸಾಲೆ ಚಟ್ನಿ

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ತೆಂಗಿನ ಕಾಯಿ ಕೆಂಪು ಮೆಣಸಿನಕಾಯ ಹಸಿ ಮೆಣಸಿನಕಾಯಿ ಕೊತ್ತಂಬರಿ ಸೊಪ್ಪು ಹುಣಸೆ ಹಣ್ಣು ಹುರಿಕಡಲೆ ಕಡ್ಲೆ ಬೇಳೆ ಜೀರಿಗೆ ಸಾಸಿವೆ ಎಣ್ಣೆ ಉಪ್ಪು ಕರಿ ಬೇವು

### ಮಾಡುವ ವಿಧಾನ

ಮೊದಲು ಒಂದು ಬಾಣಲೆ ಒಲೆ ಮೇಲೆ ಬಿಸಿ ಮಾಡಿ ಬಳಿಕ ಸ್ವಲ್ಪ ಕಡಲೆ ಬೀಜ, ಹುರಿಗಡಲೆ ಹಾಕಿಕೊಂಡು ಹುರಿದುಕೊಳ್ಳಬೇಕು. 3 ನಿಮಿಷಗಳ ಕಾಲ ಫ್ರೈ ಮಾಡಿದ ಬಳಿಕ ಇದಕ್ಕೆ 3 ಹಸಿ ಮೆಣಸು ಕೂಡ ಇದಕ್ಕೆ ಹಾಕಿಕೊಳ್ಳಿ. ಹಾಗೆ ಇದಕ್ಕೆ ಕರಿಬೇವು ಬೆಳ್ಳುಳ್ಳಿ ಸಹ ಹಾಕಿಕೊಂಡು 1 ನಿಮಿಷ ಹುರಿದುಕೊಳ್ಳಬೇಕು. ಇದಾದ ಬಳಿಕ ಬಾಣಲೆಗೆ ಸಣ್ಣದಾಗಿ ಹೆಚ್ಚಿಕೊಂಡಿರುವ ತೆಂಗಿನಕಾಯಿ ಪೀಸ್ ಗಳನ್ನು ಕೂಡ ಹಾಕಿ ಹುರಿದುಕೊಳ್ಳಬೇಕು. ಮೇಲೆ ಕೊತ್ತಂಬರಿ ಕೂಡ ಹಾಕಿ ಒಲೆ ಆಫ್ ಮಾಡಿಕೊಳ್ಳಿ. ನಂತರ ಈ ವಸ್ತು ತಣ್ಣಗಾದ ಬಳಿಕ ಒಂದು ಮಿಕ್ಸಿ ಜಾರ್ ಗೆ ಹಾಕಿಕೊಳ್ಳಿ. ಇದಕ್ಕೆ ಹುಣಸೆ ಹುಳಿ, ರುಚಿಗೆ ತಕ್ಕಷ್ಟು ಉಪ್ಪು, ಹಾಗೆ ಸ್ವಲ್ಪವೇ ಸ್ವಲ್ಪ ನೀರು ಹಾಕಿ ರುಬ್ಬಬೇಕು. ಬಹಳ ತೆಳುವಾಗಿ ರುಬ್ಬಿಕೊಳ್ಳಬೇಡಿ. ಇದನ್ನು ಬಹಳ ತರಿತರಿಯಾಗಿಯೂ ರುಬ್ಬಬೇಡಿ. ನಂತರ ಈ ಚಟ್ನಿಯನ್ನು ಒಂದು ಬೌಲ್‌ಗೆ ಹಾಕಿಟ್ಟುಕೊಳ್ಳಿ. ಈಗ ಬಾಣಲೆ ಒಲೆ ಮೇಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿ ಎಣ್ಣೆ ಬಿಸಿಯಾದಾಗ ಸಾಸಿವೆ, ಜೀರಿಗೆ, ಕರಿಬೇವು, ಒಣ ಮೆಣಸು ಹಾಕಿ ಒಗ್ಗರಣೆ ಮಾಡಿ ಈ ಚಟ್ನಿಯೊಂದಿಗೆ ಹಾಕಿ ಮಿಕ್ಸ್ ಮಾಡಿಕೊಳ್ಳಿ. ಇಷ್ಟಾದರೆ ನಿಮ್ಮ ಮುಂದೆ ರುಚಿ ರುಚಿಯ ತೆಂಗಿನಕಾಯಿ ಮಸಾಲೆ ಚಟ್ನಿ ರೆಡಿಯಾಗುತ್ತದೆ. ನೀವು ಈ ಚಟ್ನಿಯನ್ನ ಯಾವುದೇ ತಿಂಡಿಯ ಜೊತೆಗೆ ಸವಿಯಬಹುದು.

## ನಟಿಗೆ ಬಿಗ್ ಚಾನ್ಸ್ - ಉಪೇಂದ್ರಗೆ ಅಂಕಿತಾ ಅಮರ್ ನಾಯಕಿ





'ನಮ್ಮನೆ ಯುವರಾಣಿ' ಸೀರಿಯಲ್ ಮೂಲಕ ಬಣ್ಣದ ಬದುಕಿಗೆ ಕಾಲಿಟ್ಟ ಅಂಕಿತಾ ಅಮರ್ ಕನ್ನಡದ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದೀಗ ನಟಿಗೆ ಬಿಗ್ ಆಫರ್‌ವೊಂದು ಅರಸಿ ಬಂದಿದೆ. ರಿಯಲ್ ಸ್ಟಾರ್ ಉಪೇಂದ್ರಗೆ ಅಂಕಿತಾ ನಾಯಕಿಯಾಗಿ ನಟಿಸುತ್ತಿದ್ದಾರೆ.

ನಾಗಣ್ಣ ನಿರ್ದೇಶನದ, ಸೂರಪ್ಪ ಬಾಬು ನಿರ್ಮಾಣದ 'ಭಾರ್ಗವ' ಚಿತ್ರಕ್ಕೆ ನಾಯಕಿಯಾಗಿ ಅಂಕಿತಾ ಸೆಲೆಕ್ಟ್ ಆಗಿದ್ದಾರೆ. ಈ ಸಿನಿಮಾದಲ್ಲಿ ನಟಿಗೆ ಉತ್ತಮ ಪಾತ್ರವೇ ಸಿಕ್ಕಿದೆ. ಉಪೇಂದ್ರ ಅವರು 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದಲ್ಲಿ ಅಂಕಿತಾ ನಟನೆ ನೋಡಿ 'ಭಾರ್ಗವ' ಚಿತ್ರಕ್ಕೆ ಇವರೇ ಸೂಕ್ತ ಎಂದು ಹೇಳಿದ್ದರು. ಹೀಗಾಗಿ ಅಂಕಿತಾಗೆ ಉಪೇಂದ್ರ ಜೊತೆ ನಟಿಸುವ ಒಂದೊಳ್ಳೆಯ ಅವಕಾಶ ಸಿಕ್ಕಿದೆ. ಶೈನ್ ಶೆಟ್ಟಿ 'ಜಸ್ಟ್ ಮ್ಯಾರೀಡ್', ಪೃಥ್ವಿ ಅಂಬರ್ ಜೊತೆ 'ಅಬ ಜಬ ದಬ' ಸಿನಿಮಾಗಳು ನಟಿಯ ಕೈಯಲ್ಲಿವೆ. ಕಳೆದ ವರ್ಷ ರಕ್ಷಿತ್ ಶೆಟ್ಟಿ ನಿರ್ಮಾಣದ 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದಲ್ಲಿ ವಿಹಾನ್ ಗೆ ನಾಯಕಿಯಾಗಿ ನಟಿಸಿದ್ದರು ಅಂಕಿತಾ.

## ನಕ್ಕೆ ಇಷ್ಟು ಲೋಟ ಕಾಫಿ ಕುಡಿಯಿರಿ



### ಹೆಲ್ತ್ ಟಿಪ್ಸ್

ದೇಹದಲ್ಲಿ ಹೆಚ್ಚಿನ ಮಟ್ಟದ ಕೆಫೀನ್ ಇರುವುದು ಬಾಡಿ ಮಾಸ್ ಇಂಡೆಕ್ಸ್ (ಬಿಎಂಐ) ಅನ್ನು ಕಡಿಮೆ ಮಾಡುತ್ತದೆ ಮತ್ತು ಟೈಪ್ -2 ಮಧುಮೇಹದ ಅಪಾಯವನ್ನು ಕಡಿಮೆ ಮಾಡುತ್ತದೆ. ಕರೋಲಿನ್ಸ್ಕಾ ಸಂಸ್ಥೆ, ಬ್ರಿಸ್ಟಲ್ ವಿಶ್ವವಿದ್ಯಾಲಯ ಮತ್ತು ಲಂಡನ್‌ನ ಇಂಪೀರಿಯಲ್ ಕಾಲೇಜಿನ ವಿಜ್ಞಾನಿಗಳು ಈ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ.

ಈ ಅಧ್ಯಯನದಲ್ಲಿ, ವಿಜ್ಞಾನಿಗಳು ಕೆಫೀನ್ ನಮ್ಮ ದೇಹದ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಕೆಫೀನ್ ಟೈಪ್ 2 ಮಧುಮೇಹದಮೇಲೆ ಪರಿಣಾಮ ಬೀರುತ್ತದೆ ಎನ್ನುವುದನ್ನು ಇಲ್ಲಿ ಸಂಶೋಧನೆ ಮೂಲಕ ಕಂಡುಕೊಳ್ಳಲಾಗಿದೆ. ಈ ಪರಿಣಾಮದ ಅರ್ಧದಷ್ಟು ಬಿಎಂಐ ಕಡಿಮೆಯಾಗುವುದರಿಂದ ಉಂಟಾಗುತ್ತದೆ. ಸಂಶೋಧನೆಯ ಪ್ರಕಾರ, ಪ್ಲಾಸ್ಮಾದಲ್ಲಿ ತಳೀಯವಾಗಿ ಹೆಚ್ಚಿನ ಮಟ್ಟದ ಕೆಫೀನ್ ಹೊಂದಿದ್ದ ಜನರು ಕಡಿಮೆ ದೇಹದ ಕೊಬ್ಬು ಮತ್ತು ಃಒಐ ಅನ್ನು ಹೊಂದಿದ್ದರು. ಕೆಫೀನ್ ಶಕ್ತಿಯನ್ನು ಹೆಚ್ಚಿಸುವುದಲ್ಲದೆ, ಫ್ಯಾಟ್ ಬರ್ನ್ ಆಗುವುದಕ್ಕೂ ಸಹಾಯ ಮಾಡುತ್ತದೆ. ಕೆಫೀನ್‌ಚಯಾಪಚಯ ಕ್ರಿಯೆಯನ್ನು ವೇಗಗೊಳಿಸಿ, ಫ್ಯಾಟ್ ಬರ್ನ್ ಮಾಡಲು ಸಹಾಯ ಮಾಡುತ್ತದೆ. ಪ್ರತಿದಿನ ಸುಮಾರು 100 ಮಿಲಿಗ್ರಾಂ ಕೆಫೀನ್ ಸೇವಿಸುವುದರಿಂದ ದೇಹವು ಸುಮಾರು 100 ಹೆಚ್ಚುವರಿ ಕ್ಯಾಲೊರಿಗಳನ್ನು ವ್ಯಯಿಸಬಹುದು ಎನ್ನುವುದು ಸಂಶೋಧಕರ ಮಾತು. ಇದು ಬೊಜ್ಜು ಮತ್ತು ಸಂಬಂಧಿತ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ಹೆಚ್ಚು ಕೆಫೀನ್ ಸೇವಿಸುವ ಜನರಿಗೆ ಟೈಪ್ 2 ಮಧುಮೇಹ ಬರುವ ಅಪಾಯ ಕಡಿಮೆ ಎಂದು ಸಂಶೋಧನೆಯು ಕಂಡುಹಿಡಿದಿದೆ. ಇದಕ್ಕೆ ಪ್ರಮುಖ ಕಾರಣ ಕಡಿಮೆ BMI ಎಂದು ವಿಜ್ಞಾನಿಗಳು ನಂಬುತ್ತಾರೆ.

## 'ಬಿಗ್ ಬಾಸ್' ಫ್ರೆಂಡ್ಸ್ ಜೊತೆ ಮೋಕ್ಷಿತಾ ಫಾರಿನ್ ಟ್ರಿಪ್



'ಬಿಗ್ ಬಾಸ್ ಕನ್ನಡ 11'ರಲ್ಲಿ ಮೋಕ್ಷಿತಾ, ಐಶ್ವರ್ಯಾ, ಶಿಶಿರ್ ಶಾಸ್ತ್ರಿ ನಡುವೆ ಶುರುವಾದ ಸ್ನೇಹ ಕಾರ್ಯಕ್ರಮ ಮುಗಿದ್ಮೇಲೆಯೂ ಮುಂದುವರೆದಿದೆ. ಶೋಗಷ್ಟೇ ಸೀಮಿತವಾಗಿಡದೇ ಮುಗಿದ್ಮೇಲೆಯೂ ಮೂವರ ನಡುವೆ ಗಾಢವಾದ ಸ್ನೇಹ ಬೆಳೆದಿದೆ. ಇದೀಗ ಮೂವರು ವಿದೇಶಕ್ಕೆ ತೆರಳಿದ್ದಾರೆ. ಐಶ್ವರ್ಯಾ, ಶಿಶಿರ್ ಜೊತೆ ಮೋಕ್ಷಿತಾ ಫಾರಿನ್‌ನಲ್ಲಿ ಎಂಜಾಯ್ ಮಾಡ್ತಿದ್ದಾರೆ.

ಮೋಕ್ಷಿತಾಗೆ ಟ್ರಾವೆಲಿಂಗ್ ಎಂದರೆ ತುಂಬಾ ಇಷ್ಟ. ಸದಾ ಹೊಸ ಜಾಗಗಳಿಗೆ ಭೇಟಿ ನೀಡೋ ನಟಿ ಈಗ 'ಬಿಗ್ ಬಾಸ್' ಫ್ರೆಂಡ್ಸ್ ಐಶ್ವರ್ಯಾ, ಶಿಶಿರ್ ಶಾಸ್ತ್ರಿ ಜೊತೆ ಅಜೆರ್ಬೈಜಾನ್‌ನ ಬಾಕುಗೆ ತೆರಳಿದ್ದಾರೆ. ಅವರೊಂದಿಗೆ ಮೋಕ್ಷಿತಾ ತಂಗಿ ಅಮೃತಾ ಕೂಡ ಸಾಥ್ ನೀಡಿದ್ದಾರೆ. ಬಾಕು ಕೊಲ್ಲಿಯ ವಿಶಾಲವಾದ ಪ್ರದೇಶಗಳಲ್ಲಿ ಬಿಗ್ ಬಾಸ್ ಸ್ಪರ್ಧಿಗಳು ಸುತ್ತಾಡಿದ್ದಾರೆ. ಪ್ರಪಂಚದ ಅತಿದೊಡ್ಡ ಒಳನಾಡಿನ ಜಲರಾಶಿಯಾಗಿರೋ ಕ್ಯಾಸ್ಪಿಯನ್ ಸಮುದ್ರಕ್ಕೆ ಭೇಟಿ ಕೊಟ್ಟಿದ್ದಾರೆ. ಇಲ್ಲಿನ ಸುಂದರ ಫೋಟೋಗಳನ್ನು ನಟಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಬಿಗ್ ಬಾಸ್ ಕಾರ್ಯಕ್ರಮ ಮುಕ್ತಾಯ ಆದ್ಮೇಲೆಯೂ ಈ ಮೂವರು ಜೊತೆಯಾಗಿರೋದನ್ನು ನೋಡಿ ಫ್ಯಾನ್ಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಧರ್ಮಸ್ಥಳ, ಕೊಲ್ಲೂರು ದೇಗುಲಕ್ಕೆ ಐಶ್ವರ್ಯಾ, ಶಿಶಿರ್ ಶಾಸ್ತ್ರಿ ಜೊತೆ ಮೋಕ್ಷಿತಾ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

## ಟೊಮೆಟೊ ಫೇಸ್ ಪ್ಯಾಕ್!

### ಬ್ಯೂಟಿ ಟಿಪ್ಸ್



ನಮಗೆಲ್ಲರಿಗೂ ತಿಳಿದಿರುವಂತೆ, ಟೊಮೆಟೊ ಅತ್ತ ತರಕಾರಿಯೂ ಅಲ್ಲ, ಇತ್ತ ಹಣ್ಣು ಅಲ್ಲ ಎನ್ನುವಂತಹ ವಸ್ತು. ಸಾಮಾನ್ಯವಾಗಿ ದಿನನಿತ್ಯದ ಅಡುಗೆಗಳಲ್ಲಿ ಹೆಚ್ಚಾಗಿ ಟೊಮೆಟೊವನ್ನು ಬಳಸುತ್ತೇವೆ, ಆದರೆ ಇದೇ ಟೊಮೆಟೊ ಬಳಸಿ ತ್ವಚೆಯ ಮೇಲಿನ ಎಲ್ಲಾ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು. ಇದರಲ್ಲಿನ ಆಂಟಿಆಕ್ಸಿಡೆಂಟ್ ಮತ್ತು ಆಂಟಿಟ್ರೋಸಿನೇಸ್ ಗುಣಗಳು ತ್ವಚೆಯ ಕಲೆಗಳ ಬಣ್ಣ ಮಾಸುವಂತೆಮಾಡುವುದು ಮತ್ತು ಚರ್ಮಕ್ಕೆ ಹಾನಿ ಆಗದಂತೆ ತಡೆಯುವುದು. ಟೊಮೇಟೊ ಫೇಸ್ ಮಾಸ್ಕ್ ಬಳಸಿದರೆ ಆಗುವ ಲಾಭ ಅಷ್ಟಿಷ್ಟಲ್ಲ!ಮುಖದಲ್ಲಿರುವಂತಹ ಮೊಡವೆ ಹಾಗೂ ಕಲೆಗಳಿಂದ ಸಮಸ್ಯೆಯಾಗಿ, ಸೌಂದರ್ಯ ಕೆಡುತ್ತಿದೆಯಾ? ಮುಖದ ಸೌಂದರ್ಯ ಕೆಡುವುದನ್ನು ನೋಡಿ ನೀವು ಖಿನ್ನತೆಗೆ ಕೂಡ ಒಳಗಾಗುತ್ತಿದ್ದೀರಾ? ಹಾಗಾದರೆ ಈ ಲೇಖನವನ್ನು ನೀವು ಪೂರ್ತಿಯಾಗಿಓದಲೇ ಬೇಕು. ಯಾಕೆಂದರೆ ಹಲವಾರು ರಾಸಾಯನಿಕಗಳು ಇರುವಂತಹ ಫೇಸ್ ಪೇಕ್ ನ್ನು ನೀವು ಬಳಸಿಕೊಂಡು ಮುಖದ ಸೌಂದರ್ಯ ಮತ್ತಷ್ಟ ಕೆಡಿಸಿಕೊಂಡಿರ ಬಹುದು. ಈ ಲೇಖನದಲ್ಲಿ ನಾವು ನಿಮಗೆ ಟೊಮೆಟೊ ಬಳಸಿಕೊಂಡು ಮುಖದ ಸೌಂದರ್ಯ ಕಾಪಾಡಿ ಕೊಳ್ಳುವುದು ಹೇಗೆ ಎಂದು ತಿಳಿಸಿಕೊಡಲಿದ್ದೇವೆ. ನೀವು ಮುಖದ ಸೌಂದರ್ಯಕ್ಕಾಗಿ ಬಹುದಿನದಿಂದ ಹುಡುಕುತ್ತಿದ್ದ ನೈಸರ್ಗಿಕ ಫೇಸ್ ಪ್ಯಾಕ್ ಇಲ್ಲಿದೆ. ಇದರ ಪರಿಣಾಮಗಳ ಬಗ್ಗೆ ನೀವು ಬಳಸಿ ತಿಳಿದು ಕೊಳ್ಳಬೇಕು. ಟೊಮೆಟೊದಲ್ಲಿ ಹಲವಾರು ರೀತಿಯ ಪೋಷಕಾಂಶಗಳು ಒಳಗೊಂಡಿದೆ. ಇದರಲ್ಲಿ ಫೆನಾಲಿಕ್ ಅಂಶಗಳಾಗಿರುವಂತಹ ಕ್ಯಾರೋಟನಾಯ್ಡ್, ಫಾಲಿಕ್ ಆಮ್ಲ ಮತ್ತು ವಿಟಮಿನ್ ಸಿ ಇದೆ. ಇದು ಈ ಕೆಳಗಿನಂತೆ ಚರ್ಮಕ್ಕೆ ಲಾಭ ನೀಡಲಿದೆ. ಇದರಲ್ಲಿನ ಆಂಟಿಆಕ್ಸಿಡೆಂಟ್ ಮತ್ತು ಆಂಟಿಟ್ರೋಸಿನೇಸ್ ಗುಣಗಳು ಕಲೆಗಳ ಬಣ್ಣ ಮಾಸುವಂತೆ ಮಾಡುವುದು ಮತ್ತು ಚರ್ಮಕ್ಕೆ ಹಾನಿ ಆಗದಂತೆ ತಡೆಯುವುದು.

ಇದನ್ನು ನೇರವಾಗಿ ಹಚ್ಚಿಕೊಂಡ ವೇಳೆ ವಯಸ್ಸಾಗುವ ವೇಳೆ ಕಾಣಿಸಿಕೊಳ್ಳುವ ನೆರಿಗೆ, ಗೆರೆಗಳು ಮತ್ತು ಚರ್ಮ ಜೋತು ಬೀಳುವ ಸಮಸ್ಯೆ ನಿವಾರಣೆ ಆಗುವುದು. ಇದರಲ್ಲಿ ಇರುವಂತಹ ಲೈಕೋಪೆನೆ ಎನ್ನುವ ಅಂಶವು ಮುಖಕ್ಕೆ ಆಗುವ ಹಾನಿ ತಡೆಯುವುದು.ವಿಟಮಿನ್ ಸಿ ಕಾಲಜನ್ ಉತ್ಪತ್ತಿ ಸುಧಾರಿಸುವುದು ಮತ್ತು ಚರ್ಮದ ಸ್ಥಿತಿಸ್ಥಾಪಕತ್ವಹೆಚ್ಚಿಸುವುದು. ಇದರಿಂದ ಚರ್ಮವು ಬಿಗಿಯಾಗುವುದು. ಟೊಮೆಟೊದ ತಿರುಳಿನಲ್ಲಿ ಬ್ಯಾಕ್ಟೀರಿಯಾ ವಿರೋಧೀ ಮತ್ತು ಶಿಲೀಂಧ್ರ ವಿರೋಧಿ ಗುಣಗಳು ಇವೆ. ಚರ್ಮದಲ್ಲಿನ ಪಿಎಚ್ ಮಟ್ಟವನ್ನು ಇದು ಸಮತೋಲನದಲ್ಲಿ ಇಡುತ್ತದೆ. ಇದರಿಂದಾಗಿ ಚರ್ಮದಲ್ಲಿನ ನೈಸರ್ಗಿಕ ತೈಲದ ಉತ್ಪತ್ತಿ ಕೂಡ ಸಮತೋಲನದಲ್ಲಿ ಇಡುವುದು. ಚರ್ಮದ ಸತ್ತ ಕೋಶಗಳನ್ನು ಇದು ನಿವಾರಿಸುವುದು ಮತ್ತು ರಂಧ್ರಗಳನ್ನು ಬಿಗಿಯಾಗಿಸುವುದು.

## 60 ಗರ್ಭಿಣಿಯರಿಗೆ ಬಿಬಿಎಂಪಿ ಹೆರಿಗೆ ಆಸ್ಪತ್ರೆಯಲ್ಲಿ ಸಮುದಾಯ ಶಿಶುವಿಹಾರ ಕಾರ್ಯಕ್ರಮ



**ಕಟ್ಟೆ ಸತ್ಯ ಫೌಂಡೇಶನ್ ಸಹಯೋಗದೊಂದಿಗೆ ರಾಧಾಕೃಷ್ಣ ಫೌಂಡೇಶನ್ ಆಯೋಜಿಸಿದ್ದ ಸಮಾರಂಭ**

ಎನ್‌ಆರ್ ಕಾಲೋನಿಯ ಬಿಬಿಎಂಪಿ ಹೆರಿಗೆ ಆಸ್ಪತ್ರೆಯಲ್ಲಿ ನಡೆದ ಜನನಿ ಎಂಬ ಸಮುದಾಯ ಶಿಶುವಿಹಾರ ಕಾರ್ಯಕ್ರಮದಲ್ಲಿ ಗರ್ಭಧಾರಣೆಯ ಕೊನೆಯ ಹಂತದಲ್ಲಿರುವ 60ಕ್ಕೂ ಹೆಚ್ಚು ಸವಲತ್ತು ಇಲ್ಲದ ಮಹಿಳೆಯರು ಭಾಗವಹಿಸಿದ್ದರು. ರಾಧಾಕೃಷ್ಣ ಫೌಂಡೇಶನ್, ಕಟ್ಟೆ ಸತ್ಯ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಹೆಸರಾಂತ ಪರಿಸರವಾದಿ ಮತ್ತು ಲೋಕೋಪಕಾರಿ ಶ್ರೀಮತಿ ರೇವತಿ ಕಾಮತ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಬಸವನಗುಡಿ ಶಾಸಕರಾದ ರವಿ ಸುಬ್ರಹ್ಮಣ್ಯ, ಮಾಜಿ ಮೇಯರ್ ಬಿ ಎಸ್ ಸತ್ಯನಾರಾಯಣ (ಕಟ್ಟೆ ಸತ್ಯ), ಕಟ್ಟೆ ಸತ್ಯ ಫೌಂಡೇಶನ್ ಅಧ್ಯಕ್ಷ ಮತ್ತು ರಾಧಾಕೃಷ್ಣ ಫೌಂಡೇಶನ್ ಅಧ್ಯಕ್ಷೆ, ಸ್ತ್ರೀರೋಗ ತಜ್ಞೆ ಡಾ.ವಿದ್ಯಾ ವಿ ಭಟ್ ಸೇರಿದಂತೆ ಗಣ್ಯರು ಬಿಬಿಎಂಪಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಉಪಸ್ಥಿತರಿದ್ದರು.

ಬೆಂಗಳೂರಿನ ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿಯೂ ಆಗಿರುವ ರಾಧಾ ಕೃಷ್ಣ ಫೌಂಡೇಶನ್ನ ಅಧ್ಯಕ್ಷೆ ಡಾ.ವಿದ್ಯಾ ವಿ ಭಟ್ ಮಾತನಾಡಿ, ತಾಯ್ತನವನ್ನು ಗೌರವಿಸುವುದು, ಗರ್ಭಾವಸ್ಥೆಯಲ್ಲಿ ಮಹಿಳೆಯರಿಗೆ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದರ ಕುರಿತು ಶಿಕ್ಷಣ ನೀಡುವುದು, ಅವರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸುವುದು ಮತ್ತು ಆಸ್ಪತ್ರೆಯಲ್ಲಾಗುವ ಸಹಜ ಹೆರಿಗೆಗಳನ್ನು ಪ್ರೋತ್ಸಾಹಿಸುವುದು ಮುಂತಾದವು ಈ ಕಾರ್ಯಕ್ರಮ ಆಯೋಜಿಸುವ ಹಿಂದಿನ ಉದ್ದೇಶವಾಗಿದೆ. ಇವೆಲ್ಲ ಪ್ರಕ್ರಿಯೆಗಳು ತಾಯಂದಿರು ತಮ್ಮ ಶಿಶುಗಳಿಗೆ ಹೆಚ್ಚು ಅಡೆತಡೆಯಿಲ್ಲದೆ ಜನ್ಮ ನೀಡಬಲ್ಲರು ಎಂಬ ಭರವಸೆ ಮೂಡಿಸುತ್ತದೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪರಿಸರವಾದಿ ಮತ್ತು ಲೋಕೋಪಕಾರಿ ಶ್ರೀಮತಿ ರೇವತಿ ಕಾಮತ್ ಮಾತನಾಡಿ, ತಾಯ್ತನವು ಯಾವುದೇ ಆರೋಗ್ಯಕರ ಸಮಾಜದ ಅಡಿಪಾಯ. ರಾಧಾಕೃಷ್ಣ ಫೌಂಡೇಶನ್ ಮತ್ತು ಕಟ್ಟೆ ಸತ್ಯ ಫೌಂಡೇಶನ್ನಂತಹ ಸಂಸ್ಥೆಗಳು ಆರೋಗ್ಯ ಸೇವೆ ಪಡೆಯಲು ಸೀಮಿತ ಅವಕಾಶ ಹೊಂದಿರುವ ಈ ಮಹಿಳೆಯರನ್ನು ಬೆಂಬಲಿಸುತ್ತಿರುವುದು ಹೃದಯ ಸ್ಪರ್ಶಿ ವಿಚಾರ. ಈ ನಿರ್ಣಾಯಕ ಸಮಯದಲ್ಲಿ ಅವರಿಗೆ ಅಗತ್ಯ ಜ್ಞಾನ, ಪೋಷಣೆ ಮತ್ತು ವೈದ್ಯಕೀಯ ಆರೈಕೆ ನೀಡುವುದರಿಂದ ತಾಯಂದಿರು ಮತ್ತು ಶಿಶುಗಳು ಇಬ್ಬರಿಗೂ ಸುರಕ್ಷಿತ ಭವಿಷ್ಯವನ್ನು ಖಾತ್ರಿ ಪಡಿಸುತ್ತದೆ ಎಂದು ಹೇಳಿದರು. ಐದು ತಿಂಗಳಿಗಿಂತ ಹೆಚ್ಚು ಗರ್ಭಿಣಿಯರಾದ ಎಲ್ಲಾ ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳೆಯರಿಗೆ ಸೀರೆ, ಬಳೆ, ಹಣ್ಣುಗಳು, ಪ್ರೋಟೀನ್ ಪೌಡರ್ ಮತ್ತು ಸ್ಟೇನ್ಲೆಸ್ ಸ್ಟೀಲ್ ಪ್ಲೇಟ್ ಸೇರಿದಂತೆ ಉಡುಗೊರೆಗಳನ್ನು ನೀಡಲಾಯಿತು. ನಿಯಮಿತವಾಗಿ ಸಮುದಾಯ ಶಿಶುವಿಹಾರ (ಸೀಮಂತ) ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ರಾಧಾಕೃಷ್ಣ ಫೌಂಡೇಶನ್ ತೊಡಗಿಸಿಕೊಂಡಿದೆ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಅವಕಾಶಗಳನ್ನ ಸದುಪಯೋಗ ಪಡಿಸಿಕೊಳ್ಳುವಿರಿ, ಧನ ಲಾಭ, ಇತರರ ಭಾವನೆಗಳಿಗೆ ಸ್ಪಂದಿಸುವಿರಿ.

**ವೃಷಭ:** ಪ್ರತಿಯೊಂದು ಕೆಲಸವನ್ನು ತಾಳ್ಮೆಯಿಂದ ನಿಭಾಯಿಸಿ, ವಿನಾಕಾರಣ ನಿಷ್ಠುರ, ದೇವತಾ ಕಾರ್ಯ, ಕುಟುಂಬದಲ್ಲಿ ಶಾಂತಿ.

**ಮಿಥುನ:** ಬೇಡದ ವಿಷಯಗಳಲ್ಲಿ ಆಸಕ್ತಿ, ಪ್ರೀತಿ ಪಾತ್ರರ ಆಗಮನ, ಹಿತ ಶತ್ರು ಬಾಧೆ, ಮನಸ್ಸಿಗೆ ಸದಾ ಸಂಕಟ, ಚಂಚಲ ಮನಸ್ಸು.

**ಕಟಕ:** ಕಾರ್ಯಕ್ಷೇತ್ರದಲ್ಲಿ ಒತ್ತಡ, ಯಂತ್ರೋಪಕರಣಗಳಿಂದ ಲಾಭ, ಸ್ತ್ರೀ ಸೌಖ್ಯ, ಪ್ರಯತ್ನದಿಂದ ಕಾರ್ಯಸಿದ್ಧಿ.

**ಸಿಂಹ:** ವಿದೇಶ ಪ್ರಯಾಣ, ಕ್ರಯ ವಿಕ್ರಯಗಳಿಂದ ಲಾಭ, ಕೃಷಿಕರಿಗೆ ಲಾಭ, ಆಪ್ತರ ಭೇಟಿ, ಶುಭ ಸುದ್ದಿ ಕೇಳುವಿರಿ.

**ಕನ್ಯಾ:** ಹಣದ ವಿಷಯದಲ್ಲಿ ಜಾಗ್ರತೆ, ಚಂಚಲ ಮನಸ್ಸು, ಋಣ ಬಾಧೆ, ವಾಹನ ರಿಪೇರಿ, ಎಲ್ಲಿ ಹೋದರು ಅಶಾಂತಿ.

**ತುಲಾ:** ಇತರರ ಮಾತಿನಿಂದ ಕಲಹ, ಎಷ್ಟೇ ಹಣ ಬಂದರೂ ಉಳಿಯುವುದಿಲ್ಲ, ಸ್ವಯಂಕೃತ ಅಪರಾಧ, ಮಕ್ಕಳ ವಿಷಯದಲ್ಲಿ ನೋವು.

**ವೃಶ್ಚಿಕ:** ರೋಗಬಾಧೆ, ಮನೋವ್ಯಥೆ, ಆಪ್ತರೊಂದಿಗೆ ಸಂಕಷ್ಟಗಳನ್ನು ಹೇಳಿಕೊಳ್ಳುವಿರಿ, ಕಾರ್ಯಭಂಗ.

**ಧನಸ್ಸು:** ಬೆಲೆಬಾಳುವ ವಸ್ತುಗಳ ಖರೀದಿ, ರಫ್ತು ಮಾರಾಟದವರೆಗೆ ಶುಭ, ಹೊಸ ಪ್ರಯತ್ನದಿಂದ ಯಶಸ್ಸು.

**ಮಕರ:** ಪರರಿಗೆ ವಂಚನೆ, ದಯಾದಿಕಲಹ, ಚಂಚಲ ಮನಸ್ಸು, ಅಕಾಲ ಭೋಜನ.

**ಕುಂಭ:** ನಂಬಿದ ಜನರಿಂದ ಮೋಸ, ಸಣ್ಣ ಪುಟ್ಟ ವಿಷಯಗಳಿಂದ ತೊಂದರೆ, ವಿದ್ಯಾರ್ಥಿಗಳಿಗೆ ಹಿನ್ನಡೆ.

**ಮೀನ:** ಉದ್ಯೋಗದಲ್ಲಿ ವರ್ಗಾವಣೆ, ಹಿತ ಶತ್ರು ಬಾಧೆ, ಮಾತಿನ ಚಕಮಕಿ, ವಾದ ವಿವಾದ, ತಾಳ್ಮೆ ಅಗತ್ಯ, ಶರೀರದಲ್ಲಿ ಆಯಾಸ.

## ಅಂತರರಾಷ್ಟ್ರೀಯ ಹಮ್ಮಸ್ ದಿನ

ಮೇ 13 ಅಂತರರಾಷ್ಟ್ರೀಯ ಹಮ್ಮಸ್ ದಿನವಾಗಿರುವುದರಿಂದ, ಹಮ್ಮಸ್ ಎಂದೂ ಕರೆಯಲ್ಪಡುವ ಗಾರ್ಬನ್ಜೋ ಬೀನ್ಸ್, ತಾಹಿನಿ, ನಿಂಬೆ ರಸ ಮತ್ತು ಬೆಳ್ಳುಳ್ಳಿಯ ಅಮಲೇರಿಸುವ ರುಚಿಕರವಾದ ಮಿಶ್ರಣವನ್ನು ಆಚರಿಸುವುದನ್ನು ಬಿಟ್ಟು ನಮಗೆ ಬೇರೆ ದಾರಿಯಿಲ್ಲ. ನಿಮ್ಮ ಸ್ವಂತ ಕಸ್ಟಮ್-ರುಚಿಯ ಕೆಂಪು ಮೆಣಸಿನಕಾಯಿ ಹಮ್ಮಸ್ ಅನ್ನು ಬೇಯಿಸುವುದರಿಂದ ಹಿಡಿದು ಅಂಗಡಿಯಲ್ಲಿ ಖರೀದಿಸಿದ ಸಿಹಿ ಹಮ್ಮಸ್ ಅನ್ನು ಕುಕೀಯಲ್ಲಿ ಹರಡುವವರೆಗೆ, ಆಚರಿಸಲು ಅಂತ್ಯವಿಲ್ಲದ ಮಾರ್ಗಗಳಿವೆ. ಹಮ್ಮಸ್‌ನ ಮೂಲವು ಮೋಡ ಕವಿದಿದೆ ಮತ್ತು ತೀವ್ರವಾಗಿ ವಿವಾದಾತ್ಮಕವಾಗಿದೆ. ಇದು ಮಧ್ಯಪ್ರಾಚ್ಯದಲ್ಲಿ ಹುಟ್ಟಿಕೊಂಡಿದೆ ಎಂದು ನಮಗೆ ತಿಳಿದಿದ್ದರೂ, ಮೆಡಿಟರೇನಿಯನ್‌ನ ಪೂರ್ವ ಅರ್ಧಚಂದ್ರಾಕಾರದ ಸುತ್ತಮುತ್ತಲಿನ ಅನೇಕ ಪ್ರದೇಶಗಳು ರುಚಿಕರವಾದ ಹರಡುವಿಕೆಯ ನಿಜವಾದ ಮೂಲ ಎಂದು ಹೇಳಿಕೊಳ್ಳುತ್ತವೆ. ಅಡುಗೆ ಪುಸ್ತಕದಲ್ಲಿ ಹಮ್ಮಸ್ ಬಗ್ಗೆ ಮೊದಲ ನಿಜವಾದ ಉಲ್ಲೇಖವು 13 ನೇ ಶತಮಾನದ ಕೈರೋದಲ್ಲಿ ಕಂಡುಬಂದಿದೆ, ಅಲ್ಲಿ ಇದು ಕೇವಲ ತಣ್ಣನೆಯ ಕಡಲೆ ಪ್ಯೂರಿಯಾಗಿ ಕಂಡುಬರುತ್ತದೆ ಮತ್ತು ಗಮನಾರ್ಹವಾಗಿ ನಿಂಬೆ ರಸ ಮತ್ತು ಬೆಳ್ಳುಳ್ಳಿಯನ್ನು ಹೊಂದಿರುವುದಿಲ್ಲ - ಎಣ್ಣೆ, ಗಿಡಮೂಲಿಕೆಗಳು ಮತ್ತು ಮಸಾಲೆಗಳೊಂದಿಗೆ ಉಪ್ಪಿನಕಾಯಿ ನಿಂಬೆಹಣ್ಣುಗಳನ್ನು ಒಳಗೊಂಡಂತೆ. ಇದು ಇನ್ನೂ ನಮಗೆ ತುಂಬಾ ಒಳ್ಳೆಯದು ಎಂದು ತೋರುತ್ತದೆ. ಕಡಲೆ ಬೆಳೆಯುವ ಮಧ್ಯಪ್ರಾಚ್ಯದಲ್ಲಿ ವಾಸಿಸುವ ಅನೇಕರ ಆಹಾರದಲ್ಲಿ ಹಮ್ಮಸ್ ಒಂದು ದೊಡ್ಡ ಪ್ರಧಾನ ಆಹಾರವಾಗಿ ಉಳಿದಿದೆ. ವಾಸ್ತವವಾಗಿ, ಹಮ್ಮಸ್ ಎಂಬ ಪದವು ಕಡಲೆ ಎಂಬ ಅರೇಬಿಕ್ ಪದದಲ್ಲಿ ಬೇರೂರಿದೆ! ಗ್ರೀಕರು ಹಮ್ಮಸ್ ಅನ್ನು ಕಂಡುಹಿಡಿದರೋ ಇಲ್ಲವೋ ಎಂಬುದರ ಕುರಿತು ಕೆಲವು ಚರ್ಚೆಗಳಿದ್ದರೂ, ಹೆಚ್ಚಿನವರು ಇದು ಗ್ರೀಕ್ ಮತ್ತು ಮಧ್ಯಪ್ರಾಚ್ಯ ವ್ಯಾಪಾರಿಗಳ ನಡುವೆ ಹರಡಿತು ಎಂದು ನಂಬುತ್ತಾರೆ, ಜೊತೆಗೆ ಬಕ್ಲಾವಾ ಮತ್ತು ಸ್ಟಫ್ಡ್ ದ್ರಾಕ್ಷಿ ಎಲೆಗಳಂತಹ ಜನಪ್ರಿಯ ಭಕ್ಷ್ಯಗಳನ್ನು ಸಹ ಹೊಂದಿದೆ. ಈ ಕಾರಣಕ್ಕಾಗಿ ಇದನ್ನು ಅತ್ಯುತ್ತಮ ಕ್ರಾಸ್‌ಓವರ್ ಆಹಾರಗಳಲ್ಲಿ ಒಂದೆಂದು ಕರೆಯಲಾಗುತ್ತದೆ. ಇದು ಮಧ್ಯಪ್ರಾಚ್ಯದ ಅನೇಕ ದೇಶಗಳಿಗೆ ರಾಷ್ಟ್ರೀಯ ಖಾದ್ಯವಾಗಿದೆ. ಇದು ಪಾಕಶಾಲೆಯಷ್ಟೇ ಸಾಂಸ್ಕೃತಿಕ ವಿದ್ಯಮಾನವಾಗಿದೆ ಮತ್ತು ರಾಷ್ಟ್ರಗಳು ಹಮ್ಮಸ್‌ಗೆ ತಮ್ಮ ಹಕ್ಕು ಸಲ್ಲಿಸಲು ಮುಂದಾದವು. ಉದಾಹರಣೆಗೆ, 2008 ರಲ್ಲಿ ಲೆಬನಾನ್ ಹಮ್ಮಸ್ ಅನ್ನು ಕದಿಯುವ ಕಾರಣಕ್ಕಾಗಿ ಇಸ್ರೇಲ್ ವಿರುದ್ಧ ಮೊಕದ್ದಮೆ ಹೂಡಲು ಪ್ರಯತ್ನಿಸಿತು! ಅದಾದ ನಂತರ, ಇಬ್ಬರೂ ಅತಿದೊಡ್ಡ ಪ್ಲೇಟ್ ಹಮ್ಮಸ್ ಅನ್ನು ದಾಖಲೆ ಮಾಡಲು ಶ್ರಮಿಸಿದರು. ಮಧ್ಯಪ್ರಾಚ್ಯ ಮತ್ತು ದಕ್ಷಿಣ ಯುರೋಪಿನಲ್ಲಿ ಅದರ ದೀರ್ಘಕಾಲೀನ ಜನಪ್ರಿಯತೆಯ ಹೊರತಾಗಿಯೂ, ಹಮ್ಮಸ್ ಅನ್ನು ಸಂಗ್ರಹಿಸಿದ ಮೊದಲ ಬ್ರಿಟಿಷ್ ದಿನಸಿ ಅಂಗಡಿಯು 1980 ರಲ್ಲಿ ಮಾತ್ರ ಹಾಗೆ ಮಾಡಿತು ಎಂದು ತಿಳಿದು ನಿಮಗೆ ಆಶ್ಚರ್ಯವಾಗಬಹುದು. ಆದಾಗ್ಯೂ, ಆಶ್ಚರ್ಯವೇನಿಲ್ಲ, ಇದು ಯುಕೆಯಲ್ಲಿ ಶೀಘ್ರವಾಗಿ ಉತ್ತಮ ಯಶಸ್ಸನ್ನು ಗಳಿಸಿತು, ಹೆಚ್ಚಾಗಿ ಅದರ ಆರೋಗ್ಯ ಪ್ರಯೋಜನಗಳಿಗಾಗಿ. ಹಮ್ಮಸ್ ಖಂಡಿತವಾಗಿಯೂ ಅಮೆರಿಕಕ್ಕೆ ತಡವಾಗಿ ಆಗಮಿಸಿತು. 20 ವರ್ಷಗಳ ಹಿಂದೆ, ಹೆಚ್ಚಿನ ಅಮೆರಿಕನ್ನರು ಬಹುಶಃ ಖಾದ್ಯದ ಹೆಸರನ್ನು ಉಚ್ಚರಿಸಲು ಸಹ ಸಾಧ್ಯವಾಗಲಿಲ್ಲ, ಮತ್ತು ವಾರ್ಷಿಕ ಮಾರಾಟವು ಕೇವಲ 5 ಮಿಲಿಯನ್ ಅನ್ನು ಮೀರಿದೆ.

# ಭಾರತದ ಬ್ರಹ್ಮೋಸ್ ಹೊಡೆತಕ್ಕೆ ಪಾಕಿಸ್ತಾನದ 11 ವಾಯುನೆಲೆಗಳು ಸಂಪೂರ್ಣ ನಾಶ!!

**ಕಾಶ್ಮೀರ:** ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾಕದ ದಾಳಿಗೆ ಪ್ರತಿಕಾರವಾಗಿ ಪಾಕಿಸ್ತಾನ ಮತ್ತು ಪಾಕ್‌ನ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ಯಶಸ್ವಿಯಾಗಿ ಆಪರೇಷನ್ ಸಿಂದೂರ್ ನಡೆಸಿದೆ. ಈ ಮೂಲಕ ಪದೇ ಪದೇ ಗಡಿಯಲ್ಲಿ ತಂಟೆ ಮಾಡುತ್ತಿದ್ದ ಪಾಕಿಸ್ತಾನಕ್ಕೆ ಭಾರತವು ತಕ್ಕ ಪಾಠ ಕಲಿಸುವ ಮೂಲಕ ದೊಡ್ಡ ಹೊಡೆತ ನೀಡಿದೆ. ಭಾರತ ಮತ್ತು ಪಾಕಿಸ್ತಾನ ನಡುವೆ ಇದೀಗ ಕದನ ವಿರಾಮ ಘೋಷಿಸಲಾಗಿದೆ. ಆದರೆ ಭಾರತವು ಪಾಕಿಸ್ತಾನಕ್ಕೆ ಎಂದಿಗೂ ನೆನಪಿನಲ್ಲಿಟ್ಟುಕೊಳ್ಳುವಂತಹ ಪಾಠವನ್ನು ಕಲಿಸಿದೆ. ಆಪರೇಷನ್ ಸಿಂದೂರ್ ಮೂಲಕ ಭಾರತವು ತನ್ನ ವಾಯು ರಕ್ಷಣಾ ವ್ಯವಸ್ಥೆಯ ಸಹಾಯದಿಂದ ಪಾಕಿಸ್ತಾನದ ಯಾವುದೇ ದಾಳಿಯನ್ನು ತಡೆಯಬಲ್ಲದು ಎಂಬುದನ್ನು ಸಾಬೀತುಪಡಿಸಿದೆ. ಅದೇ ರೀತಿ ಭಾರತವು ತನ್ನ ಬ್ರಹ್ಮೋಸ್‌ನ ಶಕ್ತಿಯನ್ನು ಪಾಕಿಸ್ತಾನಕ್ಕೆ ತೋರಿಸಿದೆ. ಬ್ರಹ್ಮೋಸ್ ಕ್ಷಿಪಣಿಯು ಪಾಕಿಸ್ತಾನದ 11 ವಾಯುನೆಲೆಗಳನ್ನು ಸಂಪೂರ್ಣವಾಗಿ ನಾಶಪಡಿಸಿದೆ.




ಸದ್ಯ ಭಾರತ ಮತ್ತುಪಾಕಿಸ್ತಾನನಡುವೆ ಕದನ ವಿರಾಮ ಘೋಷಣೆಯಾಗಿದೆ. ಆದರೆ ಕದನ ವಿರಾಮಕ್ಕೂ ಮುನ್ನ ಏನಾಯಿತು ಎಂಬುದರ ಬಗ್ಗೆ ಸಾಕಷ್ಟು ಗೊಂದಲಗಳಿವೆ. ಈ ಸಮಯದಲ್ಲಿ ಪಾಕಿಸ್ತಾನದಲ್ಲಿ ಅಲ್ಲಿನ ಸರ್ಕಾರದ ಬಗ್ಗೆ ಭಾರೀ ಪ್ರಚಾರ ನಡೆಯುತ್ತಿದೆ. ಶಹಬಾಜ್ ಷರೀಫ್ ತನ್ನ ಜನರಿಂದ ಸತ್ಯವನ್ನು ಮರೆಮಾಡುತ್ತಿದ್ದಾರೆ. ಆಪರೇಷನ್ ಸಿಂದೂರ್ ನಿಂದ ಪಾಕಿಸ್ತಾನಕ್ಕೆ ದೊಡ್ಡ ಹೊಡೆತ ಬಿದ್ದಿದ್ದು, ಭಾರೀ ನಷ್ಟ ಅನುಭವಿಸಿದೆ. ಆದರೆ ಪಾಕಿಸ್ತಾನ ಈ ವಿಷಯ ಮುಚ್ಚಿಡಲು ಪ್ರಯತ್ನಿಸುತ್ತಿದೆ. ಪಾಕಿಸ್ತಾನದ 11 ಪ್ರಮುಖ ವಾಯುನೆಲೆಗಳನ್ನ ಭಾರತೀಯ ಸೇನೆ ತನ್ನ ಬ್ರಹ್ಮೋಸ್ ಶಕ್ತಿಯಿಂದ ಉಡೀಸ್ ಮಾಡಿದೆ. ಪಾಕಿಸ್ತಾನದ ನಕ್ಷೆಯನ್ನು ನೋಡಿದರೆ, ಪಿಒಕೆಯಲ್ಲಿ ಸ್ಕಾರ್ದುದಿಂದ ಸಿಂಧ್‌ವರೆಗಿನ 11 ದೊಡ್ಡ ವಾಯುನೆಲೆಗಳು ದಾಳಿಗೆ ನೆಲಕಚ್ಚಿವೆ. ಈ ದಾಳಿ ಎಷ್ಟು ನಿಖರವಾಗಿತ್ತೆಂದರೆ ರನ್‌ವೇ ಮಾತ್ರವಲ್ಲದೆ ಇಡೀ ಮೂಲಸೌಕರ್ಯವೇ ನಾಶವಾಗಿದೆ.



## ವೀಸಾ ನಿಯಮ ಬದಲಾವಣೆಗೆ ಮುಂದಾದ ಬ್ರಿಟನ್

**ಲಂಡನ್:** ಬ್ರಿಟನ್ ನಲ್ಲಿ ವಾಸಿಸುವ ಮತ್ತು ಕೆಲಸ ಮಾಡುವ ವಲಸಿಗ ಕಾರ್ಮಿಕರ ಸಂಖ್ಯೆಯನ್ನು ತಗ್ಗಿಸುವ ಕ್ರಮವಾಗಿ ವೀಸಾ ಮತ್ತು ವಲಸೆ ಕಾನೂನುಗಳಿಗೆ ಮಹತ್ವದ ಬದಲಾವಣೆಗಳನ್ನು ತರಲು ಬ್ರಿಟಿಶ್ ಸರಕಾರ ಯೋಚಿಸುತ್ತಿದೆ.ಪ್ರಸ್ತಾವಿತ ಬದಲಾವಣೆಗಳು ಜಾರಿಗೆ ಬಂದರೆ ಭಾರತೀಯರು ಸೇರಿದಂತೆ ಬ್ರಿಟನ್ ನಲ್ಲಿ ಕೆಲಸ ಮಾಡುವ ಮತ್ತು ಅಲ್ಲಿ ಶಾಶ್ವತವಾಗಿ ನೆಲೆಸುವ ಕನಸು ಕಂಡಿರುವ ವಲಸಿಗರಿಗೆ ಅದನ್ನು ಈಡೇರಿಸುವುದು ತುಂಬಾ ಕಷ್ಟವಾಗಲಿದೆ. ವಲಸೆ ಕುರಿತ ಶ್ವೇತಪತ್ರವನ್ನು ಸೋಮವಾರ ಸಂಸತ್‌ನಲ್ಲಿ ಮಂಡಿಸುವ ಮುನ್ನ, ಕೇರ್ ಸ್ಟಾರ್ಮರ್ ನೇತೃತ್ವದ ಬ್ರಿಟನ್ ಸರಕಾರವು ರವಿವಾರ ವಲಸಿಗರ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದ ಬದಲಾವಣೆಗಳನ್ನು ಜಾರಿಗೆ ತರುವುದಾಗಿ ಪ್ರಕಟಿಸಿದೆ. ಬ್ರಿಟನ್ ನಲ್ಲಿ 2024 ಜೂನ್ ವರೆಗಿನ 12 ತಿಂಗಳ ಅವಧಿಯಲ್ಲಿ 7,28,000 ವಲಸಿಗರು ಬ್ರಿಟನ್ ಗೆ ಆಗಮಿಸಿದ್ದರು. ಹೊಸ ನಿಯಮಗಳು ಜಾರಿಗೆ ಬಂದರೆ ವಲಸೆ ವ್ಯವಸ್ಥೆಯ ಮೇಲಿನ ಸರಕಾರದ ನಿಯಂತ್ರಣವು ಬಲಗೊಳ್ಳುತ್ತದೆ ಎಂದು ಪ್ರಧಾನಿ ಸ್ಟಾರ್ಮರ್ ಹೇಳಿದ್ದಾರೆ. ಬ್ರಿಟನ್ ಗೆ ಅರ್ಥಪೂರ್ಣ ರೀತಿಯಲ್ಲಿ ದೇಣಿಗೆ ನೀಡಬಲ್ಲವರು ಮಾತ್ರ ದೇಶದಲ್ಲಿ ಇರುವಂತೆ ಈ ವ್ಯವಸ್ಥೆಯು ನೋಡಿಕೊಳ್ಳುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.




## ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ತುಂಬಿದ ವಿಮಾನ ಕಳುಹಿಸಿಲ್ಲ: ಚೀನಾ



**ಬೀಜಿಂಗ್:** ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮದ ನಂತರ, ಚೀನಾದಿಂದ ದೊಡ್ಡ ಪ್ರತಿಕ್ರಿಯೆ ಕಂಡುಬಂದಿದೆ. ಚೀನಾದ ಅತಿದೊಡ್ಡ ಮಿಲಿಟರಿ ಸರಕು ವಿಮಾನವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ ಎಂಬ ವರದಿಗಳನ್ನು ಚೀನಾ ಸೇನೆ ನಿರಾಕರಿಸಿದೆ. ಇಂತಹ ವದಂತಿಗಳನ್ನು ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಚೀನಾ ಸೇನೆ ಎಚ್ಚರಿಸಿದೆ. ಪೀಪಲ್ಸ್ ಲಿಬರೇಶನ್ ಆರ್ಮಿ ಏರ್ ಫೋರ್ಸ್ (ಪಿಎಲ್ ಎಎಫ್) ತನ್ನ ಕ್ಸಿಯಾನ್ ವೈ -20 ಮಿಲಿಟರಿ ಸಾರಿಗೆ ವಿಮಾನವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ ಎಂಬುದನ್ನು ನಿರಾಕರಿಸಿದೆ.

ಪಾಕಿಸ್ತಾನಕ್ಕೆ ಔ-20 ಶಸ್ತ್ರಾಸ್ತ್ರಗಳ ಪೂರೈಕೆ ಕುರಿತು ಅಂತರ್ಜಾಲದಲ್ಲಿ ಸಾಕಷ್ಟು ಮಾಹಿತಿಗಳು ಹರಿದಾಡಿದ ಬೆನ್ನಲ್ಲೇ ಅಂತಹ ವರದಿಗಳು ಸುಳ್ಳು ಎಂದು ವಾಯುಪಡೆ ಹೇಳಿಕೆ ನೀಡಿದೆ ಎಂದು ಚೀನಾದ ರಕ್ಷಣಾ ಸಚಿವಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಸೋಮವಾರ ಪ್ರಕಟವಾದ ವರದಿ ತಿಳಿಸಿದೆ. ತಪ್ಪು ಮಾಹಿತಿಗೆ ಸಂಬಂಧಿಸಿದ ಹಲವಾರು ಫೋಟೋಗಳು ಮತ್ತು ಸ್ಕ್ರೀನ್‌ಶಾಟ್‌ಗಳನ್ನು ಸಹ ಪಿಎಲ್‌ಎಎಫ್ ಪೋಸ್ಟ್ ಮಾಡಿದೆ. ಪ್ರತಿ ಸ್ಕ್ರೀನ್ ಶಾಟ್ ಅನ್ನು ಕೆಂಪು ಬಣ್ಣದಲ್ಲಿ 'ವದಂತಿ' ಎಂದು ಗುರುತಿಸಲಾಗಿದೆ.

ಇಂಟರ್ನೆಟ್ ಕಾನೂನಿಗಿಂತ ಮಿಗಿಲಾದದ್ದಲ್ಲ ಎಂದು ವರದಿ ಹೇಳಿದೆ. ಮಿಲಿಟರಿಗೆ ಸಂಬಂಧಿಸಿದ ವದಂತಿಗಳನ್ನು ಹರಡುವವರನ್ನು ಕಾನೂನುಬದ್ಧವಾಗಿ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಪಿಎಲ್‌ಎ ಪಾಕಿಸ್ತಾನ ಸೇನೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಪಿಎಲ್‌ಎಯ ಈ ನಿರಾಕರಣೆಯನ್ನು ಮುಖ್ಯವೆಂದು ಪರಿಗಣಿಸಲಾಗುತ್ತಿದೆ. ಏಕೆಂದರೆ ಕೇವಲ ಎರಡು ದಿನಗಳ ಹಿಂದೆ ಭಾರತ ಮತ್ತು ಪಾಕಿಸ್ತಾನದ ನಡುವೆ ಎಲ್ಲಾ ರೀತಿಯ ಗುಂಡಿನ ದಾಳಿ ಮತ್ತು ಮಿಲಿಟರಿ ಕಾರ್ಯಾಚರಣೆಗಳನ್ನು ನಿಲ್ಲಿಸಲು ಒಪ್ಪಂದ ಮಾಡಿಕೊಂಡಿವೆ.

ಸ್ಟಾಕ್‌ಹೋಮ್ ಅಂತರರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ (ಖುಕಖು) ಇತ್ತೀಚಿನ ವರದಿಯ ಪ್ರಕಾರ, ಚೀನಾ ಪಾಕಿಸ್ತಾನಕ್ಕೆ ಅತಿದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. ವರದಿಯ ಪ್ರಕಾರ, 2020 ರಿಂದ 2024 ರವರೆಗಿನ ಪಾಕಿಸ್ತಾನದ ಶಸ್ತ್ರಾಸ್ತ್ರ ಖರೀದಿಯಲ್ಲಿ ಶೇ 81 ರಷ್ಟು ಚೀನಾದಿಂದ ಖರೀದಿಸಲಾಗಿದೆ. ಖರೀದಿಗಳಲ್ಲಿ ಇತ್ತೀಚಿನ ಯುದ್ಧ ವಿಮಾನಗಳು, ರಾಡಾರ್‌ಗಳು, ನೌಕಾ ಹಡಗುಗಳು, ಜಲಾಂತರ್ಗಾಮಿ ನೌಕೆಗಳು ಮತ್ತು ಕ್ಷಿಪಣಿಗಳು ಸೇರಿವೆ. ಪಾಕಿಸ್ತಾನ ವಾಯುಪಡೆಯ (ಪಿಎಫ್) ಪ್ರಮುಖ ಅಂಶವಾಗಿರುವ ಜೆ -17 ವಿಮಾನವನ್ನು ಎರಡೂ ದೇಶಗಳು ಜಂಟಿಯಾಗಿ ತಯಾರಿಸುತ್ತವೆ.

# ಆಪರೇಷನ್ ಸಿಂಧೂರ್ 3.0 ಸೂಚನೆ ನೀಡಿದ ಪ್ರಧಾನಿ ನರೇಂದ್ರ ಮೋದಿ..!



**ದೆಹಲಿ:** ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಭಾರತವು ಆಪರೇಷನ್ ಸಿಂಧೂರ್ ಮೂಲಕ ಸೂಕ್ತ ಪ್ರತ್ಯುತ್ತರ ನೀಡಿತು. ಆಪರೇಷನ್ ಸಿಂಧೂರ ಅಡಿಯಲ್ಲಿ ಪಾಕ್ ಮತ್ತು ಪಾಕ್ ಆಕ್ರಮೀತ ಪ್ರದೇಶದಲ್ಲಿದ್ದ 9 ಭಯೋತ್ಪಾದಕ ಶಿಬಿರಗಳು, ಅಡಗುತಾಣಗಳನ್ನು ನಾಶಪಡಿಸಲಾಯಿತು. ಈ ದಾಳಿಯಲ್ಲಿ 100 ಕ್ಕೂ ಹೆಚ್ಚು ಭಯೋತ್ಪಾದಕರು ಸಾವನ್ನಪ್ಪಿದರು.

ಈ ದಾಳಿಯ ನಂತರ, ಪಾಕಿಸ್ತಾನ ನಿರಂತರವಾಗಿ ಭಾರತದ ಮೇಲೆ ಡ್ರೋನ್, ಶೇಲ್ ದಾಳಿ ನಡೆಸಲು ಪ್ರಯತ್ನಿಸಿತು. ಇದಕ್ಕೆ ಭಾರತ ಸೂಕ್ತವಾಗಿ ಪ್ರತಿಕ್ರಿಯಿಸಿತು, ಹಲವಾರು ಪಾಕಿಸ್ತಾನಿ ವಾಯುನೆಲೆಗಳು ಮತ್ತು ರಾಡಾರ್ ವ್ಯವಸ್ಥೆಗಳನ್ನು ನಾಶಪಡಿಸಿತು. ಈಗ ಎರಡೂ ದೇಶಗಳು ಕದನ ವಿರಾಮ ಘೋಷಿಸಿದ ನಂತರ, ಪ್ರಧಾನಿ ನರೇಂದ್ರ ಮೋದಿ ಆಪರೇಷನ್ ಸಿಂಧೂರ್ ಬಗ್ಗೆ ದೊಡ್ಡ ಹೇಳಿಕೆ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ




ಅವರು, ಆಪರೇಷನ್ ಸಿಂಧೂರ್‌ಗೆ ವಿರಾಮ ನೀಡಲಾಗಿದೆ, ಆದ್ರೆ ಮುಕ್ತಾಯಗೊಳಿಸಿಲ್ಲ ಎಂದು ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಪಾಕಿಸ್ತಾನ ಯಾವ ರೀತಿ ವರ್ತನೆ ತೋರುತ್ತದೆ ಅದಕ್ಕೆ ತಕ್ಕ ಪ್ರತಿಕ್ರಿಯೆ ನಮ್ಮಿಂದ ಪಡೆಯುತ್ತದೆ ಎನ್ನುವ ಮೂಲಕ ಪ್ರಧಾನಿ, ಆಪರೇಷನ್ ಸಿಂಧೂರ 3.0 ಎಚ್ಚರಿಕೆ ನೀಡಿದರು.ಆಪರೇಷನ್ ಸಿಂಧೂರ್ ಕೇವಲ ಹೆಸರಲ್ಲ. ಇದು ದೇಶದ ಲಕ್ಷಾಂತರ ಜನರ ಭಾವನೆಗಳ ಪ್ರತಿಬಿಂಬ. ಮೇ 6ರ ತಡರಾತ್ರಿ ಮತ್ತು ಮೇ 7ರ ಬೆಳಗಿನ ಜಾವದವರೆಗೆ, ಭಾರತೀಯ ಸೇನೆ ನಡೆಸಿದ ದಾಳಿಯ ಪರಿಣಾಮವನ್ನು ಇಡೀ ಜಗತ್ತು ನೋಡಿತು. ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆ ಮತ್ತು ತರಬೇತಿ ಕೇಂದ್ರದ ಮೇಲೆ ಭಾರತೀಯ ಸೇನೆ ನಿಖರವಾದ ದಾಳಿ ನಡೆಸಿತು. ಭಾರತ ಇಷ್ಟೊಂದು ದೊಡ್ಡ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಭಯೋತ್ಪಾದಕರು ಕನಸು ಮನಸಿನಲ್ಲೂ ಊಹಿಸಿರಲಿಲ್ಲ.

## ಮೋದಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಕೆಲವೇ ಕ್ಷಣಗಳಲ್ಲಿ ಕಾಣಿಸಿಕೊಂಡ ಶಂಕಿತ ಡ್ರೋನ್!

**ಜಮ್ಮು:** ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಂಜೆ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಸ್ವಲ್ಪ ಸಮಯದ ನಂತರ, ಜಮ್ಮುವಿನ ಸಾಂಬಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿಯಲ್ಲಿ ಶಂಕಿತ ಪಾಕಿಸ್ತಾನಿ ಡ್ರೋನ್‌ಗಳು ಕಾಣಿಸಿಕೊಂಡಿವೆ ಎಂದು ವರದಿಯಾಗಿದೆ. ಯಾವುದೇ ಪರಿಸ್ಥಿತಿಯನ್ನು ಎದುರಿಲು ಸನ್ನದ್ಧವಾಗಿರುವ ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಡ್ರೋನ್‌ಗಳನ್ನು ಯಶಸ್ವಿಯಾಗಿ ತಡೆಹಿಡಿದಿದೆ ಎಂದು ಮೂಲಗಳು ತಿಳಿಸಿವೆ. ಹಾಗೆ ಹೇಳಬೇಕು ಎಂದರೆ ಸಾಂಬಾ ವಲಯದಲ್ಲಿ ಕಡಿಮೆ ಸಂಖ್ಯೆಯ ಡ್ರೋನ್‌ಗಳು ಬಂದಿವೆ. ಗಾಬರಿಪಡುವ ಅವಶಯಕತೆಗಳೇನೂ ಇಲ್ಲ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ. ಈ ನಡುವೆ ಪಂಜಾಬ್ ನ ಹೊಸಿಯಾರಪುರದಲ್ಲಿ ಮುಂಜಾಗ್ರತವಾಗಿ ಸ್ವಯಂ ಆಗಿ ಬ್ಲಾಕ್ ಔಟ್ ಮಾಡಲಾಗಿದೆ. ಯಾವುದೇ ಮುಂಬರುವ ಅಪಾಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಲ್ಲಿನ ಡಿಸಿ ಆಶಿಕಾ ಜೈನ್ ತಿಳಿಸಿದ್ದಾರೆ.



# ನೆರೆಯ ದ್ವೀಪರಾಷ್ಟ್ರ ಮಾಲ್ಡೀವ್ಸ್‌ಗೆ 50 ಮಿಲಿಯನ್ ಡಾಲರ್ ಆರ್ಥಿಕ ನೆರವು ನೀಡಿದ ಭಾರತ

**ಮಾಲೆ:**ಅಧ್ಯಕ್ಷ ಮೊಹಮದ್ ಮುಯಿಜು ಅಸಹಕಾರ ನೀತಿ ಅನುಸರಿಸುತ್ತಿದ್ದರೂ, ನೆರೆಯ ದ್ವೀಪರಾಷ್ಟ್ರ ಮಾಲ್ಡೀವ್ಸ್‌ಗೆ ಭಾರತ ಆರ್ಥಿಕ ಬೆಂಬಲ ಘೋಷಿಸಿದೆ. ಕಳೆದ ವರ್ಷದಂತೆ ಈ ಬಾರಿಯೂ 50 ಮಿಲಿಯನ್ ಡಾಲರ್ ಬಡ್ಡಿರಹಿತ ಅನುದಾನ ಬಿಡುಗಡೆ ಮಾಡಿದೆ. ಮಾಲ್ಡೀವ್ಸ್ ಸರ್ಕಾರದ ಕೋರಿಕೆಯ ಮೇರೆಗೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ (ಎಸ್‌ಬಿಐ) ಮಾಲ್ಡೀವ್ಸ್‌ನ ಹಣಕಾಸು ಸಚಿವಾಲಯಕ್ಕೆ 50 ಮಿಲಿಯನ್ ಡಾಲರ್ ಅನುದಾನವನ್ನು ಒಂದು ವರ್ಷದ ಅವಧಿಗೆ ನೀಡಲಾಗಿದೆ ಎಂದು ಅಲ್ಲಿನ ಭಾರತೀಯ ಹೈಕಮಿಷನ್ ಸೋಮವಾರ ಹೇಳಿಕೆಯಲ್ಲಿ ತಿಳಿಸಿದೆ. ಮಾರ್ಚ್ 2019ರಿಂದ ಭಾರತ ಸರ್ಕಾರವು ಎಸ್‌ಬಿಐನಿಂದ ಇಂತಹ ಆರ್ಥಿಕ ನೆರವು ನೀಡುತ್ತಿದೆ. ಮಾಲ್ಡೀವ್ಸ್ ಸರ್ಕಾರಕ್ಕೆ ನೀಡಲಾಗುವ




ವಾರ್ಷಿಕ ಅನುದಾನವು ಬಡ್ಡಿರಹಿತವಾಗಿರುತ್ತದೆ. ದ್ವೀಪರಾಷ್ಟ್ರದ ಅಭಿವೃದ್ಧಿಗಾಗಿ ನೀಡುವ ತುರ್ತು ಹಣಕಾಸು ಸಹಾಯ ಇದಾಗಿದೆ. ಸರ್ಕಾರಗಳ ನಡುವಿನ ವಿಶಿಷ್ಟ ವ್ಯವಸ್ಥೆಯಡಿ ಈ ಸಾಲ ಮಂಜೂರು ಮಾಡಲಾಗುತ್ತದೆ ಎಂದು ಭಾರತೀಯ ಹೈಕಮಿಷನ್ ಮಾಹಿತಿ ನೀಡಿದೆ. ಮಾಲ್ಡೀವ್ಸ್ ಭಾರತದ ಪ್ರಮುಖ ಕಡಲ ನೆರೆಯ ರಾಷ್ಟ್ರ. ದೇಶ ಅನುಸರಿಸುವ 'ನೆರೆಹೊರೆ ಮೊದಲು' ಎಂಬ ನೀತಿಯಡಿ ಆರ್ಥಿಕ ನೆರವು ನೀಡಲಾಗುತ್ತದೆ. ಅದರ ಅಗತ್ಯದ ಸಮಯದಲ್ಲಿ ಭಾರತವು ಸಹಾಯ ಮಾಡಿದೆ. ಇದರ ಜೊತೆಗೆ, ಈ ವರ್ಷದ ಆರಂಭದಲ್ಲಿ ಅಗತ್ಯ ವಸ್ತುಗಳ ರಫ್ತಿಗೆ ವಿಶೇಷ ಮೀಸಲಾತಿ ವಿಸ್ತರಿಸಲಾಗಿದೆ. ಮಾಲ್ಡೀವ್ಸ್ ಸರ್ಕಾರ ಮತ್ತು ಜನರಿಗೆ ಭಾರತದ ನಿರಂತರ ಬೆಂಬಲವನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಪಾಕಿಸ್ತಾನದಲ್ಲಿ ಪದೇ ಪದೇ ಭೂಕಂಪ

**ಪಾಕಿಸ್ತಾನ:** ಭಾರತೀಯ ಸೇನೆಯ ಆಪರೇಷನ್ ಸಿಂದೂರ್ ನಿಂದ ತತ್ತರಿಸಿ ಹೋಗಿರುವ ಪಾಕಿಸ್ತಾನಕ್ಕೆ ಇದೀಗ ಭೂಕಂಪದ ದೊಡ್ಡ ಟೆನ್ಶನ್ ಶುರುವಾಗಿದೆ. ಶನಿವಾರವಷ್ಟೇ ಪಾಕಿಸ್ತಾನದಲ್ಲಿ ಭೂಕಂಪ ಸಂಭವಿಸಿತ್ತು. ಆದರೆ ಇದೀಗ ಮತ್ತೊಮ್ಮೆ ಸೋಮವಾರ ಭೂಕಂಪಿಸಿದೆ. ಹೌದು, ಆಪರೇಷನ್ ಸಿಂದೂರ್ ಮೂಲಕ ಭಾರತೀಯ ಸೇನಾಪಡೆಗಳು ಪಾಕಿಸ್ತಾನಕ್ಕೆ ತಕ್ಕಶಾಸ್ತಿ ಮಾಡಿವೆ. ಇದರ ಬೆನ್ನಲ್ಲೇ ಪಾಕಿಸ್ತಾನದ ಕೆಲವು ಪ್ರದೇಶಗಳಲ್ಲಿ ಇಂದು ಮಧ್ಯಾಹ್ನ 1.26ಕ್ಕೆ ಮತ್ತೆ ಭೂಕಂಪನದ ಅನುಭವವಾಗಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ (NCS) ಪ್ರಕಾರ, ಈ ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 4.6ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಪಾಕಿಸ್ತಾನದಲ್ಲಿ 29.12 ಡಿಗ್ರಿ ಉತ್ತರದಲ್ಲಿ ಮತ್ತು 67.26 ಡಿಗ್ರಿ ಪೂರ್ವ ರೇಖಾಂಶದಲ್ಲಿದ್ದು, 10 ಕಿಲೋಮೀಟರ್ ಆಳದಲ್ಲಿ ಕಂಪನ ಸಂಭವಿಸಿದೆ ಎಂದು ತಿಳಿದುಬಂದಿದೆ. NCS ಹಂಚಿಕೊಂಡಿರುವ ನಕ್ಷೆಯ ಮಾಹಿತಿ ಪ್ರಕಾರ, ಭೂಕಂಪದ ಕೇಂದ್ರಬಿಂದು ಪಾಕಿಸ್ತಾನದ ಬಲೂಚಿಸ್ತಾನ್ ಪ್ರದೇಶದಲ್ಲಿದೆ. ಇದು ಅಫ್ಘಾನಿಸ್ತಾನದ ಗಡಿ ಸಮೀಪದಲ್ಲಿದೆ. ನಕ್ಷೆಯಲ್ಲಿ ತೋರಿಸಿರುವ ಪ್ರಭಾವದ ಪ್ರದೇಶವು ಕ್ವೆಟ್ಟಾ ಮತ್ತು ಸುತ್ತಮುತ್ತಲಿನ ಪಟ್ಟಣಗಳಾದ ಚಮನ್ ಮತ್ತು ಸಿಬಿಯನ್ನು ಒಳಗೊಂಡಿವೆ. ಈ ಭೂಕಂಪನದಲ್ಲಿ ಯಾವುದೇ ರೀತಿಯ ಹಾನಿ ಅಥವಾ ಸಾವುನೋವುಗಳ ಬಗ್ಗೆ ವರದಿಯಾಗಿಲ್ಲ.ಪಾಕಿಸ್ತಾನದಲ್ಲಿ ಕೇವಲ ಮೂರೇ ದಿನಗಳ ಅಂತರದಲ್ಲಿ ಸಂಭವಿಸಿದ ಎರಡನೇ ಭೂಕಂಪ ಇದಾಗಿದೆ. ಇದಕ್ಕೂ ಮೊದಲು ಮೇ 9ರಂದು 4.0 ತೀವ್ರತೆಯ ಭೂಕಂಪ ದಾಖಲಾಗಿತ್ತು. ಇದರ ಕೇಂದ್ರಬಿಂದು ಸಹ ಬಲೂಚಿಸ್ತಾನದಲ್ಲಿ ಇತ್ತು.

# ಭಾರತ, ಪಾಕ್ ಮಧ್ಯೆ ನಡೆಯಬಹುದಾಗಿದ್ದ ಪರಮಾಣು ಯುದ್ಧ ನಿಲ್ಲಿಸಿದ್ದೇವೆ: ಟ್ರಂಪ್

**ವಾಷಿಂಗ್ಟನ್:** ನಾವು ಭಾರತ ಮತ್ತು ಪಾಕಿಸ್ತಾನದ ನಡುವಿನ ಪರಮಾಣು ಸಂಘರ್ಷವನ್ನು ನಿಲ್ಲಿಸಿದ್ದೇವೆ. ಅದು ಕೆಟ್ಟ ಪರಮಾಣು ಯುದ್ಧವಾಗಿರುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಪರಮಾಣು ಯುದ್ಧ ನಡೆದರೆ ಲಕ್ಷಾಂತರ ಜನರು ಕೊಲ್ಲಲ್ಪಡುತ್ತಿದ್ದರು. ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟು ಶಮನ ಮಾಡುವಲ್ಲಿ ಯಶಸ್ವಿಯಾದ ಉಪರಾಷ್ಟ್ರಪತಿ ಜೆಡಿ ವ್ಯಾನ್ಸ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರಿಗೆ ನಾನು ಧನ್ಯವಾದ ಹೇಳುತ್ತೇನೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ಶಮನಕ್ಕೆ ನಾವು ಬಹಳಷ್ಟು ಸಹಾಯ ಮಾಡಿದ್ದೇವೆ. ನಾವು ಎರಡೂ ದೇಶಗಳ ವ್ಯಾಪಾರಕ್ಕೂ



ಸಹಾಯ ಮಾಡಿದ್ದೇವೆ. ಬನ್ನಿ, ನಾವು ನಿಮ್ಮೊಂದಿಗೆ ಬಹಳಷ್ಟು ವ್ಯಾಪಾರ - ವಾಹಿವಾಟು ಮಾಡುತ್ತೇವೆ. ಸಂಘರ್ಷವನ್ನು ನಿಲ್ಲಿಸೋಣ. ನೀವು ಸಂಘರ್ಷ ನಿಲ್ಲಿಸಿದರೆ, ನಾವು ನಿಮ್ಮೊಂದಿಗೆ ವ್ಯಾಪಾರ ಮಾಡುತ್ತೇವೆ. ನೀವು ಸಂಘರ್ಷ ನಿಲ್ಲಿಸದಿದ್ದರೆ, ನಾವು ನಿಮ್ಮೊಂದಿಗೆ ಯಾವುದೇ ವ್ಯಾಪಾರ ಮಾಡುವುದಿಲ್ಲ ಎಂದು ನಾನು ಹೇಳಿದ್ದೆ ಎಂದರು. ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮಕ್ಕೆ ನನ್ನ ಆಡಳಿತದ ಮಧ್ಯಸ್ಥಿಕೆ ಸಹಾಯ ಮಾಡಿದೆ. ಇದರಿಂದ ಬಹಳಷ್ಟು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಎರಡು ರಾಷ್ಟ್ರಗಳ ಸಂಘರ್ಷ ಕೊನೆಗೊಂಡಿತು. ನಾವು ಪಾಕಿಸ್ತಾನದೊಂದಿಗೆ ಬಹಳಷ್ಟು ವ್ಯಾಪಾರ ಮಾಡಲಿದ್ದೇವೆ. ನಾವು ಭಾರತದೊಂದಿಗೆ ಬಹಳಷ್ಟು ವ್ಯಾಪಾರ ಮಾಡಲಿದ್ದೇವೆ. ನಾವು ಇದೀಗ ಭಾರತದೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ಶೀಘ್ರದಲ್ಲೇ ಪಾಕಿಸ್ತಾನದೊಂದಿಗೂ ಸಮಾಲೋಚನೆ ನಡೆಸುತ್ತೇವೆ ಎಂದು ಅವರು ಹೇಳಿದರು.

## ಕಳ್ಳಭಟ್ಟಿ ಸೇವಿಸಿ ಕನಿಷ್ಠ 14 ಜನರು ಸಾವು; ಹಲವರು ಅಸ್ವಸ್ಥ, ಆಸ್ಪತ್ರೆಗೆ ದಾಖಲು

**ಅಮೃತ ಸರ:** ಪಂಜಾಬ್‌ನ ಅಮೃತಸರದ ಐದು ಗ್ರಾಮಗಳಲ್ಲಿ ನಕಲಿ ಮದ್ಯ ಸೇವಿಸಿ ಕನಿಷ್ಠ 14 ಜನರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಜನರನ್ನು ಬಂಧಿಸಲಾಗಿದೆ.

ಕಳ್ಳಭಟ್ಟಿ ಸೇವನೆಯಿಂದ ಅಸ್ವಸ್ಥಗೊಂಡ ಆರು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಭಂಗಲಿ, ಪಾತಾಳಪುರಿ, ಮರಾರಿ ಕಲಾನ್, ಥೆರೆವಾಲ್ ಮತ್ತು ತಲ್ವಾಂಡಿ ಘುಮಾನ್ ಎಂಬ ಐದು ಗ್ರಾಮಗಳಲ್ಲಿ ಸಾವುಗಳು ಸಂಭವಿಸಿವೆ. ಅಮೃತಸರ ಉಪ ಆಯುಕ್ತೆ ಸಾಕ್ಷಿ ಸಾಹ್ನಿ ಮಾತನಾಡಿ 14 ಮಂದಿ ಸಾವನ್ನು ದೃಢಪಡಿಸಿದ್ದಾರೆ.



ಭಾರತೀಯ ನ್ಯಾಯ ಸಂಹಿತೆ ಮತ್ತು ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಬಗ್ಗೆ ತಿಳಿದುಬಂದ ಕೂಡಲೇ ಮದ್ಯ ಸೇವಿಸಿದ ಮತ್ತು ಅನಾರೋಗ್ಯದಿಂದ ಬಳಲುತ್ತಿರುವವರನ್ನು ಚಿಕಿತ್ಸೆಗೆ ಕಳುಹಿಸಬೇಕು ಎಂದು ಗುರುದ್ವಾರಗಳಲ್ಲಿ ಘೋಷಣೆಗಳನ್ನು ಮಾಡಲಾಯಿತು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

# ಅಫ್ಘಾನಿಸ್ತಾನದಲ್ಲಿ 'ಚೆಸ್' ನಿಷೇಧಿಸಿದ ತಾಲಿಬಾನ್

ಕಾಬೂಲ್ : ಧಾರ್ಮಿಕ ಕಾಳಜಿಯಿಂದಾಗಿ ತಾಲಿಬಾನ್ ಅಫ್ಘಾನಿಸ್ತಾನದಲ್ಲಿ ಚೆಸ್ ಅನ್ನು ನಿಷೇಧಿಸಿದೆ, ವಿವಿಧ ರೀತಿಯ ಮನರಂಜನೆ ಮತ್ತು ಕ್ರೀಡೆಗಳಿಗೆ ತನ್ನ ವಿರೋಧವನ್ನು ಮುಂದುವರೆಸಿದೆ ಎಂದು ಖಾಮಾ ಪ್ರೆಸ್ ವರದಿ ಮಾಡಿದೆ.

ವರದಿಗಳ ಪ್ರಕಾರ, ''ಧಾರ್ಮಿಕ ಪರಿಗಣನೆಗಳು'' ಮತ್ತು ತಾಲಿಬಾನ್‌ನ ಸದ್ಗುಣ ಪ್ರಚಾರ ಮತ್ತು ದುರ್ಗುಣ ತಡೆಗಟ್ಟುವಿಕೆ ಸಚಿವಾಲಯ ಘೋಷಿಸಿದ ನಿರ್ಬಂಧಗಳಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ನಿರ್ಧಾರವು ಅಫ್ಘಾನಿಸ್ತಾನದಲ್ಲಿ ಚೆಸ್ ಸಂಬಂಧಿತ ಚಟುವಟಿಕೆಗಳನ್ನು ಅನಿರ್ದಿಷ್ಟವಾಗಿ ಸ್ಥಗಿತಗೊಳಿಸುತ್ತದೆ. ತಾಲಿಬಾನ್ ನೇತೃತ್ವದ ಕ್ರೀಡಾ ಸಚಿವಾಲಯದ ಅಧಿಕಾರಿಗಳು ಮೇ 11 ರಂದು ಚೆಸ್ ಚಟುವಟಿಕೆಗಳ ಅಮಾನತುಗೊಳಿಸುವಿಕೆಯನ್ನು ದೃಢಪಡಿಸಿದರು, ಧಾರ್ಮಿಕ ಕಾಳಜಿಗಳಿಗೆ ಸಂಬಂಧಿಸಿದಂತೆ ಸೂಕ್ತ ಪ್ರತಿಕ್ರಿಯೆಗಳು ಕಂಡುಬರುವವರೆಗೆ ದೇಶದಲ್ಲಿ ಕ್ರೀಡೆಯನ್ನು ನಿಷೇಧಿಸಲಾಗುವುದು ಎಂದು ಹೇಳಿದರು.

ವರದಿಗಳ ಪ್ರಕಾರ, ಈ ಸಮಸ್ಯೆಗಳನ್ನು ಪರಿಹರಿಸದೆ ಚೆಸ್‌ಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳನ್ನು ಪುನರಾರಂಭಿಸಲು ಅನುಮತಿಸಲಾಗುವುದಿಲ್ಲ. ತಾಲಿಬಾನ್‌ನ ಸದ್ಗುಣ ಪ್ರಚಾರ ಮತ್ತು ದುರ್ಗುಣ ತಡೆಗಟ್ಟುವಿಕೆ ಸಚಿವಾಲಯವು ಅಫ್ಘಾನಿಸ್ತಾನ ಚೆಸ್ ಒಕ್ಕೂಟವನ್ನು ಸಹ ವಿಸರ್ಜಿಸಿದೆ, ಇಸ್ಲಾಮಿಕ್ ಕಾನೂನಿನ ವ್ಯಾಖ್ಯಾನದ ಪ್ರಕಾರ ಆಟವನ್ನು ''ಹರಾಮ್'' (ನಿಷೇಧಿಸಲಾಗಿದೆ) ಎಂದು ಕರೆದಿದೆ ಎಂದು ಖಾಮಾ ಪ್ರೆಸ್ ವರದಿ ಮಾಡಿದೆ.

ತಾಲಿಬಾನ್ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಅಫ್ಘಾನಿಸ್ತಾನದಲ್ಲಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ಕ್ರೀಡಾಕೂಟಗಳ ಮೇಲೆ ವಿಧಿಸಿರುವ ನಿರ್ಬಂಧಗಳ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಅನುಸರಿಸುವ ಮೂಲಕ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ತಾಲಿಬಾನ್ ನಿಷೇಧದ ಬಗ್ಗೆ ಘೋಷಣೆ ಮಾಡುವ ಮೊದಲು, ಹಲವಾರು ಚೆಸ್ ಆಟಗಾರರು ಮತ್ತು ಉತ್ಸಾಹಿಗಳು ತಮ್ಮ ಚಟುವಟಿಕೆಗಳನ್ನು ಮುಂದುವರಿಸಲು ತಾಲಿಬಾನ್ ನೇತೃತ್ವದ ಕ್ರೀಡಾ ಸಚಿವಾಲಯದಿಂದ ಅನುಮತಿ ಮತ್ತು ಆರ್ಥಿಕ ಬೆಂಬಲವನ್ನು ಕೋರಿದ್ದರು ಎಂದು ವರದಿಯಾಗಿದೆ. ಆದಾಗ್ಯೂ, ತಾಲಿಬಾನ್ ನಿಷೇಧವನ್ನು ಘೋಷಿಸಿತು, ಇದು ಆಟವನ್ನು ಆಡಲು ಅವರ ಪ್ರಯತ್ನಗಳನ್ನು ಮತ್ತಷ್ಟು ಸಂಕೀರ್ಣಗೊಳಿಸಿತು.



# 7 ನಗರಗಳಿಗೆ ವಿಮಾನ ಸಂಚಾರ ರದ್ದುಪಡಿಸಿದ ಏರ್‌ಇಂಡಿಯಾ, ಇಂಡಿಗೊ

**ಹೊಸದಿಲ್ಲಿ :** ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಒಪ್ಪಂದ ಏರ್ಪಟ್ಟಿದ್ದರೂ, ಗಡಿಭಾಗದ ಹಲವು ನಗರಗಳಿಗೆ ವಿಮಾನ ಸಂಚಾರವನ್ನು ಪ್ರಮುಖ ವಿಮಾನಯಾನ ಕಂಪನಿಗಳಾದ ಇಂಡಿಗೊ ಮತ್ತು ಏರ್‌ಇಂಡಿಯಾ ರದ್ದುಗೊಳಿಸಿವೆ. ಶ್ರೀನಗರ, ಜಮ್ಮು, ಅಮೃತಸರ, ಚಂಡೀಗಢ ಮತ್ತು ಇತರ ಮೂರು ಗಡಿಪ್ರದೇಶಗಳಿಗೆ ಹಾರಾಟ ರದ್ದುಪಡಿಸಲಾಗಿದೆ.



ಜಮ್ಮು, ಲೆಹ್, ಜೋಧಪುರ, ಅಮೃತಸರ, ಭುಜ್, ಜಾಮನಗರ, ಚಂಡೀಗಢ ಮತ್ತು ರಾಜ್‌ಕೋಟ್ ಗೆ ತೆರಳುವ ಮತ್ತು ಅಲ್ಲಿಂದ ಹೊರಡುವ ವಿಮಾನಗಳ ಸಂಚಾರ ರದ್ದುಪಡಿಸಲಾಗಿದೆ ಎಂದು ಏರ್ ಇಂಡಿಯಾ ಹೇಳಿದೆ. ಜಮ್ಮು, ಅಮೃತಸರ, ಚಂಡೀಗಢ, ಲೆಹ್ ಮತ್ತು ರಾಜ್‌ಕೋಟ್ ವಿಮಾನಗಳ ಸಂಚಾರವನ್ನು ಇಂಡಿಗೊ ರದ್ದುಪಡಿಸಿದೆ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮತ್ತು ನಿಮ್ಮ ಸುರಕ್ಷೆಯನ್ನು ಗಮನದಲ್ಲಿಟ್ಟುಕೊಂಡು, ಮಂಗಳವಾರ ಅಂದರೆ ಮೇ 13ರಂದು ಈ ನಗರಗಳಿಗೆ ವಿಮಾನ ಸಂಚಾರ ರದ್ದುಪಡಿಸಲಾಗುತ್ತಿದೆ. ನಾವು ಪರಿಸ್ಥಿತಿಯ ಮೇಲೆ ನಿಗಾ ಇಟ್ಟಿದ್ದು, ಮುಂದಿನ ಮಾಹಿತಿ ನೀಡಲಾಗುತ್ತಿದೆ ಎಂದು ಎಕ್ಸ್ ಪೋಸ್ಟ್ ನಲ್ಲಿ ಏರ್ ಇಂಡಿಯಾ ವಿವರಿಸಿದೆ.

ಇದು ನಿಮ್ಮ ಪ್ರವಾಸದ ಯೋಜನೆಯನ್ನು ವ್ಯತ್ಯಯಗೊಳಿಸಬಹುದು. ಅನಾನುಕೂಲಕ್ಕೆ ಕ್ಷಮೆ ಯಾಚಿಸುತ್ತೇವೆ. ನಮ್ಮ ತಂಡ ಪರಿಸ್ಥಿತಿಯ ಮೇಲೆ ತೀವ್ರ ನಿಗಾ ವಹಿಸಿದ್ದು, ಮುಂದಿನ ಮಾಹಿತಿಗಳನ್ನು ಹಂಚಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದೆ.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಚಂದನವನ ಫಿಲ್ಮ್ ಕ್ರಿಟಿಕ್ಸ್ ಅವಾರ್ಡ್ ಪ್ರದಾನ



ಕನ್ನಡದ ಸೂಪರ್‌ಸ್ಟಾರ್ ಶಿವರಾಜ್‌ಕುಮಾರ್‌ಗೆ ಬೆಂಗಳೂರಿನಲ್ಲಿ ನಡೆದ ಅದ್ದೂರಿ ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ 2025ರಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಅವರಿಗೆ ಟ್ರೋಫಿ, ಹಂಸಲೇಖ ಅವರ ಐದನಿ ಸಂಸ್ಥೆಯಿಂದ ಚಿನ್ನದ ಪದಕ ಮತ್ತು ಸನ್ಮಾನ ಪತ್ರವನ್ನು ನೀಡಲಾಯಿತು. ಪ್ರಶಸ್ತಿಗಳ ಆರನೇ ಆವೃತ್ತಿಯಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ಮೊದಲ ಬಾರಿಗೆ ಕೊಡಲಾಗಿದೆ.

2024 ರಲ್ಲಿ ಬಿಡುಗಡೆಯಾದ ಕನ್ನಡ ಚಲನಚಿತ್ರಗಳ ಇತರ ಪ್ರಮುಖ ವಿಜೇತರಲ್ಲಿ ಆಕ್ಷನ್ ಸ್ಟಾರ್ 'ದುನಿಯಾ' ವಿಜಯ್ ಅವರು ತಮ್ಮ 'ಭೀಮ' ಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದಿದ್ದಾರೆ. 'ಗೋಲ್ಡನ್ ಸ್ಟಾರ್' ಗಣೇಶ್ ಅವರು 'ಕೃಷ್ಣಂ ಪ್ರಣಯ ಸಖಿ' ಚಿತ್ರದಲ್ಲಿನ ತಮ್ಮ ಅಭಿನಯಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡರು. 'ಮರ್ಫಿ' ಚಿತ್ರಕ್ಕಾಗಿ ರೋಶನಿ ಪ್ರಕಾಶ್ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಪೃಥ್ವಿ ಕೋಣನೂರು ನಿರ್ದೇಶನದ 'ಹದಿನೇಳೆಂಟು' ಚಿತ್ರವನ್ನು ವಿಮರ್ಶಕರು 2024ರ ಅತ್ಯುತ್ತಮ ಚಿತ್ರವೆಂದು ನಿರ್ಣಯಿಸಿದ್ದಾರೆ.

ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಯನ್ನು ಇಬ್ಬರು ನಟಿಯರು ಹಂಚಿಕೊಂಡಿದ್ದಾರೆ; 'ಭೈರಾದೇವಿ' ಚಿತ್ರಕ್ಕಾಗಿ ಅನು ಪ್ರಭಾಕರ್ ಮತ್ತು 'ಹದಿನೆಂಟೆಂದು' ಚಿತ್ರಕ್ಕಾಗಿ ರೇಖಾ ಕೂಡ್ಲಗಿ. ಸಂಗೀತ ವಿಭಾಗದಲ್ಲಿ, ಚರಣ್ ರಾಜ್ 'ಭೀಮ' ಚಿತ್ರಕ್ಕಾಗಿ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿಯನ್ನು ಪಡೆದರೆ, ರವಿ ಬಸ್ರೂರ್ 'ಭೈರತಿ ರಣಗಲ್' ಚಿತ್ರಕ್ಕಾಗಿ ಅತ್ಯುತ್ತಮ ಹಿನ್ನೆಲೆ ಸಂಗೀತ ಪ್ರಶಸ್ತಿಯನ್ನು ಪಡೆದರು.

ಒಟ್ಟು 29 ಪ್ರಶಸ್ತಿಗಳನ್ನು ಐದು ವಿವಿಧ ವಿಭಾಗಗಳಲ್ಲಿ ನೀಡಲಾಯಿತು. ಚೊಚ್ಚಲ ಪ್ರಶಸ್ತಿಗಳು, ತಾಂತ್ರಿಕ ಪ್ರಶಸ್ತಿಗಳು, ಸಂಗೀತ ಪ್ರಶಸ್ತಿಗಳು, ನಟನೆ ಮತ್ತು ನಿರ್ದೇಶನ ಪ್ರಶಸ್ತಿಗಳು ಮತ್ತು ವಿಶೇಷ ತೀರ್ಪುಗಾರರ ಪ್ರಶಸ್ತಿಗಳು. ಹಿರಿಯ ಸಂಗೀತ ಸಂಯೋಜಕ ಹಂಸಲೇಖ, ಹಿರಿಯ ನಿರ್ದೇಶಕರಾದ ನಾಗಾಭರಣ, ನಟಿ ಸುಮನ್ ನಗರ್ಕರ್ ಮತ್ತು ಪದ್ಮಶ್ರೀ ಪುರಸ್ಕೃತ ಡಾ.ಕಾಮಿನಿ ರಾವ್ ಸೇರಿದಂತೆ ಇತರ ಗಣ್ಯರು ಪ್ರಶಸ್ತಿಗಳನ್ನು ವಿತರಿಸಿದರು.

ಚೊಚ್ಚಲ ವಿಭಾಗಗಳಲ್ಲಿ ಗಮನಾರ್ಹ ವಿಜೇತರಲ್ಲಿ ಸಮರ್ಜಿತ್ ಲಂಕೇಶ್ ಅವರು ಅತ್ಯುತ್ತಮ ಚೊಚ್ಚಲ ನಟ ಪ್ರಶಸ್ತಿಯನ್ನು ಪಡೆದರೆ, ಉತ್ಸವ್ ಗೊನ್ವಾರ್ ಅವರು 'ಫೋಟೋ' ಚಿತ್ರಕ್ಕಾಗಿ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಯನ್ನು ಗೆದ್ದರು.

# ಬ್ಲಾಕ್ ಸೀರೆಯಲ್ಲಿ ಕಲರ್‌ಫುಲ್ ಆಗಿ ಮಿಂಚಿದ ನಭಾ!



ಸದಾ ಗ್ಲಾಮರ್ ಲುಕ್‌ನಲ್ಲಿ ಕಾಣಿಸಿಕೊಳ್ಳುವ 'ವಜ್ರಕಾಯ' ನಟಿ ನಭಾ ನಟೇಶ್, ಈ ಬಾರಿ ಬ್ಲಾಕ್ ಸೀರೆಯಲ್ಲಿ ಕಲರ್‌ಫುಲ್ ಆಗಿ ಮಿಂಚಿದ್ದಾರೆ. ಸೀರೆಯಲ್ಲಿ ಮೈ ಕೈ ಕಾಣುವ ಹಾಗೆ ಬೆಚ್ಚಗೆ ಪೋಸ್ ಕೊಟ್ಟಿರುವ ನಟಿ, ಟ್ರೆಡಿಷನಲ್ ಆಗಿಯೂ ಕಣ್ಣುಕ್ಕುವಂತೆ ಕಾಣಿಸಿಕೊಂಡಿದ್ದಾರೆ.

ಕ್ಯಾಮೆರಾ ಮುಂದೆ ಬೆಳ್ಳಿಗೆರೆಯಂತಹ ಸೊಂಟವನ್ನು ಪ್ರದರ್ಶಿಸಿರುವ ನಭಾ, ಆ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಸೀರೆಯಲ್ಲೂ ಗ್ಲಾಮರ್ ಆಗಿ ಮಿಂಚುತ್ತಿರುವ ನಟಿಗೆ, ಸಾಕಷ್ಟು ಕಾಮೆಂಟ್‌ಗಳು ಬಹುಮಾನವಾಗಿ ಸಿಕ್ಕಿವೆ.

'ನಾನು ದೋಚುಕುಂಡುವತೆ' ಚಿತ್ರದ ಮೂಲಕ ತೆಲುಗು ಪ್ರೇಕ್ಷಕರಿಗೆ ಪರಿಚಯವಾದ ನಭಾ ನಟೇಶ್, ಯುವ ಪ್ರೇಕ್ಷಕರ ಹೃದಯ ಗೆದ್ದಿದ್ದಾರೆ. ಅದಾದ ನಂತರ, 'ಇಸ್ಮಾರ್ಟ್ ಶಂಕರ್' ಚಿತ್ರದ ಮೂಲಕ ರಾತ್ರೋರಾತ್ರಿ ಕ್ರೇಜ್ ಸೃಷ್ಟಿಸಿದ್ದರು. ಪುರಿ ಜಗನ್ನಾಥ್ ನಿರ್ದೇಶನದ ಈ ಚಿತ್ರದಲ್ಲಿ ನಭಾ ಅವರ ಸೌಂದರ್ಯಕ್ಕೆ ಯುವ ಲೋಕ ಮಾರುಹೋಗಿದೆ.



ತೆಲುಗಿನಲ್ಲಿ ಸದ್ಯಕ್ಕೆ ಅವರಿಗೆ ಅವಕಾಶಗಳು ಕಡಿಮೆಯಾಗುತ್ತಿದ್ದು, ಸೋಷಿಯಲ್ ಮೀಡಿಯಾಗಳಲ್ಲಿ ಸೌಂದರ್ಯ ಲೋಕದ ಸೃಷ್ಟಿಗೆ ಮುಂದಾಗಿದ್ದಾರೆ. ಈ ಮೂಲಕ ನಿರಂತರ ಹಾಟ್ ಲುಕ್‌ನಲ್ಲಿ ಟ್ರೆಂಡಿಂಗ್ ಆಗುತ್ತಿದ್ದಾರೆ.

ಈ ಫೋಟೋಗಳನ್ನು ನೋಡಿದರೆ ನಭಾ ತಮ್ಮ ಸೌಂದರ್ಯದ ಮೇಲೆ ಸಂಪೂರ್ಣವಾಗಿ ಗಮನಹರಿಸಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಯಾಕೆಂದರೆ ಹಿಂದಿನ ಫೋಟೋಗಳಿಗೆ ಹೋಲಿಸಿದರೆ ಈ ಫೋಟೋಗಳು ಹೆಚ್ಚು ಕಣ್ಣು ಕುಕ್ಕುವಂತಿವೆ. ಅಷ್ಟೇ ಅಲ್ಲದೇ, ಈ ಫೋಟೋಗಳಿಗೆ ಹೆಚ್ಚಿನ ಲೈಕ್ಸ್ ಸಹ ಬರುತ್ತಿವೆ. ಆದರೆ ಈ ಫೋಟೋಶೂಟ್‌ಗಳು ಕೇವಲ ಅವಕಾಶಗಳಿಗಾಗಿ ಎಂಬ ಮಾತುಗಳು ಕೇಳಿಬರುತ್ತಿವೆ. ಮತ್ತೆ ಹಳಿಗೆ ಮರಳುವ ಸಲುವಾಗಿ ಅವರು ಈ ಗ್ಲಾಮರ್ ಟ್ರೀಟ್ ನೀಡುತ್ತಿದ್ದಾರೆ. ಈ ಸುಂದರಿ ಐಟಂ ಸಾಂಗ್‌ಗಳಲ್ಲಿ ನಟಿಸಲು ಕೂಡ ಸಿದ್ಧಳಾಗಿದ್ದಾರೆ ಎಂದು ಹೇಳಲಾಗುತ್ತಿದೆ.

# ಲಂಡನ್‌ನಲ್ಲಿ ಸೆಲ್ಫಿಗಾಗಿ ಮುಗಿಬಿದ್ದ ಫ್ಯಾನ್ಸ್



'ಆರ್‌ಆರ್‌ಆರ್' ಚಿತ್ರದ ಲೈವ್ ಕಾನ್ಸರ್ಟ್ ಕಾರ್ಯಕ್ರಮ ಲಂಡನ್‌ನಲ್ಲಿ ಮೇ 11ರಂದು ಅದ್ದೂರಿಯಾಗಿ ಜರುಗಿದ್ದು, ಜ್ಯೂ.ಎನ್‌ಟಿಆರ್ ಕೂಡ ಭಾಗವಹಿಸಿದ್ದರು. ಈ ವೇಳೆ, ನಟನೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಫ್ಯಾನ್ಸ್ ಮುಗಿಬಿದ್ದಿದ್ದಾರೆ. ಅಭಿಮಾನಿಗಳ ಅತೀರೇಕದ ವರ್ತನೆಗೆ ಕಂಡು ನಟ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಲಂಡನ್‌ನ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ 'ಆರ್ ಆರ್‌ಆರ್' ಚಿತ್ರದ ಲೈವ್ ಕಾನ್ಸರ್ಟ್ ನಡೆದಿದೆ. ಜ್ಯೂ.ಎನ್ ಟಿಆರ್ ಕೂಡ ಭಾಗಿಯಾಗಿ ಎಂಜಾಯ್ ಮಾಡಿದ್ದಾರೆ. ಕಾರ್ಯಕ್ರಮದ ಬಳಿಕ ನಟನ ಜೊತೆಗೆ ಸೆಲ್ಫಿಗಾಗಿ ಫ್ಯಾನ್ಸ್ ಮುಗಿಬಿದ್ದಿದ್ದಾರೆ. ನಿಮ್ಮೆಲ್ಲರಿಗೂ ಫೋಟೋ ತೆಗೆದುಕೊಳ್ಳಲು ಅವಕಾಶ ಕೊಡುತ್ತೇನೆ ಆತುರಪಡಬೇಡಿ ಎಂದು ತಾಳ್ಮೆಯಿಂದಲೇ ಹೇಳಿದ್ದಾರೆ. ನಟನ ಮಾತಿಗೆ ಕ್ಯಾರೇ ಎನ್ನದೇ ನಟನತ್ತ ಗುಂಪು ಗುಂಪಾಗಿ ಕೆಲ ಅಭಿಮಾನಿಗಳು ಸೇರಿದ್ದಾರೆ. ಹೀಗಾಗಿ ಜ್ಯೂ. ಎನ್‌ಟಿಆರ್ ಕೋಪದಿಂದಲೇ ರಿಯಾಕ್ಟ್ ಮಾಡಿದ್ದಾರೆ. ಬಳಿಕ ಬಾಡಿಗಾರ್ಡ್ ಸಹಾಯದಿಂದ ಸ್ಥಳದಿಂದ ನಟ ತೆರಳಿದ್ದಾರೆ. ಈ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ.

'ಆರ್‌ಆರ್‌ಆರ್' ಚಿತ್ರ 2022ರಲ್ಲಿ ಸಿನಿಮಾ ರಿಲೀಸ್ ಆಗಿತ್ತು. ರಾಜಮೌಳಿ ನಿರ್ದೇಶನದಲ್ಲಿ ರಾಮ್ ಚರಣ್, ಜ್ಯೂ.ಎನ್‌ಟಿಆರ್, ಆಲಿಯಾ ಭಟ್ ನಟಿಸಿದ್ದರು. ಪ್ರಸ್ತುತ ಪ್ರಶಾಂತ್ ನೀಲ್ ಜೊತೆಗಿನ ಹೊಸ ಸಿನಿಮಾದಲ್ಲಿ ತಾರಕ್ ಬ್ಯುಸಿಯಾಗಿದ್ದಾರೆ. ವಿಭಿನ್ನ ಪಾತ್ರದಲ್ಲಿ ನಟ ಕಾಣಿಸಿಕೊಳ್ಳಿದ್ದಾರೆ.

# ಟೆಸ್ಟ್ ಕ್ರಿಕೆಟ್‌ಗೆ ಕಿಂಗ್ ಕೊಹ್ಲಿ ಗುಡ್‌ಬೈ



**ಮುಂಬೈ:** ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಬಳಿಕ ಕ್ರಿಕೆಟ್ ಲೋಕದ ಕಿಂಗ್ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಕಳೆದ ವರ್ಷ ಚಾಂಪಿಯನ್ ಪಟ್ಟ ಗೆಲ್ಲುತ್ತಿದ್ದಂತೆ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಕಿಂಗ್ ಕೊಹ್ಲಿ, ಇದೀಗ ಟೆಸ್ಟ್ ಕ್ರಿಕೆಟ್‌ಗೂ ವಿದಾಯ ಘೋಷಿಸಿದ್ದಾರೆ. ಎ+ ಶ್ರೇಣಿ ಆಟಗಾರನಾಗಿರುವ ಕೊಹ್ಲಿ ಇನ್ನೂ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಮುಂದುವರಿಯಲಿದ್ದಾರೆ. 2011ರಲ್ಲಿ ಕಿಂಗ್‌ಸ್ಟನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ಗೆ ಕೊಹ್ಲಿ ಪದಾರ್ಪಣೆ ಮಾಡಿದ್ದರು. ಇದುವರೆಗೆ ಟೀಂ ಇಂಡಿಯಾ 123 ಟೆಸ್ಟ್ ಪಂದ್ಯಗಳನ್ನಾಡಿರುವ ವಿರಾಟ್ 46.85 ಸರಾಸರಿಯಲ್ಲಿ 9,230 ರನ್ ಗಳಿಸಿದ್ದಾರೆ. ಇದರಲ್ಲಿ 30 ಶತಕಗಳು, 31 ಅರ್ಧಶತಕಗಳೂ ಸೇರಿವೆ. ಇನ್ನೂ ನಾಯಕನಾಗಿ 68 ಟೆಸ್ಟ್ ಪಂದ್ಯಗಳನ್ನಾಡಿರುವ ವಿರಾಟ್ 40 ಪಂದ್ಯಗಳಲ್ಲಿ ಜಯ ತಂದುಕೊಟ್ಟಿದ್ದಾರೆ. ಕಳೆದ 14 ವರ್ಷಗಳಿಂದ ಟೆಸ್ಟ್ ಕ್ರಿಕೆಟ್‌ನಲ್ಲಿ ದಿಗ್ಗಜರ ದಾಖಲೆಗಳನ್ನ ಮುರಿದು ಮೆರೆದಾಡಿದ ಕೊಹ್ಲಿ ಈಗ ನಿವೃತ್ತಿ ಹೇಳಿದ್ದಾರೆ.

ಈ ಕುರಿತು ತಮ್ಮ ಇನ್‌ಸ್ಟಾ ಖಾತೆಯಲ್ಲಿ ಭಾವುಕ ಪೋಸ್ಟ್‌ವೊಂದನ್ನ ಹಂಚಿಕೊಂಡಿದ್ದಾರೆ. ನಾನು ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಬ್ಯಾಗಿ ಬ್ಲೂ ಧರಿಸಿ 14 ವರ್ಷಗಳಾಗಿವೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈ ಪ್ರಯಾಣವು ನನ್ನನ್ನು ಇಷ್ಟು ದೊಡ್ಡ ಮಟ್ಟಕ್ಕೆ ತಂದು ನಿಲ್ಲಿಸುತ್ತದೆ ಅಂತ ಎಂದಿಗೂ ಊಹಿಸಿರಲಿಲ್ಲ. ಅದು ನನ್ನನ್ನು ಪರೀಕ್ಷಿಸಿತು, ನನ್ನನ್ನು ರೂಪಿಸಿತು ಮತ್ತು ನನಗೆ ಪಾಠಗಳನ್ನು ಕಲಿಸಿತು. ನಾನು ಯಾವಾಗಲೂ ನನ್ನ ಟೆಸ್ಟ್ ವೃತ್ತಿಜೀವನವನ್ನು ಸಂತೋಷದಿಂದ ನೋಡುತ್ತೇನೆ.

ನಾನು ಈ ಸ್ವರೂಪದ ದೂರ ಸರಿಯುವುದು ಸುಲಭದ ಮಾತಲ್ಲ, ಆದ್ರೆ ಇದು ಸೂಕ್ತ ಸಮಯ. ಟೆಸ್ಟ್ ಗಾಗಿ ನಾನು ಶಕ್ತಿ ಮೀರಿ ಪ್ರಯತ್ನಿಸಿದ್ದೇನೆ. ಹಾಗಾಗಿ ನಿರೀಕ್ಷೆಗಿಂತ ಹೆಚ್ಚಿನದ್ದನ್ನು ಅದು ನನಗೆ ಹಿಂತಿರುಗಿಸಿದೆ. ನಾನು ಜನರಿಗಾಗಿ ಮೈದಾನಕ್ಕಿಳಿದಾಗ ದಾರಿಯುದ್ದಕ್ಕೂ ನನ್ನನ್ನು ನೋಡುವಂತೆ ಮಾಡಿದ ಪ್ರತಿಯೊಬ್ಬ ಅಭಿಮಾನಿಗಳು ಕೃತಜ್ಞತೆ ಸಲ್ಲಿಸುತ್ತೇನೆ? ನಾನು ಹೊರಡುತ್ತಿದ್ದೇನೆ ಎಂದು ಭಾವುಕರಾಗಿ ಬರೆದುಕೊಂಡಿದ್ದಾರೆ.

## ಭಾರತದ 553 ಡ್ರೋನ್‌ಗಳನ್ನು ಹೊಡೆದುರುಳಿಸಿದೆಯೇ ಪಾಕಿಸ್ತಾನ?

# ವೈರಲ್ ಪಟ್ಟಿಯ ಸತ್ಯಾಂಶ ಏನು?

**ಬೆಂಗಳೂರು:** ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಭಾರತವು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸುವ ಮೂಲಕ ಪಾಕಿಸ್ತಾನದಲ್ಲಿನ ಭಯೋತ್ಪಾದಕ ಅಡಗುತಾಣಗಳನ್ನು ನಾಶಪಡಿಸಿದೆ. ಇದರ ಬೆನ್ನಲ್ಲೇ ಪಾಕಿಸ್ತಾನ ಡ್ರೋನ್‌ಗಳನ್ನು ಕಳುಹಿಸಿ ಭಾರತದ ಮೇಲೆ ದಾಳಿ ಮಾಡಲು ಪ್ರಯತ್ನಿಸಿತು. ಆದರೆ, ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಪಾಕಿಸ್ತಾನದ ಡ್ರೋನ್‌ಗಳು ಮತ್ತು ಕೆಲವು ಕ್ಷಿಪಣಿಗಳು ಕೆಳಕ್ಕೆ ಅಪ್ಪಳಿಸುವ ಮೊದಲೇ ಅವುಗಳನ್ನು ಮಧ್ಯದಲ್ಲೇ ತಡೆಹಿಡಿಯಿತು ತಕ್ಕ ಉತ್ತರ ನೀಡುತ್ತಿದೆ. ಏತನ್ಮಧ್ಯೆ, ಸಾಮಾಜಿಕ ಮಾಧ್ಯಮ ವೇದಿಕೆಗಳು ನಕಲಿ ಸುದ್ದಿಗಳಿಂದ ತುಂಬಿ ತುಳುಕುತ್ತಿವೆ. ವಿವಿಧ ರೀತಿಯ ನಕಲಿ ಹಕ್ಕುಗಳನ್ನು ವೈರಲ್ ಆಗುತ್ತಿದೆ.




**ವೈರಲ್ ಆಗುತ್ತಿದೆ ಇನ್ಫೋಗ್ರಾಫಿಕ್:** ಅಂತರರಾಷ್ಟ್ರೀಯ ಸುದ್ದಿ ವಾಹಿನಿ ಸಿಎನ್‌ಎನ್‌ನ ಲೋಗೋ ಹೊಂದಿರುವ ಇನ್ಫೋಗ್ರಾಫಿಕ್ ಒಂದು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಇದನ್ನು ಭಾರತ ಸರ್ಕಾರದ ಪತ್ರಿಕಾ ಮಾಹಿತಿ ಬ್ಯೂರೋ ಸತ್ಯ ಪರಿಶೀಲಿಸಿದೆ. ಪಿಐಬಿಯ ಫ್ಯಾಕ್ಟ್ ಚೆಕ್‌ನಲ್ಲಿ, ಈ ಇನ್ಫೋಗ್ರಾಫಿಕ್ ನಕಲಿ ಎಂದು ಖಚಿತವಾಗಿ ಕಂಡುಬಂದಿದೆ.

**ಈ ಇನ್ಫೋಗ್ರಾಫಿಕ್ ಸಿಎನ್‌ಎನ್ ಹಂಚಿಕೊಂಡಿಲ್ಲ:** ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ನಕಲಿ ಸುದ್ದಿಗಳನ್ನು ಹರಡುವುದು ಪ್ರಚಾರ ಮಾಡುವುದರ ಭಾಗವಾಗಿದೆ ಎಂದು ಪಿಐಬಿ ಹೇಳಿದೆ. ಅಂತರರಾಷ್ಟ್ರೀಯ ಸುದ್ದಿ ವಾಹಿನಿ ಸಿಎನ್ ಎನ್ ಈ ರೀತಿಯ ಯಾವುದೇ ಸ್ಟೋರಿ ಅಥವಾ ಇನ್ಫೋಗ್ರಾಫಿಕ್ ಅನ್ನು ಎಂದಿಗೂ ಪ್ರಸಾರ ಮಾಡಿಲ್ಲ. ಇದರೊಂದಿಗೆ, ಪಿಐಬಿ ಫ್ಯಾಕ್ಟ್ ಚೆಕ್ ಇಂಡಿಯಾ ಫೈಟ್ಸ್ ಪ್ರೊಪಗಂಡಾ ಎಂಬ ಹ್ಯಾಶ್‌ಟ್ಯಾಗ್ ಅನ್ನು ಸಹ ಬಳಸಿದೆ.

**ಈ ವೈರಲ್ ಅಂಕಿಅಂಶಗಳು ನಕಲಿ:** ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿರುವ ಸಿಎನ್ ಎನ್ ಅನ್ನು ಉಲ್ಲೇಖಿಸುವ ಇನ್ಫೋಗ್ರಾಫಿಕ್ ಭಾರತ-ಪಾಕಿಸ್ತಾನ ಸಂಘರ್ಷದ ಕೆಲವು ಅಂಕಿಅಂಶಗಳನ್ನು ತೋರಿಸುತ್ತದೆ. ಈ ಅಂಕಿಅಂಶಗಳು ಸಂಪೂರ್ಣವಾಗಿ ನಕಲಿ ಆಗಿದೆ.

# ಟೇಕ್ವಾಂಡೋ ಸ್ಪರ್ಧೆಯಲ್ಲಿ 2 ಚಿನ್ನ ಗೆದ್ದ ಕನ್ನಡಿಗ ದಕ್ಷಿಣ್ ಸೂರ್ಯ



**ಕೌಲಾಲಂಪುರ್:** ಮಲೇಷ್ಯಾದ ಪ್ಯಾನಸೋನಿಕ್‌ನಲ್ಲಿ ಅಂತಾರಾಷ್ಟ್ರೀಯ ಟೇಕ್ವಾಂಡೋ ಸ್ಪರ್ಧೆಯಲ್ಲಿ ಭಾರತ ತಂಡ ಪ್ರತಿನಿಧಿಸಿದ್ದ ಬೆಂಗಳೂರಿನ ದಕ್ಷಿಣ್ ಸೂರ್ಯ, 2 ಚಿನ್ನ, 1 ಬೆಳ್ಳಿ, 1 ಕಂಚು ಗೆದ್ದು ಅಸಾಧಾರಣ ಸಾಧನೆ ಮಾಡಿದ್ದಾರೆ.

15ರಿಂದ 17 ವರ್ಷದೊಳಗಿನ ವಯೋಮಿತಿಯಲ್ಲಿ 62 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ದಕ್ಷಿಣ್ ಸೂರ್ಯ ಸ್ಪರ್ಧಿಸಿದ್ದ 4 ವಿಭಾಗಗಳಲ್ಲೂ ಪದಕಗಳ ಬೇಟೆಯಾಡಿರೋದು ವಿಶೇಷವಾಗಿದೆ.

ಸ್ಪಾರಿಂಗ್ ವಿಭಾಗದಲ್ಲಿ 1 ಚಿನ್ನ, ಪ್ಯಾಟರ್ನ್ ವಿಭಾಗದಲ್ಲಿ 1 ಚಿನ್ನ, ವಾರಿಯರ್ ಸ್ಪಾರಿಂಗ್ ವಿಭಾಗದಲ್ಲಿ 1 ಬೆಳ್ಳಿ ಹಾಗೂ ವಾರಿಯರ್ ಪ್ಯಾಟರ್ನ್ ವಿಭಾಗದಲ್ಲಿ 1 ಕಂಚಿನ ಪದಕವನ್ನು ದಕ್ಷಿಣ್ ಸೂರ್ಯ ಗಳಿಸಿದ್ದಾರೆ. ಭಾರತ, ಇಂಡೋನೇಷ್ಯಾ, ಬಾಂಗ್ಲಾದೇಶ, ಮ್ಯಾನ್ಮಾರ್, ಸಿರಿಯಾ, ಮಲೇಷ್ಯಾ ಸೇರಿದಂತೆ ವಿವಿಧ ರಾಷ್ಟ್ರಗಳ 1000ಕ್ಕೂ ಹೆಚ್ಚು ಪ್ರತಿನಿಧಿಗಳು ಈ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದರು. ಭಾರತ ತಂಡದಿಂದ ಸುಮಾರು 65ಕ್ಕೂ ಹೆಚ್ಚು ಕ್ರೀಡಾಕೂಟಗಳು ಭಾಗಿಯಾಗಿದ್ದು ವಿಶೇಷ.

ಬೆಂಗಳೂರಿನ ಹೆಬ್ಬಾಳದಲ್ಲಿರೋ ಎನ್‌ಎಫ್‌ಸಿ ತರಬೇತಿದಾರ ಕೆ. ಪವನ್ ಗರಡಿಯಲ್ಲಿ ದಕ್ಷಿಣ್ ಸೂರ್ಯ ಪಳಗಿದ್ದು, ಎನ್‌ಎಫ್‌ಸಿ ವತಿಯಿಂದ 14 ಸ್ಪರ್ಧಿಗಳು ಸ್ಪರ್ಧಿಸಿದ್ದರು. ವೆಂಕಟೇಶ್, ಅಮೃತ, ಹಸೀನಿ ಗೌಡ, ವರ್ಷ ಕುಮಾರ್, ಗರ್ಗಿ ಕೆ. ನಾಯರ್, ಪ್ರಕೃತಿ ಎನ್. ಬಾಣವಾರ, ಪ್ರಣ್ಮಯ ಎನ್. ಬಾಣವಾರ, ಇಕ್‌ಶ್ವಾ ರೆಬ್ಬಾ, ಪ್ರೀತ್, ಹರ್ಷಿತ್ ಸಿಂಗ್, ಅನ್ಯಾ ಸಾಗರ್, ಡಿ.ಸಿ ಸಿದ್ದೇಶ್ ಸ್ಪರ್ಧಿಸಿದ್ದರು. ಎನ್‌ಎಫ್‌ಸಿಯಿಂದಲೇ ಸ್ಪರ್ಧಿಸಿದ್ದ 14 ಸ್ಪರ್ಧಿಗಳು ವಿವಿಧ ವಿಭಾಗಗಳಲ್ಲಿ 25 ಚಿನ್ನ, 11 ಬೆಳ್ಳಿ ಹಾಗೂ 10 ಕಂಚಿನ ಪದಕ ಗಳಿಸಿರೋದು ವಿಶೇಷ.

ಬೆಂಗಳೂರಿನ ಇಂದಿರಾನಗರದಲ್ಲಿರೋ ಸೆವೆನ್ ಸೆನ್ಸ್ ಮಾಂಟೆಸ್ಸರಿ ವಿದ್ಯಾರ್ಥಿಯಾದ ದಕ್ಷಿಣ್ ಸೂರ್ಯ ಪ್ರತಿಭೆಯನ್ನು ಗುರುತಿಸಿದ್ದು ಪ್ರಿನ್ಸಿಪಾಲ್ ರಾಜೇಶ್ವರಿ. ಕಳೆದ 12 ವರ್ಷಗಳಿಂದ ಟೇಕ್ವಾಂಡೋ ತರಬೇತುದಾರರಾಗಿರೋ ಕೆ. ಪವನ್ ಮೂಲಕ ಶಾಲೆಯ ವಿದ್ಯಾರ್ಥಿಗಳಿಗೆ ಟೇಕ್ವಾಂಡೋ ತರಬೇತಿ ಕೊಡಿಸಿ, ಇವತ್ತಿನ ಯಶಸ್ಸಿಗೆ ಕಾರಣವಾಗಿದ್ದಾರೆ.

ದಕ್ಷಿಣ್ ಸೂರ್ಯ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಟೇಕ್ವಾಂಡೋಗೆ ಆಯ್ಕೆಯಾಗಿದ್ದು, ಈ ಹಿಂದೆ ಚೆನ್ನೈ, ಹೈದ್ರಾಬಾದ್, ಕೇರಳ, ಗೋವಾದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿ ಚಿನ್ನ ಹಾಗೂ ಬೆಳ್ಳಿಯ ಪದಕ ಗಳಿಸಿದ್ದಾರೆ. ಇದನ್ನೂ ಓದಿ: ಭಯೋತ್ಪಾದನೆ ವಿರುದ್ಧ ಹೋರಾಡುತ್ತಿರೋ ಭಾರತೀಯ ವೀರ ಯೋಧರಿಗೆ ಜೋಶ್ ಹ್ಯಾಜಲ್‌ವುಡ್ ಸೆಲ್ಯೂಟ್

ಇನ್ನೂ ದಕ್ಷಿಣ್ ಸೂರ್ಯ ಚಿನ್ನಗೆದ್ದ ಸಾಧನೆ ಕುರಿತು ಎನ್‌ಎಫ್‌ಸಿ ಕೋಚ್ ಕೆ. ಪವನ್ ಮಾತನಾಡಿ, ಮಲೇಷ್ಯಾದಲ್ಲಿ ಎನ್‌ಎಫ್‌ಸಿ ಟೀಂ ಸಾಧನೆ ಖುಷಿ ತಂದಿದೆ. 12 ವರ್ಷಗಳ ಸುದೀರ್ಘ ತರಬೇತಿಯ ಶ್ರಮ ಫಲಿಸಿದೆ. ಪುರುಷ ಕ್ರೀಡಾಪಟುಗಳ ಜೊತೆಗೆ ಮಹಿಳಾ ಪಟುಗಳ ಸಾಧನೆ ಹೆಚ್ಚು ಹರ್ಷ. ಪ್ರತಿಯೊಬ್ಬರೂ ಈ ಗೌರವಕ್ಕೆ ಅರ್ಹರು ಅಂತ ಶ್ಲಾಘಿಸಿದ್ದಾರೆ.

ಸೆವೆನ್ಸ್ ಸೆನ್ಸ್ ಮಾಂಟೆಸ್ಸರಿ ಪ್ರಿನ್ಸಿಪಾಲ್ ರಾಜೇಶ್ವರಿ ಮಾತನಾಡಿ, ದಕ್ಷಿಣ್ ಸೂರ್ಯ ಸಾಧನೆ ನಮ್ಮ ಶಾಲೆಗೆ ಹರ್ಷ ತಂದಿದೆ. ದಕ್ಷಿಣ್ ಈ ಗೌರವಕ್ಕೆ ಅರ್ಹ ವಿದ್ಯಾರ್ಥಿ. ಅವನ ಹಾರ್ಡ್ ವರ್ಕ್ ಫಲ ನೀಡಿದೆ, ಅವನು ಇನ್ನಷ್ಟು ಪದಕಗಳನ್ನು ಗೆಲ್ಲುವಂತಾಗಲಿ ಎಂದು ಹಾರೈಸಿದ್ದಾರೆ.

## ಕೌಂಟ್ ಮಾಡ್ತಾ ಇರಿ, ಇರೋದು ಮೂರೇ ವರ್ಷ!

# ಡಿಕೆಶಿ ನಿಖಿಲ್ ಕುಮಾರ್‌ಸ್ವಾಮಿ ಟಾಂಗ್

**ರಾಮನಗರ:** ಸಿಎಂ ಡಿಕೆ ಶಿವಕುಮಾರ್ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡ ಫ್ಯಾಮಿಲಿ ನಡುವೆ ಟಾಕ್ ವಾರ್ ಮುಂದುವರಿದಿದೆ. ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಡಿಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ರಾಮನಗರಕ್ಕೆ ಕುಮಾರಸ್ವಾಮಿ ಯಾವುದೇ ಕೊಡುಗೆ ನೀಡಿಲ್ಲ ಎಂದಿದ್ದ ಡಿಕೆ ಶಿವಕುಮಾರ್‌ಗೆ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.



ಕುಮಾರಣ್ಣನ ಕೊಡುಗೆ ಏನಿಲ್ಲ-ಡಿಕೆಶಿ

ನಿಖಿಲ್ ಕುಮಾರಸ್ವಾಮಿ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತಿಗೆ ಟಾಂಗ್ ಕೊಟ್ಟಿದ್ದಾರೆ. ಅಂಬೇಡ್ಕರ್ ಜಯಂತಿಯಂದು ರಾಮನಗರದಲ್ಲಿ ಮಾತನಾಡಿದ್ದ ಡಿಕೆಶಿ, ರಾಮನಗರಕ್ಕೆ ಕುಮಾರಸ್ವಾಮಿ ಕೊಡುಗೆ ಏನು ಇಲ್ಲ ಎಂದಿದ್ರು. ಈ ಹೇಳಿಕೆಗೆ ನಿಖಿಲ್ ಚನ್ನಪಟ್ಟಣದ ಅಮ್ಮಳ್ಳಿದೊಡ್ಡಿ ಗ್ರಾಮದಲ್ಲಿ ಪ್ರತಿಕ್ರಿಯಿಸಿದರು.

**ನಿಖಿಲ್ ಕುಮಾರ್‌ಸ್ವಾಮಿ ವಾಗ್ದಾಳಿ:** ಚನ್ನಪಟ್ಟಣದಲ್ಲಿ ಮಾತಾಡಿದ ನಿಖಿಲ್ ಕುಮಾರಸ್ವಾಮಿ, ಜಿಲ್ಲೆಯಲ್ಲಿ ಜೆಡಿಎಸ್ ಸದೃಢವಾಗಿದೆ. ಹಾಗಾಗಿ ಡಿಕೆಶಿ ನಮ್ಮ ಬಗ್ಗೆ ಮಾತನಾಡದೇ ಇನ್ಯಾರ ಬಗ್ಗೆ ಮಾತಾಡ್ತಾರೆ. ಯಾವ ಕಾಲಘಟ್ಟದಲ್ಲಿ ಯಾವ ನಿರ್ಧಾರ ಮಾಡಬೇಕೋ ಜನರು ಮಾಡುತ್ತಾರೆ. ದೇವೇಗೌಡರು ಮತ್ತು ಕುಮಾರಣ್ಣ ಜಿಲ್ಲೆಗೆ ಕೆಲಸ ಮಾಡಿದ್ದಾರೆ. ಅದು ಜನರಿಗೂ ಸಹ ಗೊತ್ತಿದೆ ಎಂದ್ರು.

**ಕೆಲಸ ಮಾಡಿ ನಮ್ಮ ಮೇಲೆ ಗೂಬೆ ಕೂರಿಸಬೇಡಿ:** ನಿಮ್ಮದೇ ಸರ್ಕಾರ ಇದೆ ಅಂತ ಮಾತಾಡುತ್ತಿದ್ದೀರಾ. ಆದರೆ ಕಾಲಚಕ್ರ ಉರುಳುತ್ತದೆ. ಈಗ ನೀವು ಅಧಿಕಾರದಲ್ಲಿ ಇದ್ದೀರಿ, ಜನರಿಗಾಗಿ ಕೆಲಸ ಮಾಡಿ ನಮ್ಮ ಮೇಲೆ ಗೂಬೆ ಕೂರಿಸಬೇಡಿ. ಇರೋದು ಇನ್ನೂ 2-3 ವರ್ಷ ಮಾತ್ರ, ನೋಡೋಣ ಏನು ಮಾಡುತ್ತೀರಿ ಎಂದು ನಿಖಿಲ್ ಟಾಂಗ್ ಕೊಟ್ರು.

**ಈ ಜಿಲ್ಲೆ ಬಿಟ್ಟು ನಾವು ಎಲ್ಲೂ ಹೋಗಿಲ್ಲ:** ಜನರಿಗೆ ಸೈಟ್ ಕೊಡಲಿ, ಕೇವಲ ಮಾತಾಗಿ ಉಳಿಯದೇ, ಕಡತಗಳಲ್ಲಿ ಮಾಡಿ, ಮಾತಿನಂತೆ ನಡೆದುಕೊಳ್ಳಲಿ. ಈ ಜಿಲ್ಲೆ ಬಿಟ್ಟು ನಾವು ಎಲ್ಲೂ ಹೋಗಿಲ್ಲ, ಇಲ್ಲಿಯೇ ಇದ್ದೇವೆ, ಅದಕ್ಕಾಗಿ ಬಂದಿರೋದು. ಇನ್ನು 3 ವರ್ಷ ಮಾತ್ರ, ಕೌಂಟ್ ಮಾಡಿಕೊಳ್ಳಿ. ಇವತ್ತು ಮೇಲಿದ್ದಾರೆ, ನಾಳೆ ಕೆಳಗೆ ಬರ್ತಾರೆ. ಕಾಲಚಕ್ರ ಹೀಗೆ ಇರಲ್ಲ, ಜನರು ತೋರಿಸುತ್ತಾರೆ. ಎಂದು ನಿಖಿಲ್ ಹೇಳಿದ್ದಾರೆ.

ನಿಖಿಲ್ ಕುಮಾರಸ್ವಾಮಿ ಅಮ್ಮಳ್ಳಿದೊಡ್ಡಿ ಗ್ರಾಮದಲ್ಲಿ ನಡೆದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ತಿರುಗೇಟು ನೀಡಿದ್ರು.

Printed, Published & Owned by N.Venugopal Krishna, Printed at Dashapramathi Mudranalaya, No.45, 4th Cross, Srigandhadakaval, Bengaluru-560079. Published at No.45, 4th Cross, Srigandhadakaval, Bengaluru-560079. Editor: N.Venugopal Krishna, Mobile No.+91 94835 89085, email: sanjemugilu@gmail.com, RNI No.KARKAN/2002/08054